# ದಿ ನ್ಯಾಷನಲ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

**ಆಡಳಿತ ಕಛೇರಿ: 73/1, ಗಾಂಧಿ ಬಜಾರ್ ಮುಖ್ಯ ರಸ್ತೆ, ಬೆಂಗಳೂರು – 560 004**

Virtual MEETING




## 2020–21ನೇ ಸಾಲಿನ 47ನೇ ವಾರ್ಷಿಕ ವರದಿ

**ದಿನಾಂಕ: 10–10–2021, ಭಾನುವಾರ, ಬೆಳಗ್ಗೆ 10ಕ್ಕೆ**

# ದಿ ನ್ಯಾಷನಲ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಛೇರಿ: 73/1, ಗಾಂಧಿ ಬಜಾರ್ ಮುಖ್ಯ ರಸ್ತೆ, ಬೆಂಗಳೂರು – 560 004

## ಬ್ಯಾಂಕಿನ ಆಡಳಿತ ಮಂಡಲಿ



ದಿ॥ ಟಿ. ಆರ್. ಶಾಮಣ್ಣ
ಸಂಸ್ಥಾಪಕ ಪ್ರಧಾನ ಪ್ರವರ್ತಕರು



ದಿ॥ ವೈ.ವಿ. ಕೇಶವಮೂರ್ತಿ
ಸಂಸ್ಥಾಪಕ ಪ್ರಧಾನ ಸಂಚಾಲಕರು



ಹೆಚ್. ಸಿ. ಕೃಷ್ಣ
ಅಧ್ಯಕ್ಷರು



ಬಿ. ಎಸ್. ಸತ್ಯನಾರಾಯಣ
ಉಪಾಧ್ಯಕ್ಷರು



ಪಿ. ಕೃಷ್ಣನ್
ನಿರ್ದೇಶಕರು



ಹೆಚ್. ಆರ್. ಸುರೇಶ್
ನಿರ್ದೇಶಕರು



ಛಾಯಾಪತಿ ಕೆ. ಎನ್
ನಿರ್ದೇಶಕರು



ವೈ. ವಿ. ನರಸಿಂಹ ಮೂರ್ತಿ
ನಿರ್ದೇಶಕರು



ಎ. ಎಸ್. ವಿಜಯ್ ಕುಮಾರ್
ನಿರ್ದೇಶಕರು



ಡಾ॥ ಎಂ. ಎನ್. ಮಮತ
ನಿರ್ದೇಶಕರು



ಬಿ. ಎಂ. ದೇವರಾಜು
ನಿರ್ದೇಶಕರು



ವೈ. ಜಿ. ರಮೇಶ್
ನಿರ್ದೇಶಕರು



ದತ್ತಾತ್ರಿ. ಎ. ಆರ್
ನಿರ್ದೇಶಕರು



ರಂಗನಾಥಯ್ಯ. ಕೆ
ನಿರ್ದೇಶಕರು



ಮಾನಸ ಉಡುಪ ಎನ್. ಎಸ್
ನಿರ್ದೇಶಕರು



ಸುರೇಶ್ ಕುಮಾರ್ ಟಿ. ಎಸ್
ನಿರ್ದೇಶಕರು



ಸುರೇಶ್ ಕಶ್ಯಪ್
ಸಹಕಾರಿ ಅನುಭವಿ ನಿರ್ದೇಶಕರು



ನಾಗರಾಜ ಎಸ್
ಸಹಕಾರಿ ಅನುಭವಿ ನಿರ್ದೇಶಕರು



ಸುರೇಶ್ ಎಂ. ಜಿ.
ಮುಖ್ಯ ಕಾರ್ಯ ನಿರ್ವಹಣಾಧಿಕಾರಿ
(30–04–2021 ರವರೆಗೆ)



ರೂಪ ವಿ. ಎಸ್
ಮುಖ್ಯ ಕಾರ್ಯ ನಿರ್ವಹಣಾಧಿಕಾರಿ
(01–05–2021 ರಿಂದ)

# ಅಧ್ಯಕ್ಷರ ಮನದ ಮಾತು

ಆತ್ಮೀಯ ಸದಸ್ಯರೇ,



ಹೆಚ್. ಸಿ. ಕೃಷ್ಣ
ಅಧ್ಯಕ್ಷರು

ದಿನಾಂಕ 10.10.2021, ಭಾನುವಾರ ದಂದು ಬೆಳಿಗ್ಗೆ 10.00 ಘಂಟೆಗೆ ನಡೆಯುವ 47ನೇ ವಾರ್ಷಿಕ ಸಾಮಾನ್ಯ ಸಭೆಗೆ ತಮ್ಮೆಲ್ಲರನ್ನೂ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಿದ್ದೇನೆ. ಸರ್ಕಾರದ ಮಾರ್ಗಸೂಚಿಯಂತೆ, ಸದಸ್ಯರ ಕ್ಷೇಮದ ದೃಷ್ಟಿಯಿಂದ ಈ ಬಾರಿಯೂ Virtual ಸಭೆ ನಡೆಸಬೇಕಾಗಿದ್ದು ಸರ್ಕಾರದ ನಿಯಮಾವಳಿಗನುಸಾರವಾಗಿ ಹೆಚ್ಚಿನ ಸದಸ್ಯರು ಭೌತಿಕವಾಗಿ ಸಭೆ ಸೇರುವುದಕ್ಕೆ ನಿರ್ಬಂಧ ಇರುವ ಹಿನ್ನಲೆಯಲ್ಲಿ Virtual ಸಭೆಯನ್ನು ಹಮ್ಮಿಕೊಂಡಿದ್ದು, login ಆದ ಎಲ್ಲಾ ಸದಸ್ಯರನ್ನು ಆಡಳಿತ ಮಂಡಲಿಯ ಪರವಾಗಿ ಮತ್ತು ವೈಯಕ್ತಿಕವಾಗಿ ಸ್ವಾಗತಿಸುತ್ತೇನೆ.

ಪ್ರಾತಃಸ್ಮರಣೀಯರಾದ ದಿವಂಗತ ಶ್ರೀ ಟಿ.ಆರ್.ಶಾಮಣ್ಣ, ಶ್ರೀ ವೈ.ವಿ.ಕೇಶವಮೂರ್ತಿ, ಶ್ರೀ ವಿ.ಎಸ್.ಕೃಷ್ಣಯ್ಯರ್ ಹಾಗೂ ಅನೇಕ ಮಹನೀಯರಿಂದ ಸ್ಥಾಪಿಸಲ್ಪಟ್ಟ ಬ್ಯಾಂಕ್ ನಮ್ಮ ರಾಜ್ಯದಲ್ಲಿನ ಪ್ರತಿಷ್ಠಿತ ಸಹಕಾರಿ ಬ್ಯಾಂಕುಗಳಲ್ಲೊಂದಾಗಿದೆ ಹಾಗೂ ರಾಜ್ಯದ ದೊಡ್ಡ ಬ್ಯಾಂಕುಗಳಲ್ಲೊಂದಾಗಿದೆ. ಇಂತಹ ಬೃಹತ್ ಸಂಸ್ಥೆಯ ಸ್ಥಾಪನೆಗೆ ಕಾರಣರಾದ ಈ ದಿವ್ಯತ್ರಯರಿಗೆ ತಮ್ಮೆಲ್ಲರ ಪರವಾಗಿ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಸನ್ಮಾನ್ಯ ಸದಸ್ಯರೇ, ಇಲ್ಲಿಯವರೆಗೂ ತಾವುಗಳು ಬ್ಯಾಂಕಿಗೆ ನೀಡುತ್ತಾ ಬಂದಿರುವ ಸಹಕಾರವನ್ನು ಸ್ಮರಿಸುತ್ತಾ, ಇದೇ ಪ್ರೀತಿ, ವಿಶ್ವಾಸ ಮುಂದುವರೆಸಿಕೊಂಡು, ಈ ನಿಮ್ಮ ಬ್ಯಾಂಕು ಅತ್ಯುನ್ನತ ಮಟ್ಟಕ್ಕೆ ಮತ್ತೆ ಕೊಂಡೊಯ್ಯುವುದಕ್ಕೆ ಬದ್ಧರಾಗಿರುವ ಹಾಗೂ ಕಾಯಾ, ವಾಚಾ ಮತ್ತು ಮನಸಾ ಪ್ರಯತ್ನಶೀಲರಾಗಿರುವ ಆಡಳಿತ ಮಂಡಲಿ, ಸಿಬ್ಬಂದಿ ವರ್ಗಕ್ಕೆ ಪ್ರೋತ್ಸಾಹ ಮತ್ತು ಸಹಕಾರ ನೀಡಬೇಕೆಂದು ಕಳಕಳಿಯ ಪ್ರಾರ್ಥನೆ.

ವಿಶ್ವದಾದ್ಯಂತ ಕೋವಿಡ್–19 ಸೋಂಕಿನಿಂದ ಜನರು ಬಳಲುತ್ತಿದ್ದು, ಹಲವರು ಉದ್ಯೋಗವನ್ನು ಕಳೆದುಕೊಂಡಿದ್ದು ದೇಶವು ಆರ್ಥಿಕ ಸಂಕಷ್ಟವನ್ನು ಅನುಭವಿಸುತ್ತಿದ್ದು ಎಲ್ಲಾ ಆರ್ಥಿಕ ಚಟುವಟಿಕೆಗಳು ಕುಂಠಿತವಾಗಿವೆ. ಜನಗಳ ಜೀವನ ಶೈಲಿಯಲ್ಲಿ ವ್ಯತ್ಯಾಸವಾಗಿದೆ. ಈ ಪರಿಸ್ಥಿತಿಯಲ್ಲಿ ಸದಸ್ಯರು ಸಾಮಾಜಿಕ ಅಂತರ ಕಾಪಾಡಿಕೊಂಡು, ಲಸಿಕೆ ಪಡೆದು ಮುಖಕವಚ ಧರಿಸಿ, ಆರೋಗ್ಯವನ್ನು ಕಾಪಾಡಿಕೊಂಡು, ನಮ್ಮ ರಾಷ್ಟ್ರವನ್ನು ಕೋವಿಡ್‌ನಿಂದ ಮುಕ್ತಗೊಳಿಸೋಣ. ಸಾಲಗಾರರು ಈ ಸಂದರ್ಭದಲ್ಲಿ ಮಾಸಿಕ ಕಂತುಗಳನ್ನು ಕಟ್ಟುವುದಕ್ಕೂ ಕಷ್ಟಪಡುತ್ತಿರುವ ಸಂದರ್ಭದಲ್ಲಿ, ಭಾರತೀಯ ರಿಸರ್ವ್ ಬ್ಯಾಂಕ್‌ನ ಮಾರ್ಗಸೂಚಿಯನ್ನು ಅನುಸರಿಸಿ, ಭಾರತ ಸರ್ಕಾರ ಘೋಷಿಸಿದ Moratorium, Restructuring of Accounts, ಹೀಗೆ ಎಲ್ಲಾ ರೀತಿಯ ಸಹಾಯ ಹಸ್ತವನ್ನು ನೀಡಲಾಗಿದೆ. ಸಾಲಗಾರರು ದಯಮಾಡಿ ಇನ್ನು ಮುಂದೆ ತಮ್ಮ ಜವಾಬ್ದಾರಿಯನ್ನು ಅರಿತು ಮರುಪಾವತಿಗೆ ಸಿದ್ಧರಾಗಲು ಈ ಮೂಲಕ ಕೋರುತ್ತೇನೆ. ಈ ಸಂದರ್ಭದಲ್ಲೂ ಅನುತ್ಪಾದಕ ಸಾಲಗಳನ್ನು ಇಳಿಸಲು ಕ್ರಮ ನಿರ್ವಹಿಸಿ, ಮುಂದಿನ ಸಾಲಿನಲ್ಲಿ ನಿಷ್ಕ್ರಿಯ ಆಸ್ತಿ ಪ್ರಮಾಣವನ್ನು ಗಣನೀಯವಾಗಿ ಇಳಿಸಲು ಸರ್ವ ಪ್ರಯತ್ನ ಮಾಡುತ್ತೇವೆ.

ಹಿಂದಿನ ಸಾಲಿನಲ್ಲಿ ಹಾಗೂ ಹಲವು ತಿಂಗಳ ಹಿಂದೆ ಬೆಂಗಳೂರು ನಗರದ ಕೆಲವು ಬ್ಯಾಂಕುಗಳ ವೈಫಲ್ಯ ಹಾಗೂ ದೃಶ್ಯ ಮಾಧ್ಯಮಗಳಲ್ಲಿ ಸಹಕಾರ ಬ್ಯಾಂಕುಗಳ ಬಗ್ಗೆ ಸತತ ಅಪಪ್ರಚಾರದ ಸುದ್ದಿ ಪ್ರಸಾರದಿಂದಾಗಿ ನಮ್ಮ ಸಹಕಾರಿ ಬ್ಯಾಂಕುಗಳು ಇದರ ಪರಿಣಾಮವನ್ನು ಅನುಭವಿಸಿದೆ. ಆದರೂ ನಮ್ಮ ಬ್ಯಾಂಕು ನಿಮ್ಮೆಲ್ಲರ ಪ್ರೀತಿ, ವಿಶ್ವಾಸ ನಂಬಿಕೆ ಉಳಿಸಿಕೊಂಡು ಬಂದಿದೆ. 29 ಜೂನ್, 2020 ರಂದು ಕೇಂದ್ರ ಸರ್ಕಾರವು ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಗೆ ತಿದ್ದುಪಡಿ ತಂದು ಪಟ್ಟಣ ಸಹಕಾರ ಬ್ಯಾಂಕುಗಳನ್ನು ಭಾರತೀಯ ರಿಸರ್ವ್

ಬ್ಯಾಂಕಿನ ಅಡಿಯಲ್ಲಿ ತರಲು ಅವಕಾಶ ಕಲ್ಪಿಸಿತು. ಇದು ಪಟ್ಟಣ ಸಹಕಾರಿ ಬ್ಯಾಂಕುಗಳ ಮೇಲೆ ಬ್ಯಾಂಕಿನ ಎಲ್ಲಾ ಗ್ರಾಹಕರಿಗೆ ವಿಶ್ವಾಸವನ್ನು ಹೆಚ್ಚಿಸಿದೆ.

ಬ್ಯಾಂಕಿನ ಜೆ.ಪಿ.ನಗರದ ನಿವೇಶನದಲ್ಲಿ ನೂತನ ಕಟ್ಟಡ ನಿರ್ಮಾಣ ಕಾರ್ಯಾರಂಭಗೊಂಡಿದೆ ಹಾಗೂ ಸದಾಶಿವನಗರ ಶಾಖೆಯನ್ನು ಎಮ್.ಎಸ್.ರಾಮಯ್ಯ ಆಸ್ಪತ್ರೆಯ ಬಳಿ ವಿನಿಮಯ (Exchange) ರೂಪದಲ್ಲಿ ಸ್ಥಳಾಂತರಿಸುವ ನಿಟ್ಟಿನಲ್ಲಿ ಗುದ್ದಲಿ ಪೂಜೆ ನೆರವೇರಿಸಿದ್ದು ನಿರ್ಮಾಣ ಸಂಪೂರ್ಣಗೊಂಡ ಕೂಡಲೇ ಸ್ಥಳಾಂತರ ಮಾಡಲಾಗುವುದು.

ಆಧುನಿಕ ಬೆಳವಣಿಗೆಗೆ ತಕ್ಕಂತೆ ಗ್ರಾಹಕರಿಗೆ ಅಗತ್ಯವಾದ ಸೇವೆಗಳನ್ನು ನೀಡಲು ನಮ್ಮ ಬ್ಯಾಂಕು ಸದಾ ಮುಂಚೂಣಿಯಲ್ಲಿದೆ. ಸೇವಾ ಮನೋಭಾವ ಹೊಂದಿರುವ ನಮ್ಮ ನಿರ್ದೇಶಕ ಮಂಡಲಿಯ ಎಲ್ಲಾ ಸದಸ್ಯರು ಬ್ಯಾಂಕಿನ ಎಲ್ಲಾ ವರ್ಗದ ಗ್ರಾಹಕರ ಅನುಕೂಲಕ್ಕಾಗಿ ಹಲವಾರು ಯೋಜನೆಗಳನ್ನು ಕೈಗೊಂಡು ಅದರಲ್ಲಿ ಏಕ ಗವಾಕ್ಷಿ ವ್ಯವಸ್ಥೆಯನ್ನು ಮೊದಲು ಬನಶಂಕರಿ 3ನೇ ಹಂತದ ಶಾಖೆಯಲ್ಲಿ ಪ್ರಾರಂಭಿಸಿದ್ದು ನಂತರ ಗ್ರಾಹಕರಿಗೆ ಅನುಕೂಲವಾಗಲೆಂದು ಗಾಂಧಿ ಬಜಾರ್ ಶಾಖೆಯಲ್ಲಿ ಪ್ರಾರಂಭಿಸಲಾಗಿದೆ. ದಿನದ 24 ಘಂಟೆಯ ಯಾವುದೇ ಸಮಯದಲ್ಲೂ ಹಣ ಪಾವತಿ ಹಾಗೂ ಹಣ ವಾಪಸಾತಿಗೆ ಹಣ ಮರು ಬಳಕೆ ಯಂತ್ರವನ್ನು ಗಾಂಧಿ ಬಜಾರ್, ಜಯನಗರ, ಬನಶಂಕರಿ 2ನೇ ಹಂತ ಹಾಗೂ ಮೈಸೂರು ಶಾಖೆಗಳಲ್ಲಿಯೂ ಸಹ ಸ್ಥಾಪಿಸಿದ್ದು ಹಲವಾರು ಗ್ರಾಹಕರು ಈ ಕ್ರಮದ ಬಗೆಗೆ ಮೆಚ್ಚುಗೆಯನ್ನೂ ವ್ಯಕ್ತಪಡಿಸಿದ್ದಾರೆ. ತಮ್ಮ ದೈನಂದಿನ ವಹಿವಾಟಿಗೆ ಯಂತ್ರದ ಸದುಪಯೋಗ ಪಡೆದುಕೊಳ್ಳಿ ಎಂದು ಎಲ್ಲಾ ಗ್ರಾಹಕರಲ್ಲಿ ವಿನಂತಿಸುವೆ.

ಈ ಎಲ್ಲಾ ಅಡೆತಡೆಗಳ ನಡುವೆಯೂ ಬ್ಯಾಂಕು ರೂ.1679.03 ಕೋಟಿ ಠೇವಣಿ, ರೂ.1128.01 ಕೋಟಿ ಸಾಲಗಳನ್ನು ಹೊಂದಿದ್ದು ಬ್ಯಾಂಕಿನ ಠೇವಣಿ ಸಾಲಗಳ ಅನುಪಾತ ಶೇ.67.18 ರಷ್ಟಿರುತ್ತದೆ. ಹೂಡಿಕೆಗಳು ರೂ.705.80 ಕೋಟಿ, ದುಡಿಯುವ ಬಂಡವಾಳ ರೂ. 1965.88 ಕೋಟಿ ಹಾಗೂ ಆಪದ್ಧನ ಮತ್ತು ನಿಧಿಗಳು ರೂ.225.76 ಕೋಟಿಗಳಷ್ಟಿರುತ್ತದೆ.

ಈ ಎಲ್ಲಾ ಕಾರ್ಯಪ್ರವೃತ್ತಿಗಳೊಂದಿಗೆ ಪ್ರಾಮಾಣಿಕ ಪ್ರಯತ್ನ, ನಿರಂತರ ಶ್ರಮ ಹಾಗೂ ಧೃಡ ಹೆಜ್ಜೆಯೊಂದಿಗೆ ನಮ್ಮ ಬ್ಯಾಂಕನ್ನು ಮುನ್ನಡೆಸಿಕೊಂಡು ಹೋಗಲು ಪ್ರಯತ್ನಶೀಲರಾಗಿರುತ್ತೇವೆಂದು ನಾನು ನಮ್ಮ ಎಲ್ಲಾ ನಿರ್ದೇಶಕ ಮಂಡಲಿಯ ಸದಸ್ಯರ ಪರವಾಗಿ ಹಾಗೂ ನಮ್ಮ ಸಿಬ್ಬಂದಿಗಳ ಪರವಾಗಿ ಪ್ರಮಾಣಪೂರ್ವಕವಾಗಿ ಘೋಷಿಸಲು ಇಚ್ಛಿಸುತ್ತೇನೆ.

ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿರುವ ಆಡಳಿತ ಮಂಡಲಿ, ಹಿರಿಯ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗ ಮತ್ತು ಉತ್ತಮ ಸಲಹೆ ಸೂಚನೆ ಕೊಟ್ಟು ಸಹಕರಿಸುತ್ತಿರುವ ಸಲಹೆಗಾರರಿಗೂ, ಸದಸ್ಯರಿಗೂ, ಗ್ರಾಹಕರಿಗೂ ಮತ್ತು ಸಹಕಾರ ಸಂಘಗಳ ನಿಬಂಧಕರಿಗೆ, ಭಾರತೀಯ ರಿಸರ್ವ್ ಬ್ಯಾಂಕಿನ ಅಧಿಕಾರಿಗಳಿಗೆ, ಆಂತರಿಕ ಹಾಗೂ ಸನ್ನದು ಲೆಕ್ಕಪರಿಶೋಧಕರಿಗೆ ಹೃತ್ಪೂರ್ವಕವಾಗಿ ಅಭಿವಂದಿಸುತ್ತೇನೆ.

ಇಂತಿ ತಮ್ಮ ವಿಧೇಯ

**ಹೆಚ್.ಸಿ.ಕೃಷ್ಣ**

ಅಧ್ಯಕ್ಷರು

# ದಿ ನ್ಯಾಷನಲ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಛೇರಿ: 73/1, ಗಾಂಧಿ ಬಜಾರ್ ಮುಖ್ಯ ರಸ್ತೆ, ಬೆಂಗಳೂರು – 560 004

# 47ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರ

ಮಾನ್ಯ ಸದಸ್ಯರೇ,

**10 ನೇ ಅಕ್ಟೋಬರ್ 2021** ಭಾನುವಾರ ಬೆಳಿಗ್ಗೆ **10.00** ಘಂಟೆಗೆ ಸರಿಯಾಗಿ ಬ್ಯಾಂಕಿನ 47ನೇ ವಾರ್ಷಿಕ ಸಾಮಾನ್ಯ ಸಭೆಯನ್ನು **"ವರ್ಚ್ಯೂಯಲ್"** ಆಗಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ.ಹೆಚ್.ಸಿ.ಕೃಷ್ಣರವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ವಿಷಯಗಳನ್ನು ಚರ್ಚಿಸಿ ತೀರ್ಮಾನಿಸಲು ಕರೆಯಲಾಗಿದೆ. ಈ ಸಂಬಂಧ ಎಲ್ಲಾ ಸದಸ್ಯರಿಗೆ ಸಕಾಲಕ್ಕೆ ವರ್ಚ್ಯುಯಲ್ ಮೀಟಿಂಗ್‌ನ ಜಾಲತಾಣ www.dreamswebinar.com/nationalcoopbank **ಮೂಲಕ ತಮ್ಮ ಸದಸ್ಯತ್ವ ಸಂಖ್ಯೆಯನ್ನು ನಮೂದಿ**ಸಿ ಸಭೆಯ ಕಾರ್ಯ ಕಲಾಪಗಳಲ್ಲಿ ಭಾಗವಹಿಸಬೇಕಾಗಿ ಪ್ರಾರ್ಥನೆ.

## ವಿಷಯಗಳು

1. ಪ್ರಾರ್ಥನೆ
2. ಸರ್ವ ಸದಸ್ಯರ ಸಭೆಯ ಸೂಚನಾ ಪ್ರಕಟಣೆಯನ್ನು ಓದಿ ದಾಖಲಿಸುವುದು
3. ಅಧ್ಯಕ್ಷರಿಂದ ಸ್ವಾಗತ ಭಾಷಣ
4. 2020–21ನೇ ಸಾಲಿನ ಆಡಳಿತ ಮಂಡಲಿಯ ವಾರ್ಷಿಕ ವರದಿಯನ್ನು ಪರಿಶೀಲಿಸುವುದು ಮತ್ತು 2021–22ನೇ ವರ್ಷದ ಕಾರ್ಯಯೋಜನೆಗೆ ಅನುಮೋದನೆ
5. 2020–21ನೇ ಸಾಲಿನ ಆಡಿಟ್ ಆದ ಲೆಕ್ಕ ಪತ್ರಗಳ ತಃಖ್ತೆ, ಲೆಕ್ಕ ಪರಿಶೋಧನಾ ವರದಿ ಮತ್ತು ಆಡಳಿತ ಮಂಡಲಿಯ ಅನುಪಾಲನಾ ವರದಿಯನ್ನು ಪರಿಶೀಲಿಸಿ ಅಂಗೀಕರಿಸುವುದು
6. 2020–21ನೇ ಸಾಲಿನಲ್ಲಿ ಅಂದಾಜು ಆಯವ್ಯಯಕ್ಕಿಂತ ಹೆಚ್ಚುವರಿ ಆಗಿರುವ ಖರ್ಚನ್ನು ಅನುಮೋದಿಸುವುದು ಮತ್ತು 2021–22ನೇ ಸಾಲಿನ ಅಂದಾಜು ಆಯವ್ಯಯವನ್ನು ಮಂಜೂರು ಮಾಡುವುದು
7. 2020–21ನೇ ಸಾಲಿನ ನಿವ್ವಳ ಲಾಭದ ಹಂಚಿಕೆಯನ್ನು ಅನುಮೋದಿಸುವುದು
8. ಬ್ಯಾಂಕಿನ ನಿರ್ದೇಶಕರು ಮತ್ತು ಅವರ ಸಂಬಂಧಿಕರು ಪಡೆದಿರುವ ಸಾಲಗಳ ಪರಿಶೀಲನೆ
9. ನಿಧಿಗಳ ವಾಸ್ತವಿಕ ಬಳಕೆಯ ಬಗ್ಗೆ ವಿಮರ್ಶೆ
10. ಬ್ಯಾಂಕಿನ ಸದಸ್ಯತ್ವಕ್ಕೆ ಸೇರ್ಪಡೆ ಮತ್ತು ತೆಗೆದು ಹಾಕಿದ ಸದಸ್ಯರ ಕುರಿತು ಟಿಪ್ಪಣಿ
11. ನಿರ್ಣಯಗಳನ್ನು ಅಂಗೀಕರಿಸುವುದು
12. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಬರಬಹುದಾದ ಇತರೆ ವಿಷಯಗಳು

ಕಾರ್ಯಕಾರಿ ಮಂಡಳಿಯ ಅಪ್ಪಣೆಯ ಮೇರೆಗೆ

ಸಹಿ/–

**(ವಿ. ಎಸ್. ರೂಪ)**

ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಬೆಂಗಳೂರು

ದಿನಾಂಕ: 24/09/2021

# THE NATIONAL CO-OPERATIVE BANK LIMITED

Administrative Office: 73/1, Gandhi Bazar Main Road, Bengaluru - 560 004

## 47TH ANNUAL GENERAL MEETING NOTICE

Dear Members,

Notice is hereby given to the members of the Bank that a "**Virtual Meeting**" of the 47th Annual General Meeting of the Bank is convened on Sunday **, the 10 th October 2021 at 10.00 a.m.**, under the Chairmanship of Sri. H.C.Krishna, Chairman of the Bank, to transact the following Agenda. You are requested to attend the Meeting virtually by using the Link www.dreamswebinar.com/nationalcoopbank and Login with your Membership number.

**AGENDA**

1. Invocation
2. Read and record the notice of the Annual General Meeting.
3. Welcome Speech by Chairman.
4. To adopt report of the Board for the year 2020-21 and approve Plan of development for the year 2021-22.
5. To consider and approve the audited Statement of accounts and audit report with replies of the board for the year 2020-21
6. To ratify excess of expenditure over the budget limit for the year 2020-21 and to approve budget for the year 2021-22
7. To approve appropriation of net profit for the year 2020-21
8. To review loans sanctioned to Directors and their relatives.
9. To review actual utilisation of funds.
10. To consider note on admission and termination of members.
11. To adopt resolutions
12. Any other subject with the permission of the Chairman.

By order of the Board
Sd/-
(Rupa V.S.)
Chief Executive Officer

Bengaluru
Date : 24/09/2021

# 47ನೇ ವಾರ್ಷಿಕ ಸಾಮಾನ್ಯ ಸಭೆಯ ವಿಷಯಗಳ ಮೇಲೆ ಸಂಕ್ಷಿಪ್ತ ಟಿಪ್ಪಣಿ

ಆಡಳಿತ ಮಂಡಲಿಯ ವರದಿಯನ್ನು ವಾರ್ಷಿಕ ವರದಿಯಲ್ಲಿ ಮುದ್ರಿಸಿದೆ.

| | |
|---|---|
| **ವಿಷಯ 4:** | 2020–21ನೇ ಸಾಲಿನ ಆಡಳಿತ ಮಂಡಲಿಯ ವಾರ್ಷಿಕ ವರದಿಯನ್ನು ಪರಿಶೀಲಿಸುವುದು ಮತ್ತು 2021–22ನೇ ವರ್ಷದ ಕಾರ್ಯಯೋಜನೆಗೆ ಅನುಮೋದನೆ |

2021–22ನೇ ವರ್ಷದ ಕಾರ್ಯ ಯೋಜನೆ ಈ ಕೆಳಕಂಡಂತಿದೆ

1) ಠೇವಣಿ ಸಾಲಗಳ ಅನುಪಾತದಲ್ಲಿ ಶೇ.65ರಷ್ಟು ನಿಭಾಯಿಸುವುದು.

2) ನಿವ್ವಳ ನಿಷ್ಕ್ರಿಯ ಆಸ್ತಿಯ ಪ್ರಮಾಣ ಶೇ.10ಕ್ಕಿಂತ ಕಡಿಮೆ ಮಾಡುವುದು

3) ನಗದು ರಹಿತ ವ್ಯವಹಾರಕ್ಕೆ ಉತ್ತೇಜಿಸಲು ಜಾಲತಾಣದ ಮೂಲಕ ಸಾಮಾನು/ವಿಮಾನ/ಬಸ್/ರೈಲು/ಸಿನಿಮಾ ಟಿಕೆಟ್ ಖರೀದಿಸಲು, ಬಿಲ್ ಪಾವತಿಸಲು, ಶಿಕ್ಷಣ ಶುಲ್ಕ/ತೆರಿಗೆ ಪಾವತಿಸಲು Chip ಆಧಾರಿತ ರುಪೆ ಕಾರ್ಡ್ (Rupay Card) ಬಳಕೆಗೆ ಹೆಚ್ಚು ಉತ್ತೇಜನ ನೀಡುವುದು.

4) ಕೇಂದ್ರೀಕೃತ ಕೆ.ವೈ.ಸಿ. ಮಾಹಿತಿ ಸಂಗ್ರಹಣೆ: ಕೇಂದ್ರ ಸರ್ಕಾರ/ಭಾರತೀಯ ರಿಸರ್ವ್ ಬ್ಯಾಂಕ್ ಕೇಂದ್ರೀಕೃತ ಕೆ.ವೈ.ಸಿ. ನಿಯಮಾವಳಿ ರಚಿಸಿದ್ದು, ಅದರನ್ವಯ ಗ್ರಾಹಕರ ಮಾಹಿತಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕಾಗಿದ್ದು, ಈ ನೀತಿಯನ್ನು ಅನುಷ್ಠಾನಕ್ಕೆ ತರುವುದು

5) ಆಧಾರ್ ಮಾಹಿತಿ ಸಂಗ್ರಹಣೆ: ಆಧಾರ್ ಸಂಖ್ಯೆಗಳನ್ನು ಆಯಾ ಗ್ರಾಹಕರ ಖಾತೆಯಲ್ಲಿ ದಾಖಲಿಸುವುದು

6) ಗಾಂಧಿ ಬಜಾರ್, ಜಯನಗರ, ಬನಶಂಕರಿ 2ನೇ ಹಂತ, ಮೈಸೂರು ಶಾಖೆಯಲ್ಲಿ ಹಣ ಮರುಬಳಕೆ (Cash Recycler) ಯಂತ್ರ ಅಳವಡಿಸಲಾಗಿದ್ದು, ಅದರಲ್ಲಿ ಹಣ ಪಾವತಿಸುವ ಹಾಗೂ ಹಿಂಪಡೆಯುವ ಸೌಲಭ್ಯವಿದ್ದು, ಅದನ್ನು ಬೇರೆ ಶಾಖೆಗಳಿಗೂ ಅಳವಡಿಸಲು ಯೋಜನೆ ಕೈಗೊಳ್ಳಲಾಗಿದೆ. ಅಗ್ರಹಾರ ದಾಸರಹಳ್ಳಿ ಶಾಖೆಗೆ ATM ಸೌಲಭ್ಯ ಒದಗಿಸುವುದು.

7) ಏಕಗವಾಕ್ಷಿ ಯೋಜನೆ ಗಾಂಧೀ ಬಜಾರ್ ಶಾಖೆ ಮತ್ತು ಬನಶಂಕರಿ 3ನೇ ಹಂತದ ಶಾಖೆಗಳಲ್ಲಿ ಅಳವಡಿಸಲಾಗಿದ್ದು, ಇನ್ನಿತರ ಶಾಖೆಗಳಲ್ಲಿಯೂ ಅಳವಡಿಸುವ ಯೋಜನೆ ಕಾರ್ಯಪ್ರಗತಿಯಲ್ಲಿರುವುದು.

8) Mobile Banking ಸೌಲಭ್ಯ ಒದಗಿಸುವುದು.

9) ಜೆ.ಪಿ.ನಗರದ ಬ್ಯಾಂಕಿನ ನಿವೇಶನದಲ್ಲಿ ನೂತನ ಕಟ್ಟಡ ನಿರ್ಮಾಣ ಕಾರ್ಯಾರಂಭ

10) ಸದಾಶಿವನಗರ ಶಾಖೆಯನ್ನು ಎಮ್.ಎಸ್.ರಾಮಯ್ಯ ಆಸ್ಪತ್ರೆಯ ಬಳಿ ವಿನಿಮಯ (Exchange) ರೂಪದಲ್ಲಿ ಸ್ಥಳಾಂತರಿಸುವ ನಿಟ್ಟಿನಲ್ಲಿ ಗುದ್ದಲಿ ಪೂಜೆ ನೆರವೇರಿಸಿದ್ದು ನಿರ್ಮಾಣ ಸಂಪೂರ್ಣಗೊಂಡ ಕೂಡಲೇ ಸ್ಥಳಾಂತರ ಮಾಡುವುದು.

11) CERSAI ಜಾಲತಾಣದಲ್ಲಿ ಬ್ಯಾಂಕಿನಲ್ಲಿ ಅಡಮಾನವಾಗಿರುವ ಎಲ್ಲಾ ಸ್ಥಿರಾಸ್ತಿಗಳ ವಿವರಗಳನ್ನು ನೊಂದಾಯಿಸುವುದು.

12) ಇ ಸ್ಟಾಂಪಿಂಗ್ ವ್ಯವಸ್ಥೆಯನ್ನು ಅಗ್ರಹಾರ ದಾಸರಹಳ್ಳಿ, ರಾಜರಾಜೇಶ್ವರಿನಗರ ಹಾಗೂ ಬಾಣಸವಾಡಿ ಶಾಖೆಗಳಿಗೆ ವಿಸ್ತರಿಸುವುದು.

13) ನಮ್ಮ ಬ್ಯಾಂಕಿನ ಗ್ರಾಹಕರಿಗೆ ನಾಮಮುದ್ರಿತ ಚೆಕ್ ಪುಸ್ತಕಗಳನ್ನು (Personalized cheque books) ನೀಡುವುದು.

14) ATM withdrawal ಅಥವಾ deposit ಮಾಡುವಾಗ 2 factor authentication ಗಾಗಿ OTP ವ್ಯವಸ್ಥೆ ಅಳವಡಿಸಿಕೊಳ್ಳುವುದು.

15) ಬ್ಯಾಂಕಿನ ತಂತ್ರಜ್ಞಾನವನ್ನು ಬ್ರೌಸರ್ ಬೇಸ್ಡ್ ವರ್ಶನ್‌ಗೆ ಮೇಲ್ದರ್ಜೆಗೇರಿಸುವುದು.

| | |
|---|---|
| **ವಿಷಯ 5:** | 2020–21ನೇ ಸಾಲಿನ ಆಡಿಟ್ ಆದ ಲೆಕ್ಕ ಪತ್ರಗಳ ತಃಖ್ತೆ, ಲೆಕ್ಕ ಪರಿಶೋಧನಾ ವರದಿ ಮತ್ತು ಮಂಡಲಿಯ ಅನುಪಾಲನಾ ವರದಿಯನ್ನು ಪರಿಶೀಲಿಸಿ ಅಂಗೀಕರಿಸುವುದು |

2020–2021ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ ಮತ್ತು ಮಂಡಲಿಯ ಅನುಪಾಲನಾ ವರದಿಯನ್ನು ಬ್ಯಾಂಕಿನ **Website http://www.ncbl.org.in/** ನಲ್ಲಿ ಪ್ರಕಟಿಸಲಾಗುವುದು. ಸದಸ್ಯರು ತಮ್ಮ Login ID ಯೊಂದಿಗೆ access ಮಾಡಬಹುದು.

| | |
|---|---|
| **ವಿಷಯ 6:** | 2020–21ನೇ ಸಾಲಿನಲ್ಲಿ ಅಂದಾಜು ಆಯವ್ಯಯಕ್ಕಿಂತ ಹೆಚ್ಚುವರಿ ಆಗಿರುವ ಖರ್ಚನ್ನು ಅನುಮೋದಿಸುವುದು ಮತ್ತು 2021–22ನೇ ಸಾಲಿನ ಅಂದಾಜು ಆಯವ್ಯಯವನ್ನು ಮಂಜೂರು ಮಾಡುವುದು |

2020–21ನೇ ಸಾಲಿನ ಆಯವ್ಯಯದಲ್ಲಿ ಆಗಿರುವ ಹೆಚ್ಚುವರಿ ಖರ್ಚನ್ನು ಮತ್ತು 2021–22ನೇ ಸಾಲಿನ ಅಂದಾಜು ಆಯವ್ಯಯವನ್ನು ವಾರ್ಷಿಕ ವರದಿಯಲ್ಲಿ ಮುದ್ರಿಸಲಾಗಿದೆ. ಸಾಮಾನ್ಯ ಸಭೆಯ ಅನುಮೋದನೆಗೆ ಮಂಡಿಸಲಾಗಿದೆ.

| | |
|---|---|
| **ವಿಷಯ 7:** | 2020–21ನೇ ಸಾಲಿನ ನಿವ್ವಳ ಲಾಭದ ಹಂಚಿಕೆಯನ್ನು ಅನುಮೋದಿಸುವುದು |

2020–21ನೇ ಸಾಲಿನ ನಿವ್ವಳ ಲಾಭದ ಹಂಚಿಕೆಯನ್ನು ಸಾಮಾನ್ಯ ಸಭೆಯ ಅನುಮೋದನೆಗೆ ಮಂಡಿಸಲಾಗಿದೆ. ವಾರ್ಷಿಕ ವರದಿಯಲ್ಲಿ ಮುದ್ರಿಸಲಾಗಿದೆ.

| | |
|---|---|
| **ವಿಷಯ 8:** | ಬ್ಯಾಂಕಿನ ನಿರ್ದೇಶಕರು ಮತ್ತು ಅವರ ಸಂಬಂಧಿಕರು ಪಡೆದಿರುವ ಸಾಲಗಳ ಪರಿಶೀಲನೆ |

ನಿರ್ದೇಶಕರು ಮತ್ತು ಅವರ ಸಂಬಂಧಿಕರು ಯಾವ ಸಾಲ ಸೌಲಭ್ಯಗಳನ್ನು ಪಡೆದಿರುವುದಿಲ್ಲ.

| ವಿಷಯ 9: | ನಿಧಿಗಳ ವಾಸ್ತವಿಕ ಬಳಕೆಯ ಬಗ್ಗೆ ವಿಮರ್ಶೆ |
|---|---|

ನಿಧಿಗಳ ವಾಸ್ತವ ಬಳಕೆ ಈ ಕೆಳಕಂಡಂತಿದೆ.

**ವಿದ್ಯಾನಿಧಿ: ರೂ. 1,95,750/–**

ವಿವಿಧ ಪರೀಕ್ಷೆಗಳಲ್ಲಿ ಹೆಚ್ಚಿನ ಅಂಕಗಳನ್ನು ಪಡೆದ ಸಿಬ್ಬಂದಿ ಮಕ್ಕಳಿಗೆ ಹಾಗೂ ದಿನಾಂಕ 12.12.2020 ರಂದು ಸದಸ್ಯರ ಮಕ್ಕಳಿಗೆ ದಿನಾಂಕ 21.02.2021 ನಡೆದ ಪ್ರತಿಭಾ ಪುರಸ್ಕಾರದ ಕಾರ್ಯಕ್ರಮದಲ್ಲಿ 148 ಸದಸ್ಯರಿಗೆ/ಮಕ್ಕಳಿಗೆ ನಗದು ಪುರಸ್ಕಾರ ನೀಡಿರುವ ಒಟ್ಟು ಮೊತ್ತ ರೂ.1,95,750/–

**ಸದಸ್ಯರ ಕ್ಷೇಮಾಭಿವೃದ್ಧಿ ನಿಧಿ ರೂ. 25,84,000 /–**

ಪ್ರಸಕ್ತ ಸಾಲಿನಲ್ಲಿ 246 ಸದಸ್ಯರು ನಿಧನ ಹೊಂದಿದ ಪ್ರಯುಕ್ತ ಅವರ ವಾರಸುದಾರರಿಗೆ ಮರಣೋತ್ತರ ಪರಿಹಾರವಾಗಿ ನೀಡಿದ ಮೊತ್ತ ರೂ.24,60,000/– ಮತ್ತು 23 ಸದಸ್ಯರು/ಕುಟುಂಬ ವರ್ಗದವರ ವೈದ್ಯಕೀಯ ಪರಿಹಾರವಾಗಿ ರೂ.1,24,000/– ನೀಡಲಾಗಿದೆ.

**ಸಿಬ್ಬಂದಿ ಕ್ಷೇಮಾಭಿವೃದ್ಧಿ ನಿಧಿ ರೂ. 9,71,164.50**

ಸಿಬ್ಬಂದಿಗಳ ಮತ್ತು ಅವರ ಕುಟುಂಬದವರ ವೈದ್ಯಕೀಯ ಖರ್ಚಿಗಾಗಿ, 25 ವರ್ಷಕ್ಕಿಂತ ಹಾಗೂ 15 ವರ್ಷಕ್ಕಿಂತ ಹೆಚ್ಚು ಸೇವೆ ಸಲ್ಲಿಸಿದ ಸಂದರ್ಭದಲ್ಲಿ ಸಿಬ್ಬಂದಿಗಳಿಗೆ ನೀಡಿದ ನೆನಪಿನ ಕಾಣಿಕೆ, ಸಿಬ್ಬಂದಿಗಳ ಮಕ್ಕಳ ವಿದ್ಯಾಭ್ಯಾಸಕ್ಕೆ ನೀಡಿದ ನೆರವು ಹಾಗೂ ಸಿಬ್ಬಂದಿ ಮಕ್ಕಳಿಗೆ ಪ್ರತಿಭಾ ಪುರಸ್ಕಾರಕ್ಕಾಗಿ ನೀಡಿದ ಒಟ್ಟು ಮೊತ್ತ ರೂ. 9,71,164.50

| ವಿಷಯ 10: | ಬ್ಯಾಂಕಿನ ಸದಸ್ಯತ್ವಕ್ಕೆ ಸೇರ್ಪಡೆ ಮತ್ತು ತೆಗೆದು ಹಾಕಿದ ಸದಸ್ಯರ ಕುರಿತು ಟಿಪ್ಪಣಿ |
|---|---|

ಪ್ರಸಕ್ತ ಸಾಲಿನಲ್ಲಿ 68 ನಿಯತ ಸದಸ್ಯರು ಹಾಗೂ 55 ಸಹ ಸದಸ್ಯರು ಸೇರ್ಪಡೆಯಾಗಿರುತ್ತಾರೆ. ಸೇರ್ಪಡೆಯಾದ ಮತ್ತು ಬೇರ್ಪಡೆಯಾದ ವಿವರಗಳನ್ನು ವಾರ್ಷಿಕ ವರದಿಯಲ್ಲಿ ಮುದ್ರಿಸಲಾಗಿದೆ.

**ಸೂಚನೆ**

1. ದಿನಾಂಕ 13.12.2020 ರಂದು ನಡೆದ 46ನೇ ಸಾಮಾನ್ಯ ಸಭೆಯ ನಡವಳಿಯನ್ನು ವಾರ್ಷಿಕ ವರದಿಯಲ್ಲಿ ಮುದ್ರಿಸಲಾಗಿದೆ.
2. ಬ್ಯಾಂಕಿನ ಜಾಲತಾಣ(Website http://www.ncbl.org.in/) ದಲ್ಲಿ ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರ ಹಾಗೂ ವಾರ್ಷಿಕ ವರದಿಯನ್ನು ವೀಕ್ಷಿಸಬಹುದು.

3. ಸರ್ವಸದಸ್ಯರ ಸಭೆಯಲ್ಲಿ ಸದಸ್ಯರು ಸ್ಮಾರ್ಟ್ ಮೊಬೈಲ್ ಫೋನ್/ ಪರ್ಸನಲ್ ಕಂಪ್ಯೂಟರ್ ಮೂಲಕ ಭಾಗವಹಿಸಬೇಕಾಗಿದ್ದು ಸದಸ್ಯತ್ವ ಸಂಖ್ಯೆ ಹಾಜರುಪಡಿಸಬೇಕಾಗಿ ವಿನಂತಿ. ಸಭೆಯಲ್ಲಿ ಚರ್ಚಿಸತಕ್ಕ ಇತರೆ ವಿಷಯಗಳೇನಾದರೂ ಇದ್ದಲ್ಲಿ ವಾರ್ಷಿಕ ಸಾಮಾನ್ಯ ಸಭೆಗೆ ಐದು ದಿನ ಮುಂಚಿತವಾಗಿ ಲಿಖಿತ ಮೂಲಕ ಅಧ್ಯಕ್ಷರಿಗೆ ಅಥವಾ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗೆ ತಲುಪಿಸಬೇಕು. ನಂತರ ಬಂದ ವಿಷಯಗಳನ್ನು ಸಭೆಯಲ್ಲಿ ಚರ್ಚಿಸಲು ಅವಕಾಶವಿರುವುದಿಲ್ಲ. ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಅಭಿಪ್ರಾಯ ಮಂಡಿಸಲು ಸಲಹೆ/ಸೂಚನೆ ನೀಡಲು ಇಚ್ಛಿಸುವ ಸದಸ್ಯರು ದಿನಾಂಕ 05/10/2021 ರೊಳಗಾಗಿ ತಮ್ಮ ಸದಸ್ಯತ್ವ ಸಂಖ್ಯೆ, ಹೆಸರು ಮತ್ತು ಮಾತನಾಡಲು ಬಯಸುವ ವಿಷಯದ ಬಗ್ಗೆ ಪ್ರತ್ಯೇಕವಾಗಿ ಲಿಖಿತ ರೂಪದಲ್ಲಿ ಅಧ್ಯಕ್ಷರಿಗೆ ಅಥವಾ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗೆ ತಲುಪಿಸಬೇಕು ಅಥವಾ email Id:agm@ncbl.org.in ಮುಖಾಂತರ ನೋಂದಾಯಿಸಿಕೊಳ್ಳಲು ವಿನಂತಿ. ಮೊದಲು ನೋಂದಾಯಿಸಿಕೊಂಡ 25 ಜನ ಸದಸ್ಯರಿಗೆ ಮಾತನಾಡಲು ಅವಕಾಶ ಕಲ್ಪಿಸಲಾಗುವುದು.

4. ಷೇರು ಸರ್ಟಿಫಿಕೇಟನ್ನು ಪಡೆಯದೇ ಇರುವ ಸದಸ್ಯರು ಆಡಳಿತ ಕಛೇರಿಯಿಂದ ಷೇರು ಸರ್ಟಿಫಿಕೇಟನ್ನು ಪಡೆಯಬೇಕಾಗಿ ವಿನಂತಿ.

5. ಸದಸ್ಯರು ವಿಳಾಸ ಬದಲಾವಣೆ ಇದ್ದಲ್ಲಿ, ಮೊಬೈಲ್, ದೂರವಾಣಿ ಸಂಖ್ಯೆ, ಇ–ಮೇಲ್ ವಿಳಾಸಗಳನ್ನು ತಮ್ಮ ಶಾಖೆಗೆ ಖುದ್ದಾಗಿ ದಾಖಲಾತಿಗಳೊಂದಿಗೆ ಮಾಹಿತಿ ನೀಡಬೇಕಾಗಿ ವಿನಂತಿ.

6. ಉಳಿತಾಯ ಖಾತೆ/ಅವಧಿ ಠೇವಣಿ ಖಾತೆಗಳಲ್ಲಿ ನಾಮ ನಿರ್ದೇಶನ ಸೌಲಭ್ಯಗಳನ್ನು ಸದಸ್ಯರು ಪಡೆಯಬೇಕಾಗಿ ವಿನಂತಿ

7. ಸದಸ್ಯರು ತಮ್ಮ ಉಳಿತಾಯ/ಚಾಲ್ತಿ ಖಾತೆಯಲ್ಲಿ ಆಯ್ದ ವ್ಯವಹಾರಕ್ಕೆ 'ಕಿರು ಸಂದೇಶ' (SMS alerts) ಪಡೆಯಲು ತಮ್ಮ ಮೊಬೈಲ್ ದೂರವಾಣಿ ಸಂಖ್ಯೆಯನ್ನು ನಮೂದಿಸಬೇಕಾಗಿ ವಿನಂತಿ

8. ಸದಸ್ಯರು ಇಂಟರ್‌ನೆಟ್ ಬ್ಯಾಂಕಿಂಗ್ ಸೌಲಭ್ಯಕ್ಕೆ (view only) ನೋಂದಾಯಿಸಿಕೊಳ್ಳಲು, ಆಯಾಯ ಶಾಖೆಗಳನ್ನು ಸಂಪರ್ಕಿಸಬೇಕಾಗಿ ಕೋರಿಕೆ.

9. ಪ್ರತಿ ಸದಸ್ಯರು 2015–16ನೇ ಸಾಲಿನಿಂದ ಪ್ರಾರಂಭಗೊಂಡು ಬ್ಯಾಂಕಿನ ಐದು ವಾರ್ಷಿಕ ಸಾಮಾನ್ಯ ಸಭೆಗಳಲ್ಲಿ ಕನಿಷ್ಟ ಮೂರು ಸಭೆಗಳಲ್ಲಿ ಭಾಗವಹಿಸಬೇಕಾಗಿರುವುದರಿಂದ ಮಾನ್ಯ ಸದಸ್ಯರು ಸಭೆಗೆ login ಆಗಿ ಕಡ್ಡಾಯವಾಗಿ ಹಾಜರಿ ದಾಖಲಿಸಬೇಕಾಗಿ ಕೋರಲಾಗಿದೆ. ಇಲ್ಲದಿದ್ದ ಪಕ್ಷದಲ್ಲಿ ಮುಂದೆ ನಡೆಯಲಿರುವ ಬ್ಯಾಂಕಿನ ಆಡಳಿತ ಮಂಡಲಿಯ ಚುನಾವಣೆಯಲ್ಲಿ

ಮತ ಚಲಾಯಿಸುವ ಅವಕಾಶವಿರುವುದಿಲ್ಲ.

10. ಪ್ರತಿ ಸದಸ್ಯರು ಕನಿಷ್ಠ ರೂ. 1000/– ಗಳ ಷೇರು ಮೊತ್ತವನ್ನು ಹೊಂದಿರಬೇಕು.

11. ಪ್ರತಿ ಸದಸ್ಯರು ಕನಿಷ್ಠ ರೂ. 1000/– ಗಳ ಠೇವಣಿ ಹೊಂದಿರಬೇಕು.

12. ಪ್ರತಿ ಸದಸ್ಯರು ತಮ್ಮ ಖಾತೆಗಳಲ್ಲಿ ಒಂದು ವರ್ಷದಲ್ಲಿ ಕನಿಷ್ಠ 6 ಬಾರಿ ವ್ಯವಹರಿಸಬೇಕು (ಜಮಾವಣೆ + ಹಿಂಪಡೆಯುವಿಕೆ ಸೇರಿ)

13. ಬ್ಯಾಂಕಿನಿಂದ ಸಾಲ ಸೌಲಭ್ಯಗಳನ್ನು ಪಡೆದು ಸಕಾಲದಲ್ಲಿ ಕಂತುಗಳನ್ನು ಮರುಪಾವತಿ ಮಾಡದೇ ಸುಸ್ತಿದಾರರಾಗಿರುವ ಸದಸ್ಯರು ಸರ್ವ ಸದಸ್ಯರ ಮಹಾಸಭೆಯಲ್ಲಿ ಮತ ಚಲಾಯಿಸಲು ಅರ್ಹರಾಗಿರುವುದಿಲ್ಲ.

14. ಬ್ಯಾಂಕು ಇಫ್ಕೋ ಟೋಕಿಯೋ, ಶ್ರೀರಾಮ್ ಜನರಲ್ ಇನ್ಶೂರೆನ್ಸ್ ಪ್ರೈ. ಲಿಮಿಟೆಡ್ ರವರ ಸಹಕಾರದೊಂದಿಗೆ ಜನರಲ್ ಇನ್ಶ್ಯೂರೆನ್ಸ್ ಸೌಲಭ್ಯ ನೀಡುತ್ತಿದ್ದು ತಮ್ಮ ಸಾಲಖಾತೆಗಳಿಗೆ ಭದ್ರತೆ ನೀಡಿರುವ ಸ್ಥಿರಾಸ್ತಿ ಮತ್ತು ಚರಾಸ್ತಿಗಳಿಗೆ (movable and immovable securities) ವಿಮೆ ಮಾಡಿಸಬಹುದಾಗಿದೆ.

15. ಠೇವಣಿದಾರರು ತಮ್ಮ ಉಳಿತಾಯ ಖಾತೆ/ಚಾಲ್ತಿ ಖಾತೆ ಮತ್ತಿತರ ಯಾವುದೇ ಠೇವಣಿ ಖಾತೆಯಲ್ಲಿ 10 ವರ್ಷಗಳಿಗಿಂತ ಹೆಚ್ಚಿನ ಅವಧಿಗೆ ವ್ಯವಹಾರ ನಡೆಸದಿದ್ದಲ್ಲಿ ಅಂತಹ ಖಾತೆಗಳಿಗೆ ಸಂಬಂಧಿಸಿದ ಪೂರ್ಣ ಮೊಬಲಗನ್ನು ಭಾರತೀಯ ರಿಸರ್ವ್ ಬ್ಯಾಂಕ್‌ನ Depositors Education and Awareness Fund ಖಾತೆಗೆ ವರ್ಗಾಯಿಸುವುದು ಕಡ್ಡಾಯವಾಗಿದೆ. ಆದ್ದರಿಂದ ಸದಸ್ಯರು/ಠೇವಣಿದಾರರು ತಮ್ಮ ಠೇವಣಿ ಖಾತೆಗಳಲ್ಲಿ ಕಾಲ ಕಾಲಕ್ಕೆ ಕನಿಷ್ಠ ವ್ಯವಹಾರಗಳನ್ನಾದರೂ ನಡೆಸಲು ಕೋರಿದೆ.

# ದಿ ನ್ಯಾಷನಲ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಛೇರಿ: 73/1, ಗಾಂಧಿ ಬಜಾರ್ ಮುಖ್ಯ ರಸ್ತೆ, ಬೆಂಗಳೂರು – 560 004

ಆದರಣೀಯ ಸಹಕಾರಿ ಬಂಧುಗಳೇ,

ಬ್ಯಾಂಕಿನ 47ನೇ ವಾರ್ಷಿಕ ಸಾಮಾನ್ಯ ಸಭೆಗೆ ಆಡಳಿತ ಮಂಡಲಿಯ ಪರವಾಗಿ ತಮ್ಮೆಲ್ಲರನ್ನೂ ಆದರ ಪೂರ್ವಕವಾಗಿ ಸ್ವಾಗತಿಸುತ್ತೇವೆ. ಸಾಮಾನ್ಯ ಸಭೆಯ ಸೂಚನಾ ಪತ್ರದಲ್ಲಿ ತಿಳಿಸಿರುವಂತೆ 2020–21ನೇ ಸಾಲಿನ ಆಡಳಿತ ಮಂಡಲಿಯ ವಾರ್ಷಿಕ ವರದಿಯನ್ನು ಮಾನ್ಯ ಸದಸ್ಯರ ಪರಿಶೀಲನೆಗೆ ಮಂಡಿಸಲು ಆಡಳಿತ ಮಂಡಲಿಯು ಹರ್ಷಿಸುತ್ತದೆ.

ಪ್ರಪಂಚದಾದ್ಯಂತ ಕೋವಿಡ್–19 ಸೋಂಕಿನಿಂದ ಜನರು ಬಳಲುತ್ತಿದ್ದು, ಹಲವರು ಉದ್ಯೋಗವನ್ನು ಕಳೆದುಕೊಂಡಿದ್ದು ದೇಶವು ಆರ್ಥಿಕ ಸಂಕಷ್ಟವನ್ನು ಅನುಭವಿಸುತ್ತಿದ್ದು ಎಲ್ಲಾ ಆರ್ಥಿಕ ಚಟುವಟಿಕೆಗಳು ಕುಂಠಿತವಾಗಿವೆ. ಜನಗಳ ಜೀವನ ಶೈಲಿಯಲ್ಲಿ ವ್ಯತ್ಯಾಸವಾಗಿದೆ. ಇದರೊಂದಿಗೆ ಬೇರೊಂದು ಬ್ಯಾಂಕಿನ ವೈಫಲ್ಯದಿಂದಾಗಿ ನಮ್ಮ ಕೆಲ ಠೇವಣಿದಾರರು ಆತಂಕಕ್ಕೀಡಾದ ಸಂದರ್ಭದಲ್ಲಿ, 2020–21ರ ವರದಿ ಸಾಲಿನಲ್ಲಿ ಒಟ್ಟು 97 ಕೋಟಿ ಠೇವಣಿ ಕಡಿಮೆಯಾಗಿದೆ, ಸಾಲ ನೀಡುವಿಕೆಯಲ್ಲಿ ರೂ.103 ಕೋಟಿ ಕಡಿಮೆಯಾಗಿದೆ, ಒಟ್ಟು ವಹಿವಾಟಿನಲ್ಲಿ ರೂ.200 ಕೋಟಿ ಕಡಿಮೆಯಾಗಿದೆ. ಆದಾಗ್ಯೂ ಪ್ರಸಕ್ತ ಸಾಲಿನಲ್ಲಿ ರೂ.21.51 ಕೋಟಿಗಳಷ್ಟು ಲಾಭ ಗಳಿಸಿದೆ.  ಇದರಲ್ಲಿ ನಿಷ್ಕ್ರಿಯ ಆಸ್ತಿಗೆ ರೂ.15.32 ಕೋಟಿಗಳಷ್ಟು, ಮೀಸಲಿಟ್ಟು ಮತ್ತು ಆದಾಯ ತೆರಿಗೆಗೆ ರೂ.5.10 ಕೋಟಿ ಪಾವತಿಸಿದ ನಂತರ ರೂ.1.09 ಕೋಟಿ ನಿವ್ವಳ ಲಾಭ ಗಳಿಕೆಯಾಗಿದೆ.

ಕರೋನಾ ಮಹಾಮಾರಿ ವಿಶ್ವವ್ಯಾಪಿಯಾಗಿ ಹರಡುತ್ತಿರುವ ಈ ಸಂದರ್ಭದಲ್ಲಿ ಸರ್ಕಾರದ ಆದೇಶದ ಮೇರೆಗೆ ವ್ಯಾಪಾರ, ವಹಿವಾಟುಗಳ ಮೇಲೆ, ಶಿಕ್ಷಣ ಸಂಸ್ಥೆಗಳ ಮೇಲೆ ಲಾಕ್‌ಡೌನ್ ಘೋಷಿಸಿದ ಹಿನ್ನೆಲೆಯಲ್ಲಿ, ಎಲ್ಲಾ ವಲಯಗಳಲ್ಲೂ ಆರ್ಥಿಕ ಹಿನ್ನಡೆಯಾಗಿದೆ.  ಅದಲ್ಲದೆ, ಭಾರತೀಯ ರಿಸರ್ವ್ ಬ್ಯಾಂಕಿನ ಆದೇಶದನ್ವಯ ಸಾಲ ಮರುಪಾವತಿಗೆ 6 ತಿಂಗಳ ಕಾಲಾವಕಾಶ ನೀಡಿರುವುದು ಸಹ ಬ್ಯಾಂಕಿನ ವಹಿವಾಟಿನ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರಿದೆ.

ಆದಾಗ್ಯೂ ಶಾಖಾವಾರು ಸಾಲ ವಸೂಲಾತಿ ಸಮಿತಿಗಳ ರಚನೆಯಾಗಿ, ಸಿಬ್ಬಂದಿ ಹಾಗೂ ನಿರ್ದೇಶಕ ಮಂಡಲಿಯ ಸದಸ್ಯರು ಸುಸ್ತಿದಾರರ ಮನವೊಲಿಕೆ, ಕಟ್ಟುನಿಟ್ಟಿನ ಕಾನೂನು ಕ್ರಮ, ಹರಾಜು ಹಾಕುವ ಎಲ್ಲಾ ಕ್ರಮಗಳನ್ನು ಬ್ಯಾಂಕು ಕೈಗೊಂಡಿದೆ. ವರದಿ ಸಾಲಿನಲ್ಲಿ 43 NPA ಖಾತೆಗಳಿಂದ ರೂ.614.50 ಲಕ್ಷಗಳನ್ನು ಚುಕ್ತಗೊಳಿಸಿ, 53 NPA ಖಾತೆಗಳಿಂದ ರೂ.5400.72 ಲಕ್ಷಗಳನ್ನು ಶಿಷ್ಟ ಸಾಲಗಳನ್ನಾಗಿ ಪರಿವರ್ತಿಸಲಾಗಿದೆ.

ದಿನಾಂಕ 31.03.2021ರ ಅಂತ್ಯಕ್ಕೆ ಒಟ್ಟು ಸಾಲ ರೂ. 112800.89 ಲಕ್ಷಗಳಲ್ಲಿ 1378 ಪ್ರಕರಣಗಳಿಂದ ರೂ.343.01 ಕೋಟಿಗಳಷ್ಟು ಮೊತ್ತದ ಸುಸ್ತಿ ಬಾಕಿಯಿದ್ದು, ಇದು ಒಟ್ಟು ಸಾಲಗಳ ಮೇಲೆ ಶೇ. 30.41% ರಷ್ಟಿದ್ದು, ಹಿಂದಿನ ಅವಧಿಯಲ್ಲಿ ಶೇ. 20.40 % ರಷ್ಟಿರುತ್ತದೆ

ಸಹಕಾರಿ ಬ್ಯಾಂಕ್‌ಗಳ ನಿಯಂತ್ರಣ ಬಿಗಿಗೊಳಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಬ್ಯಾಂಕಿಂಗ್ ಕಾಯ್ದೆ 1949ಕ್ಕೆ ತಿದ್ದುಪಡಿಯನ್ನು Amendments to Banking Regulation Act, 2020 ಮೂಲಕ ತಂದಿದ್ದು, ತನ್ಮೂಲಕ ಸಹಕಾರಿ ಬ್ಯಾಂಕ್‌ಗಳ ಆಡಳಿತ, ಬಂಡವಾಳ, ಲೆಕ್ಕಪರಿಶೋಧನೆ ಹಾಗೂ ಬ್ಯಾಂಕುಗಳ ವಿಲೀನ ಇತ್ಯಾದಿಗಳನ್ನು ಬಲಪಡಿಸಲಿದೆ. ಮುಂಬರುವ ದಿನಗಳಲ್ಲಿ ಇದರ ಅನುಷ್ಠಾನಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

29 ಜೂನ್, 2020 ರಂದು ಕೇಂದ್ರ ಸರ್ಕಾರವು ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಗೆ ತಿದ್ದುಪಡಿ ತಂದು ಪಟ್ಟಣ ಸಹಕಾರ ಬ್ಯಾಂಕುಗಳನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಅಡಿಯಲ್ಲಿ ತರಲು ಅವಕಾಶ ಕಲ್ಪಿಸಿತು. ಇದು ಪಟ್ಟಣ ಸಹಕಾರಿ ಬ್ಯಾಂಕುಗಳ ಮೇಲೆ ಬ್ಯಾಂಕಿನ ಎಲ್ಲಾ ಗ್ರಾಹಕರಿಗೆ ವಿಶ್ವಾಸವನ್ನು ಹೆಚ್ಚಿಸಿದೆ.

**ವರ್ಷದ ಕಾರ್ಯಕ್ರಮ:**

1. ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳಕ್ಕೆ ಬ್ಯಾಂಕಿನ ಅಧ್ಯಕ್ಷರಾದ ಶ್ರೀ. ಹೆಚ್.ಸಿ ಕೃಷ್ಣರವರು ನಿರ್ದೇಶಕರಾಗಿ ದಿನಾಂಕ 11.01.2021 ರಂದು ಆಯ್ಕೆಯಾಗಿರುತ್ತಾರೆ.

2. ಗ್ರಾಹಕರಿಗೆ ಕ್ಷಿಪ್ರಗತಿಯ ಸೇವೆ ಒದಗಿಸುವ ದೃಷ್ಟಿಯಿಂದ 'ಏಕ ಗವಾಕ್ಷಿ' ಸೇವೆಯನ್ನು ಗಾಂಧೀ ಬಜಾರ್ ಶಾಖೆ ಮತ್ತು ಬನಶಂಕರಿ ಮೂರನೇ ಹಂತ ಗಳಲ್ಲಿ ಅಳವಡಿಸಲಾಗಿದ್ದು, ಇದನ್ನು ಇನ್ನಿತರ ಶಾಖೆಗಳಿಗೂ ವಿಸ್ತರಿಸಲಾಗುವುದು.

3. ಬ್ಯಾಂಕಿನ 45ನೇ ಪ್ರಾರಂಭೋತ್ಸವವನ್ನು 01.03.2021 ರಂದು ಆಚರಿಸಲಾಯಿತು.

4. ಕೊರೋನಾ ಮಹಾಮಾರಿಯನ್ನು ಹಿಮ್ಮೆಟ್ಟಿಸುವಲ್ಲಿ ನಮ್ಮ ಬ್ಯಾಂಕು ಹತ್ತು ಹಲವಾರು ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡಿದೆ. ಅವುಗಳಲ್ಲಿ ಕೆಲವು, ಎಲ್ಲಾ ಸಿಬ್ಬಂದಿಗಳಿಗೆ Face Mask, Face Shield, Sanitizer ಒದಗಿಸಿಕೊಟ್ಟಿದ್ದಲ್ಲದೆ, ಬ್ಯಾಂಕಿಗೆ ಬರುವ ಎಲ್ಲಾ ಗ್ರಾಹಕರ ಉಷ್ಣಾಂಶ ಪರೀಕ್ಷೆ, sanitisation, ದೈಹಿಕ ಅಂತರ ಕಾಪಾಡುವುದನ್ನು ಕಡ್ಡಾಯಗೊಳಿಸಿದೆ. ಕೊರೋನಾ ಸಮಯದಲ್ಲಿ ಆಡಳಿತ ಕಛೇರಿ ಮತ್ತು ಎಲ್ಲಾ ಶಾಖೆಗಳನ್ನು ಸುರಕ್ಷತೆಯ ದೃಷ್ಟಿಯಿಂದ ನೈರ್ಮಲೀಕರಣಗೊಳಿಸಲಾಯಿತು. ಬ್ಯಾಂಕಿನ ಪ್ರಾರಂಭದ 3000 ನಿಯತ ಸದಸ್ಯರಿಗೆ, ಸಿಬ್ಬಂದಿ ಹಾಗೂ ಅವರ ಕುಟುಂಬದವರಿಗೆ ಕೊರೊನಾ ಲಸಿಕೆ ನೀಡಲಾಯಿತು.

5. ಗಾಂಧಿ ಬಜಾರ್ ಶಾಖೆ, ಜಯನಗರ, ಬನಶಂಕರಿ 2ನೇ ಹಂತ ಮತ್ತು ಮೈಸೂರು ಶಾಖೆಗಳಲ್ಲಿ ಹಣ ಮರುಬಳಕೆ ಯಂತ್ರವನ್ನು ಅಳವಡಿಸಲಾಗಿದ್ದು, ಇದರಲ್ಲಿ ಹಣ ಪಡೆಯುವುದಲ್ಲದೆ, ಹಣ ಪಾವತಿಸುವ ಅನುಕೂಲ ಒದಗಿಸಲಾಗಿದೆ. ಇದರ ಮೂಲಕ ಗ್ರಾಹಕರು ತಮ್ಮ ಯಾವುದೇ ಶಾಖೆಯಲ್ಲಿರುವ ಖಾತೆಗೂ, ಇನ್ನಿತರೆ ಬ್ಯಾಂಕಿಗೂ ಸಹ ದಿನದ 24 ಗಂಟೆಯೂ ಹಣ ಪಾವತಿಸಬಹುದಾಗಿದೆ.

6. ಬ್ಯಾಂಕಿನ ಸಂಸ್ಥಾಪಕರಾದ ಶ್ರೀ .ವೈ.ಪಿ. ಕೇಶವಮೂರ್ತಿಯವರ ಕಂಚಿನ ಪುತ್ಥಳಿಯನ್ನು ಸ್ಥಾಪಿಸಲಾಗಿದೆ. ಸಿಬ್ಬಂದಿ ವರ್ಗದ ಅನುಕೂಲಕ್ಕಾಗಿ ಆಡಳಿತ ಕಛೇರಿಯ ಮೇಲಿನ ಅಂತಸ್ತಿನಲ್ಲಿ

ಕೆಫೆಟೇರಿಯಾ ನಿರ್ಮಿಸಲಾಗಿದೆ. ಶ್ರೀ.ಟಿ.ಆರ್.ಶಾಮಣ್ಣ ಸಭಾಂಗಣವನ್ನು ನವೀಕರಿಸಲಾಗಿದ್ದು, ಸಿಬ್ಬಂದಿ ತರಬೇತಿ ಕಾರ್ಯಕ್ರಮಕ್ಕೆ ಉತ್ತಮ ಅನುಕೂಲ ಕಲ್ಪಿಸಲಾಗಿದೆ.

7. ಪ್ರತಿ ವರ್ಷದಂತೆ ಈ ವರ್ಷವೂ ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ, ಸಂಸ್ಥಾಪಕರ ಪುಣ್ಯ ಸ್ಮರಣೆ, ಆಯುಧಪೂಜೆ, ವರಮಹಾಲಕ್ಷ್ಮೀ, ರಾಮನವಮಿ ಹಬ್ಬಗಳನ್ನು ಆಚರಿಸಲಾಗುತ್ತಿದೆ.

8. ನ್ಯೂ ಇಂಡಿಯ ಅಶ್ಯೂರೆನ್ಸ್ ಕಂಪನಿಯ ಸಹಯೋಗದೊಂದಿಗೆ ಪ್ರಧಾನ ಮಂತ್ರಿ ಸುರಕ್ಷಾ ಭೀಮಾ ಯೋಜನೆಯ ಸೌಲಭ್ಯ ಪಡೆದಿರುವವರಿಗೆ ವಾರ್ಷಿಕ ರೂ.12 ಪಾವತಿಸುವ ಮೂಲಕ ರೂ.2,00,000/– ಗಳ ಅಪಘಾತ ವಿಮೆ, ರೂ.1,00,000/– ಗಳ ಅಂಗವಿಕಲತೆಗೆ ಜೀವ ವಿಮೆ ಪಡೆಯಬಹುದಾಗಿದ್ದು ಸದಸ್ಯರು/ಗ್ರಾಹಕರು ಈ ಯೋಜನೆಯ ಸೌಲಭ್ಯ ಪಡೆಯಲು ಕೋರಲಾಗಿದೆ.

9. ಭಾರತೀಯ ರಿಸರ್ವ್ ಬ್ಯಾಂಕಿನವರು ಬ್ಯಾಂಕಿನ ಪರಿವೀಕ್ಷಣೆಯನ್ನು ದಿನಾಂಕ 06.01.2021 ರಿಂದ 03.02.2021 ರವರೆಗೆ ನಡೆಸಿದರು. ಪರಿವೀಕ್ಷಣೆಗೆ ಅನುಪಾಲನಾ ವರದಿಯನ್ನು ಸಕಾಲದಲ್ಲಿ ಸಲ್ಲಿಸಲಾಯಿತು.

10. ಸಣ್ಣ ವ್ಯಾಪರಿಗಳಿಗೆ ಉತ್ತೇಜನ ನೀಡುವ ಸಲುವಾಗಿ ದಿನಾಂಕ 21.06.2021 ರಂದು ಸ್ಮಾಲ್ ಬಿಸಿನೆಸ್ ಲೋನ್ ಯೋಜನೆ ಪ್ರಾರಂಭಿಸಲಾಯಿತು.

**ಸಾಮಾಜಿಕ ಕಳಕಳಿಯ ಕಾರ್ಯ**

- ವರದಿ ಸಾಲಿನಲ್ಲಿ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ ಉದ್ದೇಶಗಳಿಗೆ ಸಂಬಂಧಪಟ್ಟ 20 ಫಲಾನುಭವಿಗಳಿಗೆ ರೂ.202060/– ಮೊತ್ತವನ್ನು ಜಾಹೀರಾತು ಮೂಲಕ ವಿನಿಯೋಗಿಸಲಾಗಿದೆ.

## ಶ್ರದ್ಧಾಂಜಲಿ

ವರದಿಯ ಸಾಲಿನಲ್ಲಿ ಬ್ಯಾಂಕಿನ ಈ ಕೆಳಕಂಡ ಒಟ್ಟು 246 ಸದಸ್ಯರ/ಸಹ ಸದಸ್ಯರ ನಿಧನದ ವಿಷಯ ತಿಳಿಸಲು ವಿಷಾದಿಸುತ್ತೇವೆ. ಅವರ ಕುಟುಂಬಕ್ಕೆ ಸಂತಾಪ ಸೂಚಿಸುವುದರ ಮೂಲಕ ಶ್ರದ್ಧಾಂಜಲಿ ಸಲ್ಲಿಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ ಎಂದು ಭಾವಿಸುತ್ತೇವೆ.

| ಕ್ರ.ಸಂ | ಸದಸ್ಯತ್ವ ಸಂ | ಸದಸ್ಯರ ಹೆಸರು |
|---|---|---|
| 1 | 20 | ಶ್ರೀನಿವಾಸಮೂರ್ತಿ ಎನ್. |
| 2 | 22 | ಕುಲಕರ್ಣಿ ಪಿ. |
| 3 | 93 | ಕೃಷ್ಣಮೂರ್ತಿ ಎಂ.ಎಸ್. |

| ಕ್ರ.ಸಂ | ಸದಸ್ಯತ್ವ ಸಂ | ಸದಸ್ಯರ ಹೆಸರು |
|---|---|---|
| 4 | 119 | ಹಿರಿಯಣ್ಣ ಎಂ.ಜಿ. |
| 5 | 216 | ಕೃಷ್ಣಸ್ವಾಮಿ ಹೆಚ್.ಎಸ್. |
| 6 | 374 | ನರಹರಿರಾವ್ ಬಿ.ಪಿ. |

| ಕ್ರ.ಸಂ | ಸದಸ್ಯತ್ವ ಸಂ | ಸದಸ್ಯರ ಹೆಸರು |
|---|---|---|
| 7 | 412 | ಸೀಬಿ ನರಸಿಂಹಮೂರ್ತಿ ಎ.ಆರ್. |
| 8 | 627 | ಗುರುಮೂರ್ತಿ ಬಿ.ಎನ್. |
| 9 | 661 | ನಾಗೇಶ್ ರಾವ್ ಜಿ. |
| 10 | 767 | ಲಕ್ಷ್ಮೀದೇವಮ್ಮ ಎಂ.ಎನ್. |
| 11 | 768 | ಗಣೇಶ್ ರಾವ್ ಬಿ.ವಿ. |
| 12 | 1069 | ಅಶ್ವತ್ಥನಾರಾಯಣರಾವ್ ಎನ್. |
| 13 | 1134 | ವೆಂಕಟರಾಮಯ್ಯ ಎನ್. |
| 14 | 1161 | ಶ್ರೀಕಂಠಮೂರ್ತಿ |
| 15 | 1254 | ಭಾಸ್ಕರ್ ಸಿ.ಎನ್. |
| 16 | 1336 | ಗಂಟೆ ಕೇಶವಮೂರ್ತಿ ಜಿ. |
| 17 | 1513 | ಇಂದಿರಾ ರೆಡ್ಡಿ ವಿ.ಆರ್. |
| 18 | 1643 | ನಾಗರಾಜ್ ಟಿ.ಕೆ. |
| 19 | 1669 | ಕೃಷ್ಣಮೂರ್ತಿ ವಿ.ಎನ್. |
| 20 | 1802 | ಹನುಮಂತರಾವ್ ಜಿ.ವಿ. |
| 21 | 1823 | ರಾಮಚಂದ್ರ ಕೆ.ವಿ. |
| 22 | 1928 | ಸುಬ್ಬರಾವ್ ಎಂ.ಎ. |
| 23 | 2049 | ವಿಶಾಲಾಕ್ಷಿ |
| 24 | 2056 | ರಾಘವೇಂದ್ರರಾವ್ ಎಸ್. |
| 25 | 2178 | ವೆಂಕಟೇಶ್ ಎಸ್. |
| 26 | 2230 | ಮೋಹನ್ ಇ. |
| 27 | 2246 | ಕೇಶವಮೂರ್ತಿ ಬಿ.ವಿ. |
| 28 | 2256 | ಜಗನ್ನಾಥ್ ಎಂ.ವಿ. |
| 29 | 2260 | ಸತ್ಯನಾರಾಯಣರಾವ್ ಎನ್. |
| 30 | 2279 | ಮುರಳೀಧರರಾವ್ ಪಿ.ಎಸ್. |
| 31 | 2282 | ಅನಂತರಾಮು ಹೆಚ್. |
| 32 | 2313 | ಶ್ರೀನಾಥ್ ಎನ್. |
| 33 | 2536 | ಸುಬ್ಬಾ ನಂಜುಂಡಶಾಸ್ತ್ರಿ |
| 34 | 2780 | ಕೃಷ್ಣಸ್ವಾಮಿ ಹೆಚ್.ಎನ್. |

| ಕ್ರ.ಸಂ | ಸದಸ್ಯತ್ವ ಸಂ | ಸದಸ್ಯರ ಹೆಸರು |
|---|---|---|
| 35 | 2783 | ರಾಮಚಂದ್ರ ಐ.ಜಿ. |
| 36 | 2989 | ಗೋಪೀನಾಥ್ ಎನ್. |
| 37 | 3018 | ಸಾವಿತ್ರಮ್ಮ ವಿ.ಎಸ್. |
| 38 | 3136 | ಕೃಷ್ಣಮೂರ್ತಿ ಎಸ್.ಸಿ. |
| 39 | 3275 | ಜೋಯಿಸ್ ಬಿ.ವಿ.ಎಸ್. |
| 40 | 3375 | ನಾರಾಯಣ ಐಯ್ಯಂಗಾರ್ ಸಿ.ಎನ್. |
| 41 | 3633 | ಶಂಕರನ್ ಎಸ್.ಆರ್ |
| 42 | 3781 | ಕೃಷ್ಣರಾವ್ ಜೆ.ಎಸ್. |
| 43 | 3829 | ಗೋಪಾಲ್ ದೇವಧರ್ |
| 44 | 3840 | ವೆಂಕಟರಾಯಪ್ಪ ಹೆಚ್.ಎಸ್. |
| 45 | 3950 | ಗೋಪಾಲಕೃಷ್ಣ ವೈ.ಎನ್ |
| 46 | 4020 | ಕನಕಮ್ಮ ಎಂ.ಆರ್. |
| 47 | 4056 | ಕೃಷ್ಣಸ್ವಾಮಿ ಎಸ್. |
| 48 | 4070 | ಲಕ್ಷ್ಮಿಕಾಂತನ್ |
| 49 | 4143 | ನಾಗರಾಜರಾವ್ ಎಂ.ಎಸ್. |
| 50 | 4181 | ನಾರಾಯಣ ಎನ್.ಆರ್. |
| 51 | 4335 | ರಾಮಕೃಷ್ಣನ್ |
| 52 | 4347 | ರಂಗನಾಥ ಎ. |
| 53 | 4582 | ವೆಂಕಟದಾಸು |
| 54 | 4920 | ನಾರಾಯಣರಾವ್ ವಿ. |
| 55 | 5102 | ಮಂಜುನಾಥ ಎಸ್ |
| 56 | 5194 | ಉಮೇಶ್ ಜೆ. |
| 57 | 5258 | ವೆಂಕಟೇಶ್ ಎಂ.ಎಸ್. |
| 58 | 5362 | ಶ್ರೀಕಂಠಯ್ಯ ಎಂ.ಆರ್. |
| 59 | 5443 | ಸತ್ಯನಾರಾಯಣರಾವ್ ಬಿ. |
| 60 | 5685 | ಶ್ರೀಧರ ಮೂರ್ತಿ ಎ.ಎಸ್. |
| 61 | 5752 | ಲಕ್ಷ್ಮಿ ಗೋಪಾಲ್ |
| 62 | 5879 | ನಾಗರಾಜ್ ಕಾರಂತ್ ಕೆ. |

| ಕ್ರ.ಸಂ | ಸದಸ್ಯತ್ವ ಸಂ | ಸದಸ್ಯರ ಹೆಸರು |
|---|---|---|
| 63 | 6004 | ಲಲಿತಮ್ಮ ಹೆಚ್.ಎನ್. |
| 64 | 6176 | ಗುಂಡಪ್ಪ ವಿ.ಎನ್. |
| 65 | 6193 | ರಘುನಾಥ ಎಂ. |
| 66 | 6284 | ಭಾಗ್ಯಲಕ್ಷ್ಮಿ ಎಲ್.ಎನ್. |
| 67 | 6323 | ನಾಗಾನಂದ ಎಂ. |
| 68 | 6367 | ರಾವ್ ಹೆಚ್.ಎಸ್.ಎಸ್. |
| 69 | 6386 | ಶ್ರೀಕಂಠಮೂರ್ತಿ ಕೆ.ಎ |
| 70 | 6435 | ಬ್ರಹ್ಮದೇವಯ್ಯ ಎನ್. |
| 71 | 6443 | ಗಂಗಮ್ಮ |
| 72 | 6449 | ಜನಾರ್ದನ್ ಐಯ್ಯಂಗಾರ್ ಎಂ. ಆರ್. |
| 73 | 6455 | ಮಹದೇವರಾವ್ ಕೆ. |
| 74 | 7059 | ರಾಧ ಕೆ ಮಸೂರ್ |
| 75 | 7136 | ನಾಗರಾಜು ಹೆಚ್.ವಿ. |
| 76 | 7183 | ಸುಬ್ಬಲಕ್ಷ್ಮಿ ಎಲ್. |
| 77 | 7376 | ನಾಗರತ್ನ ಎಸ್. |
| 78 | 7522 | ರಾಜೇಶ್ವರಿ ಕೆ.ಎಸ್. |
| 79 | 7528 | ಶ್ರೀನಿವಾಸರಾವ್ ಟಿ.ಎನ್. |
| 80 | 7556 | ನಾಗರತ್ನ ಬಿ.ಎನ್. |
| 81 | 7578 | ಉಮಾದೇವಿ ಎಂ. |
| 82 | 7719 | ರಘುರಾಮ್ ಎಂ.ಜಿ. |
| 83 | 7733 | ಸೋಮಶೇಖರ್ ಪಿ.ಎಲ್. |
| 84 | 8285 | ಮಾರುತಿ ಎಲ್.ಎಸ್. |
| 85 | 8458 | ಶಿವರಾಮ್ ಕೆ.ಎಲ್. |
| 86 | 8467 | ಸುವರ್ಣ ಹೆಚ್.ಎನ್. |
| 87 | 8588 | ಸತ್ಯನಾರಾಯಣ ಆರ್.ಎಸ್. |
| 88 | 8708 | ಜಯಪ್ರಕಾಶ್ ಎಸ್. |
| 89 | 8747 | ನಾಗೇಶ್ ಆರ್. |

| ಕ್ರ.ಸಂ | ಸದಸ್ಯತ್ವ ಸಂ | ಸದಸ್ಯರ ಹೆಸರು |
|---|---|---|
| 90 | 8796 | ಸತ್ಯನಾರಾಯಣ ಎಸ್. |
| 91 | 9094 | ನೂತನ್ ಕುಲಕರ್ಣಿ |
| 92 | 9140 | ರಘುನಾಥ್ ಕಾಮತ್ ಕೆ. |
| 93 | 9210 | ಸಾವಿತ್ರಿ ಆರ್. |
| 94 | 9421 | ಮಾಲತಿ ಎಸ್.ವಿ. |
| 95 | 9533 | ನಾಯಕ್ ಯು.ಎಂ. |
| 96 | 9997 | ಸೀತಾಲಕ್ಷ್ಮಿ ಬಿ.ಎನ್. |
| 97 | 10008 | ಶಾರದಮ್ಮ ಹೆಚ್.ಎಸ್. |
| 98 | 10227 | ಹನುಮಂತರಾವ್ ಸಿ.ವಿ. |
| 99 | 10234 | ಜನಾರ್ದನ್ ಹೆಚ್.ಸಿ. |
| 100 | 10477 | ಸೂರ್ಯನಾರಾಯಣ ಹೆಚ್.ಎಂ. |
| 101 | 10530 | ಅನಸೂಯ ರಾಘವೇಂದ್ರರಾವ್ |
| 102 | 10694 | ಜಯಲಕ್ಷ್ಮಿ ಹೆಚ್. |
| 103 | 10721 | ಕಪನಿಪತಿ |
| 104 | 10874 | ನಾಗರಾಜು ಹೆಚ್.ವಿ. |
| 105 | 10933 | ನಾರಾಯಣ ಕೆ. |
| 106 | 10936 | ನಾರಾಯಣ ಎ.ಎನ್. |
| 107 | 10982 | ಪ್ರಕಾಶ್ ಆರ್. |
| 108 | 11088 | ರಮೇಶ್ ಹೆಚ್.ಎನ್. |
| 109 | 11192 | ಶಂಕರ್ ಕೆ. |
| 110 | 11338 | ಸುನಂದಮ್ಮ ಎಸ್. |
| 111 | 11374 | ಉದಯಶಂಕರ್ |
| 112 | 11495 | ಭ್ರಮರ ರಾಮನಾಥ್ |
| 113 | 11747 | ಶಾಂತ ಜಯರಾಮ್ |
| 114 | 11846 | ಆನಂದ್ ಡಿ.ಎಸ್. |
| 115 | 12232 | ಪ್ರಕಾಶ್ ವಿ.ಎಸ್. |
| 116 | 12426 | ಸಾವಿತ್ರಮ್ಮ ಬಿ. |
| 117 | 12506 | ಶ್ರೀನಿವಾಸ ಬಿ.ಕೆ. |

| ಕ್ರ.ಸಂ | ಸದಸ್ಯತ್ವ ಸಂ | ಸದಸ್ಯರ ಹೆಸರು |
|---|---|---|
| 118 | 12718 | ಚಂದ್ರಿಕ ರಮೇಶ್ |
| 119 | 12863 | ಪುರುಷೋತ್ತಮಸಿಂಹ ಆರ್.ಪಿ. |
| 120 | 12882 | ಪ್ರಕಾಶ್ ಎಸ್. |
| 121 | 13072 | ವೆಂಕಟೇಶರಾವ್ ವೈ.ಎಸ್. |
| 122 | 13368 | ಪದ್ಮಾವತಿ ಹೆಚ್.ಎಸ್. |
| 123 | 13621 | ವಿಟ್ಠಲ್ ರಾವ್ ವಿ. |
| 124 | 13979 | ಕೃಷ್ಣಮೂರ್ತಿ ಎಸ್.ಎನ್. |
| 125 | 14142 | ರಾಘವೇಂದ್ರ ಬಿ.ಎಸ್. |
| 126 | 14150 | ರಾಜು ಡಿ. |
| 127 | 14157 | ರಾಜಣ್ಣ. ಸಿ |
| 128 | 14395 | ವಸಂತ ಬಿ.ವಿ |
| 129 | 14514 | ಬೆನೆಡಿಕ್ಟ್ ಜಯರಾಜು |
| 130 | 14793 | ಮನೋಹರನ್ ಆರ್. |
| 131 | 15053 | ರಾಮಚಂದ್ರ ಹೆಚ್.ಎಸ್. |
| 132 | 15225 | ಸುಧೀಂದ್ರನಾಥ್ ಪಿ.ವಿ. |
| 133 | 15548 | ಕೃಷ್ಣಮೂರ್ತಿ ಕೆ.ಜಿ. |
| 134 | 15852 | ಗಿರಿಯಪ್ಪ |
| 135 | 15947 | ಲಕ್ಷ್ಮಿ ಪಿ. |
| 136 | 16035 | ಕೃಷ್ಣಮೂರ್ತಿ ಬಿ.ಎಸ್. |
| 137 | 16063 | ಪ್ರಭಾಕರ್ ವಾಚಸ್ಪತಿ |
| 138 | 16191 | ಪದ್ಮ ಕೆ.ವಿ, |
| 139 | 16394 | ರಾಮಪ್ಪ ವಿ. |
| 140 | 16556 | ನಾಗರಾಜ್ ಎಸ್.ಕೆ. |
| 141 | 16898 | ಪುಟ್ಟಸೋಮಾಚಾರ್ |
| 142 | 17001 | ಅರುಣ್ ಎಸ್. |
| 143 | 17214 | ಗುರುಪ್ರಸಾದ್ ಜಿ. |
| 144 | 17287 | ಶ್ರೀರಾಮ್ ಜಿ. |
| 145 | 17379 | ರಾಜಣ್ಣ ಕೆ ಹೆಚ್. |

| ಕ್ರ.ಸಂ | ಸದಸ್ಯತ್ವ ಸಂ | ಸದಸ್ಯರ ಹೆಸರು |
|---|---|---|
| 146 | 17528 | ಪ್ರಭ ಎಸ್. |
| 147 | 17720 | ಶ್ರೀಶ ಜಿ.ಟಿ. |
| 148 | 17814 | ಮುರಳೀಧರ ಬಿ.ಕೆ. |
| 149 | 18128 | ರಮೇಶ್ ಬಿ.ಕೆ. |
| 150 | 18223 | ಕೃಷ್ಣಮೂರ್ತಿ ಎ. |
| 151 | 18722 | ಗೀತಾ ವಿ. |
| 152 | 18845 | ಶಿವಶಂಕರ ಶಾಸ್ತ್ರಿ ಎ. |
| 153 | 19226 | ಉಮಾ ಬಿ.ವಿ |
| 154 | 19443 | ಚಂದ್ರಶೇಖರ್ ಜಿ.ಪಿ. |
| 155 | 19470 | ಮುರಳೀಧರ ವೈ.ಪಿ. |
| 156 | 19667 | ಪ್ರಮಥನಾಥ್ ಕೆ. |
| 157 | 19835 | ಲಲಿತ ಎಸ್ ಶಾಸ್ತ್ರಿ |
| 158 | 19837 | ಲಕ್ಷ್ಮೀನಾರಾಯಣ ಭಟ್ಟ ಎನ್. ಎಸ್. |
| 159 | 19840 | ಮಂಜುನಾಥ್ ಎನ್.ವಿ. |
| 160 | 19978 | ಶ್ರೀನಿವಾಸಮೂರ್ತಿ ಎ.ಎನ್. |
| 161 | 20051 | ಲಕ್ಷ್ಮಿನಾರಾಯಣ ಕೆ. |
| 162 | 20053 | ಮುರಳೀಕೃಷ್ಣ ಎನ್.ಪಿ. |
| 163 | 20241 | ಮಂಜುನಾಥೇಶ್ವರ ಕೆ.ವಿ. |
| 164 | 21251 | ಗಾಯತ್ರಿ |
| 165 | 21416 | ಗಾಯತ್ರಿ ಸುಕುಮಾರ್ |
| 166 | 21644 | ನಾಗರಾಜರಾವ್ ಹೆಚ್.ವಿ. |
| 167 | 21664 | ಪ್ರಕಾಶ್ ಹೆಚ್.ಎ. |
| 168 | 21867 | ಕೃಷ್ಣಮೂರ್ತಿ ಸಿ.ಎಲ್. |
| 169 | 22808 | ಸುಧಾಕರ್ ಬಿ.ಎನ್. |
| 170 | 22901 | ಮಾಧವ ಎಸ್.ಆರ್. |
| 171 | 23066 | ಕಿರಣ್ ಕುಮಾರ್ ಆರ್. |
| 172 | 23146 | ಸುಬ್ಬಲಕ್ಷಮ್ಮ |

| ಕ್ರ.ಸಂ | ಸದಸ್ಯತ್ವ ಸಂ | ಸದಸ್ಯರ ಹೆಸರು |
|---|---|---|
| 173 | 23517 | ನರಸಿಂಹಮೂರ್ತಿ ಡಿ.ವಿ. |
| 174 | 23579 | ವಿಮಲ ಡಿ. |
| 175 | 23808 | ವರಲಕ್ಷ್ಮಿ |
| 176 | 23935 | ಮಂಜುಳ ಕೆ.ಎನ್. |
| 177 | 24187 | ಕೃಷ್ಣಮೂರ್ತಿ |
| 178 | 24254 | ಜ್ಯೋತಿ ಹೆಚ್.ಎಸ್. |
| 179 | 24987 | ಶಾರದಮ್ಮ ಬಿ.ಸಿ. |
| 180 | 25039 | ಆದಿನಾರಾಯಣ ಶೆಟ್ಟಿ |
| 181 | 25288 | ಮೂರ್ತಿ ಎಸ್.ಎಲ್.ಎನ್. |
| 182 | 25657 | ಶ್ರೀಕೃಷ್ಣ ಹೆಚ್.ಎಸ್. |
| 183 | 26160 | ನರಸಿಂಹ ಜಿ.ಎ. |
| 184 | 26212 | ಸತ್ಯಸಂಧ ಎ. |
| 185 | 26534 | ಸೋಮಶೇಖರ್‌ರಾವ್ ಹೆಚ್.ಜಿ. |
| 186 | 26664 | ವೆಂಕಟೇಶಮೂರ್ತಿ |
| 187 | 28119 | ಸ್ವಾಮಿನಾಥನ್ ಎಸ್. |
| 188 | 28163 | ನಾಗಭೂಷಣ ಹೆಚ್.ಕೆ. |
| 189 | 28468 | ಪರಿಮಳ ಕೆ.ಜಿ. |
| 190 | 28579 | ಸುರಗಿಮಠ್ ಕೆ.ವಿ. |
| 191 | 28746 | ರಘು |
| 192 | 28859 | ಮಹದೇವ ಬಿ |
| 193 | 28918 | ಅರವಿಂದ ಎಸ್ ಕೊಳ್ಳೊಲಗಿ |
| 194 | 28939 | ಮಾದೇಶ ಎಂ. |
| 195 | 29084 | ಸುದರ್ಶನ್ ಎಸ್. |
| 196 | 29375 | ಶರ್ಮ ಎಸ್.ಎಲ್.ಎನ್. |
| 197 | 29449 | ವಿಜಯನಾಥ್ ವಿ.ಜಿ. |
| 198 | 29737 | ಜಿತೇಂದ್ರ ನಾಯಕ್ |
| 199 | 29879 | ಶಿವಯ್ಯ ವಿ. |
| 200 | 30010 | ಪ್ರಾಣೇಶ್ ಮೂರ್ತಿ ಎಸ್.ಎನ್. |

| ಕ್ರ.ಸಂ | ಸದಸ್ಯತ್ವ ಸಂ | ಸದಸ್ಯರ ಹೆಸರು |
|---|---|---|
| 201 | 30537 | ವಿಜಯೇಂದ್ರ ಹೆಚ್.ಎ. |
| 202 | 30620 | ರಾಮನಾಥ್ ಕೆ. |
| 203 | 30646 | ಉಷಾ ಆರ್. |
| 204 | 30776 | ವೆಂಕಟೇಶ್ ಬಿ.ಟಿ. |
| 205 | 31261 | ಬಾಲಸರಸ್ವತಿ |
| 206 | 31338 | ಅಶ್ವತ್ಥನಾರಾಯಣ ಹೆಚ್. |
| 207 | 31446 | ಮಂಜುನಾಥ್ ಆರ್ ಭಟ್ |
| 208 | 31518 | ಮುರಳಿ ಹೆಚ್.ಜಿ. |
| 209 | 31684 | ಪಾಂಡು ಬಿ.ಆರ್. |
| 210 | 32029 | ಹನುಮಂತಯ್ಯ ಸಿ. |
| 211 | 32067 | ಸುಕುಮಾರ್ ಬಿ.ಎಸ್. |
| 212 | 32429 | ಶಿವರಾಜ್ |
| 213 | 32449 | ವೆಂಕಟೇಶ್ವರರಾವ್ ಬಿ.ವಿ. |
| 214 | 32695 | ಶಾಂತಮ್ಮ ಕೆ.ವಿ. |
| 215 | 32794 | ಸತ್ಯನಾರಾಯಣರಾವ್ ವಿ. |
| 216 | 33009 | ಷರೀಫ್ ಖಾನ್ |
| 217 | 33227 | ಚಿತ್ರ ಎನ್. |
| 218 | 33367 | ರಮೇಶ್ ಬಾಬು ಕೆ.ಎಸ್. |
| 219 | 33617 | ಶ್ರೀನಿವಾಸ ಎ. |
| 220 | 33632 | ಶ್ರೀನಿವಾಸನ್ ಟಿ. |
| 221 | 33674 | ವೆಂಕಟಾಚಲ |
| 222 | 33731 | ಕೃಷ್ಣ ಕಿರಣ್ ಡಿ. |
| 223 | 33775 | ರಾಘವೇಂದ್ರ ಪ್ರಸಾದ್ ಬಿ.ಎ. |
| 224 | 33864 | ಕಮಲ ಎಸ್.ವಿ. |
| 225 | 33990 | ವೆಂಕಟರತ್ನಮ್ |
| 226 | 34067 | ಗುರುರಾವ್ ಎಂ.ಎಸ್. |
| 227 | 34157 | ಲಲಿತಮ್ಮ ಎನ್. |
| 228 | 34158 | ಲಿಂಗಮ್ಮ |

| ಕ್ರ.ಸಂ | ಸದಸ್ಯತ್ವ ಸಂ | ಸದಸ್ಯರ ಹೆಸರು |
|---|---|---|
| 229 | 34276 | ಕೃಷ್ಣಪ್ಪ ಸಿ. |
| 230 | 34453 | ಬಸವಯ್ಯ ಎಸ್. |
| 231 | 35149 | ನರಸಿಂಹಮೂರ್ತಿ ಜೆ. |
| 232 | 35299 | ಉಮೇಶ್ ಸಿ. |
| 01 | ಎ–851 | ಆನಂದನ್ ಐ. |
| 02 | ಎ–1161 | ಚೆಂಗಲರಾಯಪ್ಪ ಕೆ. |
| 03 | ಎ–2011 | ಗುರುರಾಜ್ ಡಿ.ಕೆ. |
| 04 | ಎ–3546 | ಶ್ರೀನಿವಾಸ ಜಿ.ಎ. |
| 05 | ಎ–4154 | ಅಶೋಕ್ ಕುಮಾರ್ ಎಂ. |

| ಕ್ರ.ಸಂ | ಸದಸ್ಯತ್ವ ಸಂ | ಸದಸ್ಯರ ಹೆಸರು |
|---|---|---|
| 06 | ಎ–7310 | ವೆಂಕಟೇಶ್ ಎ.ಟಿ. |
| 07 | ಎ–11229 | ಪುಷ್ಪಲತ ಎಸ್.ಕೆ. |
| 08 | ಎ–11583 | ಸ್ವರ್ಣ ಎಸ್. |
| 09 | ಎ–12139 | ಶ್ರೀಧರ ಹೆಚ್.ಕೆ. |
| 10 | ಎ–12781 | ದೇವರಾಜು ಹೆಚ್. |
| 11 | ಎ–13393 | ಜವರೇಗೌಡ ಎಸ್. |
| 12 | ಎ–13654 | ಪುಟ್ಟರಾಜು ಎಂ.ಎಸ್. |
| 13 | ಎ–13954 | ಮೋಹನ್ ಬಿ.ಟಿ |
| 14 | ಎ–14897 | ಮಂಜುಳ ಎಂ. |

## 01. ಬ್ಯಾಂಕಿನ ಆರ್ಥಿಕ ಫಲಿತಾಂಶದ ವಿವರ:

**ಕಳೆದ ಮೂರು ವರ್ಷಗಳಿಂದ ಆದ ಬ್ಯಾಂಕಿನ ಆರ್ಥಿಕ ಪ್ರಗತಿ ಈ ಕೆಳಕಂಡಂತಿದೆ:**

(ರೂ. ಲಕ್ಷಗಳಲ್ಲಿ)

| ಕ್ರ. ಸಂ | ವಿವರ | 31.03.2019 | 31.03.2020 | 31.03.2021 |
|---|---|---|---|---|
| 1. | ಪಾವತಿಯಾದ ಷೇರು ಬಂಡವಾಳ | 5324.26 | 5238.60 | 4830.90 |
| 2. | ಆಪದ್ಧನ ಮತ್ತು ನಿಧಿಗಳು | 19054.06 | 20316.73 | 22576.19 |
| 3. | ಠೇವಣಿಗಳು | 213483.83 | 177649.84 | 167903.89 |
| 4. | ಹೂಡಿಕೆಗಳು | 104083.72 | 69291.18 | 70580.64 |
| 5. | ಸಾಲ ಮತ್ತು ಮುಂಗಡಗಳು | 118998.87 | 123118.55 | 112801.58 |
| 6. | ದುಡಿಯುವ ಬಂಡವಾಳ | 240308.12 | 205229.06 | 196588.83 |
| 7. | ನಿವ್ವಳ ಲಾಭ | 364.61 | 216.17 | 109.98 |
| 8. | ಒಟ್ಟು ವಹಿವಾಟು | 332482.70 | 300768.39 | 280705.47 |

## 02. ಸದಸ್ಯತ್ವ ಷೇರು ಬಂಡವಾಳ :

2019–20ರ ಅಂತ್ಯಕ್ಕೆ ಬ್ಯಾಂಕು ಒಟ್ಟು 33287 ಸದಸ್ಯರನ್ನು ಹೊಂದಿದ್ದು, ವರದಿ ಸಾಲಿನಲ್ಲಿ 68 ನಿಯತ ಸದಸ್ಯರು ಹಾಗೂ 55 ಸಹ ಸದಸ್ಯರು ಸೇರ್ಪಡೆಯಾಗಿರುತ್ತಾರೆ. 842 ಸದಸ್ಯರು ಸದಸ್ಯತ್ವವನ್ನು ಹಿಂಪಡೆದುಕೊಂಡಿದ್ದು (246 ದೈವಾಧೀನರಾದ ಸದಸ್ಯರು ಸೇರಿ), 2020–21 ನೇ ಸಾಲಿನಲ್ಲಿ ಒಟ್ಟು ಸದಸ್ಯರ ಸಂಖ್ಯೆ 32568 ಇದರಲ್ಲಿ 28885 ನಿಯತ ಸದಸ್ಯರು 3683 ಸಹ

ಸದಸ್ಯರಿರುತ್ತಾರೆ. ವರದಿ ಸಾಲಿನಲ್ಲಿ ಷೇರು ಬಂಡವಾಳ ರೂ.48.30 ಕೋಟಿಗಳಾಗಿವೆ.

ಸಾಲ ಪಡೆಯುವಾಗ ಭಾರತೀಯ ರಿಜರ್ವ್ ಬ್ಯಾಂಕಿನ ನೀತಿಯಂತೆ ನಿರ್ದಿಷ್ಟ ಷೇರು ಧನ ಪಡೆಯಬೇಕಾಗುತ್ತದೆ. ಆಡಳಿತ ಮಂಡಲಿಯ ನೀತಿಯಂತೆ ಸಾಲವನ್ನು ಪಡೆಯುವ ಗ್ರಾಹಕರಿಗೆ ಮಾತ್ರ ಬ್ಯಾಂಕಿನ ಸಹ-ಸದಸ್ಯತ್ವವನ್ನು ನೀಡಲಾಗುತ್ತಿದೆ. ಮಾನ್ಯ ಸದಸ್ಯರು ತಮ್ಮ ಬಂಧು-ಮಿತ್ರರಿಗೆ ಬ್ಯಾಂಕಿನ ಅನೇಕ ವಿಧವಾದ ಸಾಲ ಸೌಲಭ್ಯಗಳ ವಿವರವನ್ನು ತಿಳಿಸಿ ಬ್ಯಾಂಕಿನಿಂದ ಅವಶ್ಯಕವಾದ ಸಾಲ ಸೌಲಭ್ಯವನ್ನು ಪಡೆಯುವ ಅವಕಾಶವನ್ನು ಪಡೆದುಕೊಳ್ಳಲು ಸಹಕರಿಸಬೇಕೆಂದು ಆಡಳಿತ ಮಂಡಲಿಯು ವಿನಂತಿಸುತ್ತದೆ.

ಹಿಂದಿನ ಮೂರು ಸಾಲುಗಳ ಷೇರು ಬಂಡವಾಳ ಹೋಲಿಕೆಯ ಅಂಕಿ-ಅಂಶಗಳ ವಿವರಣೆ ಈ ಕೆಳಕಂಡಂತಿರುತ್ತದೆ.

(ರೂ. ಲಕ್ಷಗಳಲ್ಲಿ)

| ಕ್ರಮ ಸಂ | ವಿವರ | 2018–19 | 2019–20 | 2020–21 |
|---|---|---|---|---|
| 1 | ಸಾಲು ಪ್ರಾರಂಭಕ್ಕಿದ್ದ ಷೇರು ಬಂಡವಾಳ | 5271.78 | 5324.26 | 5238.59 |
| 2 | ಸ್ವೀಕೃತಿಯಾದ ಷೇರು ಬಂಡವಾಳ | 529.96 | 544.96 | 114.09 |
| 3 | ಮರುಪಾವತಿಯಾದ ಷೇರು ಬಂಡವಾಳ | 477.48 | 630.63 | 521.78 |
| 4 | ವರ್ಷಾಂತ್ಯಕ್ಕೆ ಇದ್ದ ಷೇರು ಬಂಡವಾಳ | 5324.26 | 5238.59 | 4830.90 |

ಮರಣ ಹೊಂದಿದ ನಿಯತ ಸದಸ್ಯರ ವಾರಸುದಾರರಿಗೆ ನಿಯತ ಸದಸ್ಯತ್ವ ನೀಡುವ ಪದ್ಧತಿ ಆಡಳಿತ ಮಂಡಲಿ ನೀತಿಯಾಗಿದ್ದು 1996ರ ಅಂತ್ಯದ ವರೆಗೆ ಇರುವ ನಿಯತ ಸದಸ್ಯರ (ನಿಯತ ಸದಸ್ಯತ್ವ ಸಂಖ್ಯೆ.17966ರ ವರೆಗೆ) ಕುಟುಂಬದವರೊಬ್ಬರಿಗೆ ನಿಯತ ಸದಸ್ಯತ್ವ ನೀಡುವ ಅವಕಾಶ ಮುಂದುವರೆಸಿದ್ದು, ಸದಸ್ಯರು ಈ ಯೋಜನೆಯ ಲಾಭ ಪಡೆಯಲು ಆಡಳಿತ ಮಂಡಲಿ ಕೋರುತ್ತದೆ. ಅಂತಹ ಸದಸ್ಯರಿಗೆ ಪ್ರತ್ಯೇಕ ಮಾಹಿತಿ ನೀಡಲಾಗಿದೆ.

ಠೇವಣಿ ಸಂಗ್ರಹಣೆ ಕುಂಠಿತಗೊಂಡಿದ್ದು ಪರಿಣಾಮವಾಗಿ ಸಾಲ ನೀಡುವಿಕೆಯಲ್ಲಿ ಇಳಿಮುಖವಾದ್ದರಿಂದ ಷೇರು ಬಂಡವಾಳ ಗಣನೀಯವಾಗಿ ಕಡಿಮೆಯಾಗಿದೆ.

**03. ಕಾಯ್ದಿಟ್ಟ ನಿಧಿ ಹಾಗೂ ಇತರ ನಿಧಿಗಳು:**

ವರದಿ ಸಾಲಿನಲ್ಲಿ ಕಾಯ್ದಿರಿಸಿದ ನಿಧಿಗಳಲ್ಲಿ ಹಿತಕರ ಹೆಚ್ಚಳವಾಗಿದ್ದು ಆಪದ್ಧನದ ಒಟ್ಟು ಮೊತ್ತ ರೂ.22576.19ಲಕ್ಷದಷ್ಟಿದೆ. ಈ ರೀತಿ ಷೇರು ಮತ್ತು ನಿಧಿಗಳ ಒಟ್ಟು ಮೊತ್ತ ಸೇರಿದ ಸ್ವಂತ ನಿಧಿಯು ರೂ.274.07 ಕೋಟಿಗೂ ಮೀರಿದ್ದು ದಾಖಲೆಯ ದ್ಯೋತಕವಾಗಿದ್ದು ಬ್ಯಾಂಕಿನ ದೃಢತೆಯ ಸಂಕೇತವಾಗಿದೆ.

(ರೂ. ಲಕ್ಷಗಳಲ್ಲಿ)

| ಕ್ರ.ಸಂ. | ವಿವರಗಳು | 31.03.2020 | 31.03.2021 |
|---|---|---|---|
| 1. | ಆಪದ್ಧನ/ಕಾಯ್ದಿರಿಸಿದ ನಿಧಿ | 3474.51 | 3532.43 |
| 2 | ಕಟ್ಟಡ ನಿಧಿ | 1360.58 | 1370.58 |
| 3 | ಕರಡು ಹಾಗೂ ಸಂಶಯಾತ್ಮಕ ನಿಧಿ | 8035.96 | 10244.25 |
| 4 | ಉತ್ಪಾದಕ ಸಾಲಗಳ ಕರಡು ನಿಧಿ | 474.23 | 350.00 |
| 5 | ವಿದ್ಯಾನಿಧಿ | 65.87 | 63.91 |
| 6 | ಸದಸ್ಯರ ಕ್ಷೇಮಾಭಿವೃದ್ಧಿ ನಿಧಿ | 83.92 | 75.08 |
| 7 | ಲಾಭಾಂಶ ಸಮತೋಲನ ನಿಧಿ | 377.58 | 477.58 |
| 8 | ಧರ್ಮಾರ್ಥ ನಿಧಿ | 69.50 | 70.51 |
| 9 | ಸಿಬ್ಬಂದಿ ಕ್ಷೇಮಾಭಿವೃದ್ಧಿ ನಿಧಿ | 90.97 | 91.26 |
| 10 | ಮಹೋತ್ಸವ ನಿಧಿ | 96.84 | 108.84 |
| 11 | ಹೂಡಿಕೆ ಏರಿಳಿತಕ್ಕೆ ಕಾಯ್ದಿಟ್ಟ ನಿಧಿ | 1200.00 | 1200.00 |
| 12 | ಹೂಡಿಕೆಗಳ ಮೇಲೆ ಸವಕಳಿ ಕಾಯ್ದಿಟ್ಟ ನಿಧಿ | 1005.13 | 1005.13 |
| 13 | ಗೃಹಸಾಲ ವಿಶೇಷ ನಿಧಿ | 293.46 | 293.46 |
| 14 | ಸಾಮಾಜಿಕ ಕಲ್ಯಾಣ ನಿಧಿ | 45.16 | 50.16 |
| 15 | ಮರುಮೌಲ್ಯಮಾಪನ ನಿಧಿ | 3643.00 | 3643.00 |
| | **ಒಟ್ಟು** | **20316.73** | **22576.19** |

**04. ಠೇವಣಿಗಳು:**

ಬ್ಯಾಂಕಿನ ಒಟ್ಟು ಠೇವಣಿಯು ಮಾರ್ಚ್ 2021ಕ್ಕೆ 1679.04 ಕೋಟಿ ರೂ.ಗಳಾಗಿದ್ದು, ವರದಿ ಸಾಲಿನಲ್ಲಿ ರೂ.97 ಕೋಟಿ ಗಳಷ್ಟು ಕಡಿಮೆಯಾಗಿದೆ. ವರದಿ ಸಾಲು ಸೇರಿದಂತೆ 3 ವರ್ಷಗಳ ಹೋಲಿಕೆಯ ಅಂಕಿ–ಅಂಶಗಳು ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)

| ಕ್ರ.ಸಂ. | ಠೇವಣಿಗಳ ವಿವರ | 31.03.2019 | 31.03.2020 | 31.03.2021 |
|---|---|---|---|---|
| 1. | ನಿಶ್ಚಿತ ಠೇವಣಿ | 98477.06 | 78165.31 | 79485.24 |
| 2. | ಉಳಿತಾಯ ಠೇವಣಿ | 25228.17 | 22466.81 | 20488.29 |
| 3. | ಚಾಲ್ತಿ ಖಾತೆ ಠೇವಣಿ | 2663.97 | 1722.01 | 1767.22 |
| 4. | ಯೋಗಕ್ಷೇಮನಿಧಿ ಠೇವಣಿ | 82180.96 | 70942.45 | 62666.49 |

| | | | | |
|---|---|---|---|---|
| 5. | ಪುನರಾವರ್ತಿತ ಠೇವಣಿ | 4173.51 | 3660.48 | 3004.15 |
| 6. | ನಿತ್ಯ ನಿಧಿ ಠೇವಣಿ | 538.82 | 468.08 | 307.31 |
| 7. | ಸಿಬ್ಬಂದಿ ಭದ್ರತಾ ಠೇವಣಿ | 98.08 | 98.49 | 94.49 |
| 8. | ನಿತ್ಯನಿಧಿ ಸಂಗ್ರಹಕಾರರ ಭದ್ರತಾ ಠೇವಣಿ | 45.79 | 40.73 | 44.22 |
| 9. | ನಗದು ಸಾಲ/ಜಾಮೀನು ಸಾಲ ಖಾತೆಯಲ್ಲಿ ಜಮಾ ಶಿಲ್ಕು | 37.95 | 10.98 | 18.56 |
| 10. | ಹೆಚ್ಚುವರಿ ಕೈಗಡ ಖಾತೆಯಲ್ಲಿ ಜಮಾ ಶಿಲ್ಕು | 32.00 | 68.97 | 26.66 |
| 11. | ಟಿಆರ್‌ಎಸ್‌ಸಿ ನಗದು ಠೇವಣಿ | 0.37 | 0.37 | 0.00 |
| 12. | ಬಾಲಕ್ಷೇಮ ನಿಧಿ ಠೇವಣಿ | 4.12 | 1.19 | 1.27 |
| 13. | ಬಾಲಸಂಗ್ರಹ ಪುನರಾವರ್ತಿತ ಠೇವಣಿ | 3.03 | 3.99 | 0.00 |
| | **ಒಟ್ಟು** | **213483.83** | **177649.84** | **167903.90** |

ವರದಿ ಸಾಲಿನಲ್ಲಿ ಒಂದು ಸಲ ಮಾರುಕಟ್ಟೆಗನುಗುಣವಾಗಿ ಬಡ್ಡಿದರ ಕಡಿಮೆ ಮಾಡಲಾಗಿದ್ದು, ಹೆಚ್ಚುವರಿ ಠೇವಣಿಯನ್ನು ಲಾಭದಾಯಕವಾಗಿ ಹೂಡಿಕೆ ಮಾಡಿ ಆದಾಯ ಗಳಿಸಲಾಗಿದೆ. ವಿವರಣೆ ಕಂಡಿಕೆ 5 ರಲ್ಲಿ ವಿವರಿಸಿದೆ.

ಬ್ಯಾಂಕಿನ ಪ್ರತಿ ಠೇವಣಿದಾರರ ರೂ.5,00,000/– ಗಳ ಠೇವಣಿಗಳು "ಡೆಪಾಸಿಟ್ ಇನ್ಶೂರೆನ್ಸ್ ಅಂಡ್ ಕ್ರೆಡಿಟ್ ಗ್ಯಾರಂಟಿ ಕಾರ್ಪೊರೇಷನ್ ಆಫ್ ಇಂಡಿಯ" ರವರಿಂದ ವಿಮೆಗೊಳಪಟ್ಟಿದೆ. 2020–21 ನೇ ಸಾಲಿನಲ್ಲಿ ಬ್ಯಾಂಕಿನ ಠೇವಣಿಗಳ ಮೇಲೆ ರೂ.100.00ಕ್ಕೆ 0.06 ಪೈಸೆಯಂತೆ 2 ಕಂತುಗಳಲ್ಲಿ ಒಟ್ಟು ಪ್ರೀಮಿಯಂ ರೂ. 2,46,98,580/– ಗಳನ್ನು ಪಾವತಿಸಿದೆ.

*** ಹಿರಿಯ ನಾಗರಿಕರಿಗೆ ವಿಶೇಷ ಸೌಲಭ್ಯಗಳು**

- ಉಚಿತ ಚೆಕ್ ಪುಸ್ತಕಗಳ ವಿತರಣೆ, ಚೆಕ್ ಪುಸ್ತಕ ಹೊಂದಲು ಖಾತೆಯಲ್ಲಿರಿಸಬೇಕಾದ ಕನಿಷ್ಟ ಮೊಬಲಗು ರೂ.50/–
- ಠೇವಣಿಗಳ ಮೇಲೆ ಶೇ.0.25 ರಿಂದ 0.50ರಷ್ಟು ಹೆಚ್ಚಿನ ಬಡ್ಡಿ ದರವನ್ನು ನೀಡಲಾಗುವುದು
- ಠೇವಣಿ ಆಧಾರಿತ ಸಾಲಗಳಿಗೆ ಠೇವಣಿ ದರಕ್ಕಿಂತ ಶೇ.0.50 ರಷ್ಟು ಮಾತ್ರ ಹೆಚ್ಚಿನ ಬಡ್ಡಿ ವಿಧಿಸಲಾಗುವುದು
- ಅವಧಿ ಠೇವಣಿಗಳ ಮೇಲೆ ಬಡ್ಡಿ ಸೋಡಿ ಮಾಡದೆ ಮಾಹೆಯಾನ ಬಡ್ಡಿ ನೀಡಲಾಗುವುದು
- ನಿಗದಿತ ಅವಧಿಗೆ ಮುನ್ನ ಠೇವಣಿಯನ್ನು ದಂಡವಿಲ್ಲದೆ ಹಿಂಪಡೆಯಬಹುದು

ಅವಧಿ ಠೇವಣಿಗಳು ಮತ್ತು CASA ಠೇವಣಿಗಳ ಅನುಪಾತ ವೃದ್ಧಿಸಲು ATM "RuPay" ಕಾರ್ಡುಗಳನ್ನು ನೀಡಲಾಗುತ್ತಿದೆ. ನಮ್ಮ ಬ್ಯಾಂಕಿನ RuPay ATM ಕಾರ್ಡುಗಳನ್ನು ಯಾವುದೇ ಬ್ಯಾಂಕಿನ ATM ನಲ್ಲಾಗಲೀ, ವ್ಯಾಪಾರ ಸ್ಥಳಗಳಲ್ಲಾಗಲೀ (POS) ಹಾಗೂ ಜಾಲತಾಣದ ಮೂಲಕ ಯಾವುದೇ ಸೇವೆ/ ವಸ್ತುಗಳನ್ನು(e.Com) ಖರೀದಿಸಬಹುದಾಗಿದೆ. ಸದಸ್ಯರು ತಮ್ಮ ನೆರೆಹೊರೆಯವರು, ಬಾಂಧವರನ್ನು ಬ್ಯಾಂಕಿಗೆ ಪರಿಚಯಿಸಿ, ಠೇವಣಿಗಳ ಮೇಲಿನ ಸರಾಸರಿ ವೆಚ್ಚವನ್ನು ಸರಿದೂಗಿಸುವ ಆಡಳಿತ ಮಂಡಲಿ ಪ್ರಯತ್ನಕ್ಕೆ ಸಹಕರಿಸಬೇಕಾಗಿ ಕೋರುತ್ತದೆ.

ಇದರೊಟ್ಟಿಗೆ ಬೇರೆ ಬ್ಯಾಂಕುಗಳ ಒಡಂಬಡಿಕೆಯೊಂದಿಗೆ, ವಾಣಿಜ್ಯ ವ್ಯಾಪಾರ ನಡೆಸುತ್ತಿರುವ ಸದಸ್ಯರುಗಳ ಸ್ಥಳಗಳಿಗೆ ನಮ್ಮದೇ POS(Swiping Machine) ಸಹ ನೀಡಲಾಗುತ್ತಿದೆ. ಸದಸ್ಯರು ಈ ಸೌಲಭ್ಯದ ಸದುಪಯೋಗಪಡಿಸಿಕೊಳ್ಳಬೇಕಾಗಿ ಕೋರಿಕೊಳ್ಳುತ್ತೇವೆ.

ಉಳಿತಾಯ ಖಾತೆಗಳಲ್ಲಿ ಬಡ್ಡಿಯನ್ನು ತ್ರೈಮಾಸಿಕಕ್ಕೊಮ್ಮೆ ಪಾವತಿಸಲಾಗುತ್ತಿದೆ.

ಮೇ 2014ರಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆಯಂತೆ 10 ವರ್ಷಕ್ಕಿಂತ ಹೆಚ್ಚು ಅವಧಿಯಲ್ಲಿ ವ್ಯವಹಾರ (Transaction) ನಡೆಸದೇ ಇರುವ ಠೇವಣಿಗಳನ್ನು ಭಾರತೀಯ ರಿಸರ್ವ್ ಬ್ಯಾಂಕಿನ 'ಠೇವಣಿದಾರರ ಶಿಕ್ಷಣ ಮತ್ತು ಜಾಗೃತಿ ನಿಧಿ' (DEAF) ಖಾತೆಗೆ ವರ್ಗಾಯಿಸಬೇಕಾಗಿರುತ್ತದೆ. ಆದ್ದರಿಂದ ಸದಸ್ಯರು ತಮ್ಮ ಖಾತೆಗಳಲ್ಲಿ ಆಗಾಗ ವ್ಯವಹರಿಸುತ್ತಿರಬೇಕಾಗಿ ವಿನಂತಿಸುತ್ತೇವೆ.

**05. ಹೂಡಿಕೆಗಳು:**

ಭಾರತೀಯ ರಿಸರ್ವ್ ಬ್ಯಾಂಕ್ ನಿರ್ದೇಶನಗಳಿಗೆ ಅನುಗುಣವಾಗಿ ಹೂಡಿಕೆಗಳನ್ನು ಲಾಭದಾಯಕವಾಗಿ ಮಾನ್ಯತೆ ಪಡೆದ ಸಂಸ್ಥೆಗಳಲ್ಲಿ ಮಾಡಲಾಗಿದೆ. ವರದಿಯ ಸಾಲಿನಲ್ಲಿ ಒಟ್ಟು ಹೂಡಿಕೆಗಳ ಮೊತ್ತ ರೂ.705.81 ಕೋಟಿಗಳಿದ್ದು ವಿವರ ಈ ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)

| ವಿವರಗಳು | **31.03.2020** | **31.03.2021** |
|---|---|---|
| ಅವಧಿ ಠೇವಣಿ ಅಪೆಕ್ಸ್ ಮತ್ತು ವಾಣಿಜ್ಯ ಬ್ಯಾಂಕ್‌ನಲ್ಲಿ | 12998.47 | 9579.93 |
| ಕರೆ ಠೇವಣಿ, ಮ್ಯೂಚುಯಲ್ ಫಂಡ್ ಹಾಗೂ ವಾಣಿಜ್ಯ ಪತ್ರಗಳು | 4790.07 | 3060.06 |
| ರಾಜ್ಯ ಹಾಗೂ ಕೇಂದ್ರ ಸರ್ಕಾರದ ಭದ್ರತಾ ಪತ್ರಗಳಲ್ಲಿ | 51502.64 | 57940.65 |
| **ಒಟ್ಟು** | 69291.18 | **70580.64** |

ಕಳೆದ ಸಾಲಿನಲ್ಲಿ ಹೂಡಿಕೆಗಳಿಂದ ಬಂದ ಬಡ್ಡಿ ಆದಾಯ ರೂ.5484.61 ಲಕ್ಷ ಇದ್ದು, ಈ ಸಾಲಿನ ಆದಾಯ ರೂ.3595.11 ಲಕ್ಷ ಆಗಿದೆ. ಕಳೆದ ಸಾಲಿನಲ್ಲಿ ಸರಾಸರಿ ಬಡ್ಡಿ ಆದಾಯ ಶೇ.5.60 ಇದ್ದು, ಪ್ರಸಕ್ತ ಸಾಲಿನಲ್ಲಿ ಶೇ.5.54 ಆಗಿರುತ್ತದೆ.

ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದಂತೆ ನಿವ್ವಳ ಜವಾಬ್ದಾರಿಯ ಮೊತ್ತದ ಶೇ.18ರಷ್ಟನ್ನು ಸರ್ಕಾರಿ ಪತ್ರಗಳಲ್ಲಿ ತೊಡಗಿಸಬೇಕಾಗಿದೆ. ವಾಣಿಜ್ಯ ಬ್ಯಾಂಕುಗಳಲ್ಲಿ ಒಟ್ಟು ಠೇವಣಿಯನ್ನು ವಿನಿಯೋಗಿಸುವ ಮೊತ್ತ ಬ್ಯಾಂಕಿನ ಒಟ್ಟು ಠೇವಣಿಯ ಶೇ.20 ಕ್ಕೆ ಸೀಮಿತವಾಗಿದೆ. ನಾನ್ ಎಸ್.ಎಲ್.ಆರ್ ಪತ್ರಗಳಲ್ಲಿ ಶೇ.10ರಷ್ಟನ್ನು ವಿನಿಯೋಗಿಸಬಹುದಾಗಿದೆ. ಮ್ಯೂಚಯಲ್ ಫಂಡ್ ಹೂಡಿಕೆಗಳು ರಿಸರ್ವ್ ಬ್ಯಾಂಕಿನ ನಿಯಮಗಳನ್ವಯ ತೊಡಗಿಸಲಾಗಿದೆ.

ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದಂತೆ ಹೂಡಿಕೆಗಳ ಏರಿಳಿತ ಮೀಸಲು ನಿಧಿಯಲ್ಲಿ ರೂ.12 ಕೋಟಿ ಇದ್ದು, ಹೂಡಿಕೆಗಳ ಮೇಲಿನ ಸವಕಳಿಯ ಆಕಸ್ಮಿಕ ನಿಧಿಯಲ್ಲಿ ರೂ.10.05 ಕೋಟಿ ಇರುತ್ತದೆ.

ಅಧ್ಯಕ್ಷರು ಕಾರ್ವಿ ಸ್ಟಾಕ್ ಬ್ರೋಕಿಂಗ್ ಸಂಸ್ಥೆಯ ವಾಣಿಜ್ಯ ಪತ್ರದಲ್ಲಿರುವ ಹೂಡಿಕೆ ಮೊತ್ತವನ್ನು ಹಿಂಪಡೆಯು, ಬಗ್ಗೆ ಮಾನ್ಯ ಕೇಂದ್ರ ಹಣಕಾಸು ಸಚಿವೆ ಶ್ರೀಮತಿ.ನಿರ್ಮಲಾ ಸೀತಾರಾಮನ್‌ರವರನ್ನು ಖುದ್ದಾಗಿ ಭೇಟಿಯಾಗಿ, ಕಾರ್ವಿ ಸಂಸ್ಥೆಗೆ ಪಟ್ಟಣ ಸಹಕಾರಿ ಬ್ಯಾಂಕುಗಳಿಂದ ಸಂಗ್ರಹಿಸಿರುವ ವಾಣಿಜ್ಯ ಪತ್ರದ ಹೂಡಿಕೆಗಳನ್ನು ಹಿಂದಿರುಗಿಸಲು ಆದೇಶ ನೀಡಬೇಕು ಎಂಬ ಮನವಿ ಪತ್ರ 19.02.2021 ರಂದು ನೀಡಿದ್ದು ಅದನ್ನು ಹಣಕಾಸು ಸಚಿವೆ ಸ್ವೀಕರಿಸಿ ಕಾರ್ವಿ ಸಂಸ್ಥೆಗೆ ನಿರ್ದೇಶನ ನೀಡುವುದಾಗಿ ತಿಳಿಸಿರುತ್ತಾರೆ ಎಂದು ತಿಳಿಸಲು ಇಚ್ಛಿಸುತ್ತೇವೆ.

**2020–21** ನೇ ಸಾಲಿನಲ್ಲಿಯೂ ರಾಜ್ಯ ಸಹಕಾರ ಸಂಘಗಳ ಕಾನೂನು, 1959 ಕಲಂ 58ರಲ್ಲಿ ನಮೂದಿಸಿದಂತೆ, ಬ್ಯಾಂಕಿನ ದುಡಿಯುವ ಬಂಡವಾಳದಲ್ಲಿ ಲಭ್ಯವಿರುವ ಹೆಚ್ಚುವರಿ ಮೊತ್ತ, ನಿಧಿಗಳನ್ನು ಭಾರತೀಯ ರಿಸರ್ವ್ ಬ್ಯಾಂಕಿನ ನಿಯಮಗಳಿಗೊಳಪಟ್ಟು, ವಾಣಿಜ್ಯ ಬ್ಯಾಂಕುಗಳಲ್ಲಿ ಸಾಲ ಪತ್ರಗಳಲ್ಲಿ, ಡೆಟ್‌ಫಂಡ್‌ಗಳಲ್ಲಿ, ನಾನ್ ಎಸ್‌ಎಲ್‌ಆರ್ ಪತ್ರಗಳಲ್ಲಿ ವಿನಿಯೋಜಿಸಲು ಸಾಮಾನ್ಯ ಸಭೆಯ ಸಮ್ಮತಿಯನ್ನು ಈ ಮೂಲಕ ಕೋರಲಾಗಿದೆ.

**06. ಸಾಲ ಮತ್ತು ಮುಂಗಡಗಳು:**

ನಮ್ಮ ಬ್ಯಾಂಕ್ ಭಾರತೀಯ ರಿಸರ್ವ್ ಬ್ಯಾಂಕಿನ ನಿಯಮಾವಳಿಗಳ ಪ್ರಕಾರ 4 Credit Information Company ಗಳೊಂದಿಗೆ ಅಂದರೆ CIBIL, HIMARK, EQUIFAX, EXPERIAN ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಂಡಿದ್ದು, ಅದರಂತೆ ನಮ್ಮ ಎಲ್ಲಾ ಸದಸ್ಯರ ಸಾಲಗಳ ವಿವರಗಳನ್ನು ಈ ಸಂಸ್ಥೆಗಳಿಗೆ ಸಲ್ಲಿಸಬೇಕಾಗಿದೆ. ಇದರಿಂದಾಗಿ, ನಮ್ಮ ಸಾಲಗಾರರು ಸುಸ್ತಿದಾರರಾದಲ್ಲಿ, ಅವರ Credit Rating ಕಡಿಮೆಯಾಗಲಿದ್ದು, ಈ ಪರಿಸ್ಥಿತಿಯನ್ನು ತಡೆಗಟ್ಟಬೇಕಾದಲ್ಲಿ ತಮ್ಮ ಸಾಲಗಳನ್ನು ಕಾಲಕಾಲಕ್ಕೆ ಸರಿಯಾಗಿ ಪಾವತಿಸಬೇಕಾಗಿ ಆಡಳಿತ ಮಂಡಲಿ ಕಳಕಳಿಯಿಂದ ಪ್ರಾರ್ಥಿಸುತ್ತದೆ. ಅದಲ್ಲದೆ, ಸುಸ್ತಿದಾರ ಸಾಲಗಾರರು ಬೇರೆ ಬೇರೆ ಹಣಕಾಸು ಸಂಸ್ಥೆಯಲ್ಲಿ ಸಾಲ ಪಡೆಯುವ ಅವಕಾಶ ವಂಚಿತರಾಗಲಿದ್ದಾರೆ.

ಬ್ಯಾಂಕಿನ ಪ್ರಸ್ತುತ ಸಾಲ ಮಿತಿ (Exposure limit) ರೂ. 8.02 ಕೋಟಿಗಳು ಅಂದರೆ ಒಬ್ಬ ಅರ್ಹ ಸದಸ್ಯ ಹಾಗೂ ಅವರಿಗೆ ಸಂಬಂಧಪಟ್ಟ ಸಮೂಹ ಸಂಸ್ಥೆಗಳನ್ನು ಒಳಗೊಂಡಂತೆ ಗರಿಷ್ಠ ರೂ. 13.38 ಕೋಟಿಯವರೆಗೆ ಸಾಲ ಪಡೆಯಬಹುದಾಗಿದ್ದು, ಭಾರತೀಯ ರಿಸರ್ವ್ ಬ್ಯಾಂಕಿನ ಬಿಗು ನೀತಿಯಂತೆ, ಸದ್ಯಕ್ಕೆ ಬ್ಯಾಂಕಿನ ಸಾಲಮಿತಿಯು ಶೇ.50.00ರಷ್ಟಕ್ಕೆ ಸೀಮಿತವಾಗಿದೆ. ಆದ್ದರಿಂದ, ಸಾಲಗಾರರು, ತಮ್ಮ

ತಮ್ಮ ಸಾಲದ ಖಾತೆಗೆ ನಿಯಮಿತ ಕಾಲದಲ್ಲಿ, ಕಂತುಗಳನ್ನು ಪಾವತಿಸಬೇಕಾಗಿ ವಿನಂತಿ.

ವರದಿ ವರ್ಷದಲ್ಲಿ ಒಟ್ಟು ಸಾಲ ಮತ್ತು ಮುಂಗಡಗಳ ಮೊತ್ತ ರೂ. 1128.02 ಕೋಟಿಯಿದ್ದು, ಕಳೆದ ಹಣಕಾಸು ವರ್ಷಕ್ಕೆ ಹೋಲಿಸಿದರೆ ರೂ. 103.16 ಕೋಟಿಯಷ್ಟು ಕಡಿಮೆಯಾಗಿದೆ. ಠೇವಣಿ ಮತ್ತು ಸಾಲಗಳ ಅನುಪಾತ (CD Ratio) ವರ್ಷಾಂತ್ಯಕ್ಕೆ ಶೇ.67.18 ರಷ್ಟು ಇರುತ್ತದೆ. ಭಾರತೀಯ ರಿಸರ್ವ್ ಬ್ಯಾಂಕಿನ ನಿಯಮದಂತೆ ವಿವಿಧೋದ್ದೇಶಗಳಿಗೆ ಸಾಲ ನೀಡುವ ಮಿತಿಯೊಳಗೆ ಸಾಲ ಮಂಜೂರಾತಿ ಮಾಡಬೇಕಾಗಿರುತ್ತದೆ. ಹೊಸ ಸಾಲಗಳನ್ನು ನೀಡುವಾಗ ಹೆಚ್ಚಿನ ಜಾಗರೂಕತೆ ವಹಿಸಲಾಗಿದೆ. ಪ್ರಸಕ್ತ (transition period) ಸಂದರ್ಭದಲ್ಲಿ ಸಾಲ ನೀಡುವಿಕೆಯ ಪ್ರಮಾಣ ತಗ್ಗಿರುವುದರಿಂದ, ಲಾಭ ಗಳಿಕೆಯ ಮೇಲೆ ಪ್ರಭಾವ ಬೀರಿದೆ.

ಲಾಕ್‌ಡೌನ್, ಕಂಟೈನ್ಮೆಂಟ್ ಝೋನ್, ಹೋಮ್ ಐಸೋಲೇಷನ್ ಮುಂತಾದ ಪರಿಸ್ಥಿತಿಗಳಿಂದ ಇಡೀ ದೇಶವು ಆರ್ಥಿಕ ಹಿನ್ನಡೆಯನ್ನು ಎದುರಿಸುತ್ತಿದೆ. ಇಷ್ಟೇ ಅಲ್ಲದೇ ಕೊರೋನಾ ಮಹಾಮಾರಿಯ ಮೂರನೇ ಅಲೆಯೂ ಸಹ ಮುಂದಿನ ದಿನಗಳಲ್ಲಿ ಅಪ್ಪಳಿಸಿ, ದೇಶವು ಇನ್ನೂ ದುಷ್ಪರಿಣಾಮಗಳನ್ನು ಎದುರಿಸಲಿದೆ ಎಂದು ತಜ್ಞರು ಅಭಿಪ್ರಾಯ ಪಡುತ್ತಿದ್ದಾರೆ. ಈ ಎಲ್ಲಾ ಪರಿಸ್ಥಿತಿಗಳು ಆರ್ಥಿಕ ವಲಯದಲ್ಲಿ ದುಷ್ಪರಿಣಾಮವನ್ನು ತಂದಿದ್ದು ಆದಾಯದ ಬೆಳವಣಿಗೆಯು ಕುಂಠಿತವಾಗಿದ್ದು ಸಾಲ ಮರುಪಾವತಿಯ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರಿತು. ಆದಾಗ್ಯೂ ನಾವು ಧೃತಿಗೆಡದೆ ನಮ್ಮ ಬ್ಯಾಂಕಿನಲ್ಲಿ ಸಾಲ ಪಡೆದ ಎಲ್ಲಾ ಸದಸ್ಯರ ಮನವೊಲಿಸುವಿಕೆಯಲ್ಲಿ ತೊಡಗಿದ್ದು ಸಾಲಗಾರರನ್ನು ಮುಖತಃ ಭೇಟಿಮಾಡಿ, ಸಾಲಗಾರರ ಮನೆಗಳಿಗೆ ಭೇಟಿ ಮಾಡಿ ಹಾಗೂ ಸಾಲಗಾರರನ್ನು ವೈಯಕ್ತಿಕವಾಗಿ ಬ್ಯಾಂಕಿಗೆ ಕರೆದು ಸಮಾಲೋಚಿಸಿ ಸಾಲವನ್ನು ಮರುಪಾವತಿ ಮಾಡುವಂತೆ ಎಲ್ಲಾ ರೀತಿಯ ಕ್ರಮವನ್ನು ವಹಿಸಿದ್ದೇವೆ.

* ಒಟ್ಟು ಲಾಭ, ದುಡಿಯುವ ಬಂಡವಾಳದ ಶೇಕಡಾ 0.06 ಇರುತ್ತದೆ
* ಆಸ್ತಿಗಳ ಮೇಲಿನ ಪ್ರತಿಫಲ ಶೇಕಡಾ 0.05 ಇರುತ್ತದೆ
* ಬ್ಯಾಂಕಿನ ವ್ಯವಹಾರ (ಠೇವಣಿ ಮತ್ತು ಸಾಲಗಳು), ಪ್ರತಿ ಸಿಬ್ಬಂದಿಗೆ ರೂ.1871.39 ಲಕ್ಷ ಇರುತ್ತದೆ.
* ನಿವ್ವಳ ಲಾಭ, ಪ್ರತಿ ಸಿಬ್ಬಂದಿಗೆ ರೂ.0.73 ಲಕ್ಷ ಇರುತ್ತದೆ.

**11. ನಿಧಿಗಳ ಉಪಬಂಧ**

* ಶಿಷ್ಟ ಸಾಲಗಳಿಗಾಗಿ ಪ್ರಸಕ್ತ ಸಾಲಿನಲ್ಲಿ ಯಾವುದೇ ಉಪಬಂಧ ಕಲ್ಪಿಸಲಾಗಿಲ್ಲ.
* ಅನುತ್ಪಾದಕ ಆಸ್ತಿಗಳ ಮೇಲೆ ವಿಶೇಷ ನಿಧಿಗೆ ಪ್ರಸಕ್ತ ಸಾಲಿನಲ್ಲಿ ಯಾವುದೇ ಉಪಬಂಧ

ಕಲ್ಪಿಸಲಾಗಿಲ್ಲ.

* ಗೃಹಸಾಲದ ಮೇಲೆ ವಿಶೇಷ ನಿಧಿಗೆ ಪ್ರಸಕ್ತ ಸಾಲಿನಲ್ಲಿ ಯಾವುದೇ ಉಪಬಂಧ ಕಲ್ಪಿಸಲಾಗಿಲ್ಲ.
* ಕರಡು ಮತ್ತು ಸಂಶಯಾತ್ಮಕ ಸಾಲಗಳಿಗೆ ಪ್ರಸಕ್ತ ಸಾಲಿನಲ್ಲಿ ರೂ. 2208.00 ಲಕ್ಷಗಳ ಉಪಬಂಧ ಕಲ್ಪಿಸಲಾಗಿದೆ. ಒಟ್ಟು ಕರಡು ಮತ್ತು ಸಂಶಯಾತ್ಮಕ ಸಾಲ ನಿಧಿಯಲ್ಲಿ ರೂ. 10244.24 ಲಕ್ಷದಷ್ಟಿದೆ.
* ಹೂಡಿಕೆಗಳ ಮೇಲಿನ ಸವಕಳಿ ನಿಧಿಗೆ ಪ್ರಸಕ್ತ ಸಾಲಿನಲ್ಲಿ ರೂ. 680.00 ಲಕ್ಷಗಳ ಉಪಬಂಧ ಕಲ್ಪಿಸಲಾಗಿದೆ.

**12. ಹಿಂದಿನ ಸಾಲಿನ ಹೋಲಿಕೆಯೊಂದಿಗೆ ಪ್ರಸಕ್ತ ಸಾಲಿನ ಮೀಸಲಾತಿ ಉಪಬಂಧ**

(ರೂ. ಲಕ್ಷಗಳಲ್ಲಿ)

| ಕ್ರ.ಸಂ. | ವಿವರ | 2019–20 | 2020–21 |
|---|---|---|---|
| 1 | ಶಿಷ್ಟ ಸಾಲಗಳಿಗಾಗಿ | 0.00 | 0.00 |
| 2 | ಅನುತ್ಪಾದಕ ಆಸ್ತಿಗಳಿಗೆ | 0.00 | 0.00 |
| 3 | ಹೂಡಿಕೆಗಳ ಮೇಲಿನ ಸವಕಳಿಗೆ | 0.00 | 680.00 |
| 4 | ಗೃಹ ಸಾಲದ ವಿಶೇಷ ನಿಧಿ | 15.00 | 0.00 |
| 5 | ಕರಡು ಮತ್ತು ಸಂಶಯಾತ್ಮಕ ನಿಧಿ | 900.00 | 2208.28 |
| | **ಒಟ್ಟು** | **915.00** | **2888.28** |

13. ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆ ಸಂಖ್ಯೆ.RBI/2010-11/544 UBD.BPD.(PCB) CIR No.49/09.14.000/2010-11 ದಿನಾಂಕ 24.05.2011 ರನ್ವಯ ಸಿಬ್ಬಂದಿ ಗ್ರಾಚ್ಯುಟಿ ಜವಾಬ್ದಾರಿ ಖಾತೆಗೆ 2020–21ನೇ ಸಾಲಿನಲ್ಲಿ ರೂ. 60.67 ಲಕ್ಷ ಪಾವತಿಸಿದ್ದು, ಈ ಹಣವನ್ನು ಖರ್ಚು ಎಂದು ಪರಿಗಣಿಸಲಾಗಿದೆ.

14. ಠೇವಣಿಗಳ ಮೇಲೆ ವಿಮೆಯ ಕಂತು ರೂ.100.00ಕ್ಕೆ 0.06 ಪೈಸೆಯಂತೆ ರೂ. 2,46,98,580/– ಗಳನ್ನು ಡೆಪಾಸಿಟ್ ಇನ್ಶೂರೆನ್ಸ್ ಅಂಡ್ ಕ್ರೆಡಿಟ್ ಗ್ಯಾರಂಟಿ ಕಾರ್ಪೋರೇಷನ್‌ಗೆ ಎರಡು ಕಂತುಗಳಲ್ಲಿ (ಅಂದರೆ ಪ್ರತಿ ರೂ. 100 ಕ್ಕೆ 0.12 ಪೈಸೆಯಂತೆ) ಪಾವತಿಸಲಾಗಿದೆ. ವಿಮಾ ಸಂಸ್ಥೆಗೆ ಬ್ಯಾಂಕಿನಿಂದ ಪಾವತಿಸಬೇಕಾದ ವಿಮಾ ಕಂತು ಬಾಕಿ ಇರುವುದಿಲ್ಲ.

15. ಠೇವಣಿದಾರರ ಶಿಕ್ಷಣ ಮತ್ತು ಜಾಗೃತಿ ನಿಧಿಗೆ ವರ್ಗಾಯಿಸಲಾಗಿರುವ ಮೊತ್ತದ ವಿವರ(DEAF).

| ವಿವರ | ಮೊತ್ತ (ರೂ ಲಕ್ಷಗಳಲ್ಲಿ) |
|---|---|
| ಡಿಇಎಫ್ ಖಾತೆಗೆ ವರ್ಗಾಯಿಸಿರುವ ಪ್ರಾರಂಭಿಕ ಶಿಲ್ಕಿನ ಮೊತ್ತ | 433.53 |
| 2020–21 ನೇ ಸಾಲಿನಲ್ಲಿ ಸದರಿ ನಿಧಿಗೆ ಹಿಂಪಡೆದ ಮೊತ್ತ | 4.25 |
| 2020–21 ನೇ ಸಾಲಿನಲ್ಲಿ ಸದರಿ ನಿಧಿಗೆ ವರ್ಗಾಯಿಸಿರುವ ಮೊತ್ತ | 22.53 |
| 31.03.2021 ಕ್ಕೆ ಸದರಿ ಖಾತೆಯ ಮುಕ್ತಾಯದ ಶಿಲ್ಕು | 451.81 |

16. ಲೆಕ್ಕ ಪತ್ರಗಳಲ್ಲಿ ಸಾಮರಸ್ಯ ಅನುಸರಿಸುವ ಸಲುವಾಗಿ ಡಿಟಿಎ / ಡಿಟಿಎಲ್ (Deferred tax Asset / Liability) ಅನ್ನು ಲೆಕ್ಕ ಮಾಡಿರುವುದಿಲ್ಲ.

i) ದಿನಾಂಕ 31.03.2021ಕ್ಕೆ ಶಾಸನಬದ್ಧವಲ್ಲದ ದ್ರವ್ಯಾಸ್ತಿ ಹೂಡಿಕೆಗಳು (Non SLR)

(ರೂ. ಲಕ್ಷಗಳಲ್ಲಿ)

| ಸಂಖ್ಯೆ | ಇವುಗಳ ಸಂಗ್ರಹಣೆಯಲ್ಲಿ ನೀಡಲಾದುದು | ಮೊತ್ತ | ಕಡಿಮೆ ಹೂಡಿಕೆ ವರ್ಗದ ಭದ್ರತೆಗಳು ಇರುವುದು | ದರ ನಿಗದಿ ಪಡಿಸದ ಭದ್ರತೆಗಳು | ವರ್ಗೀಕ-ರಿಸದ ಭದ್ರತೆಗಳಲ್ಲಿ ಇರುವುದು | ಖಾಸಗಿ ನಿಯೋಜನೆ |
|---|---|---|---|---|---|---|
| 1 | ಸಾರ್ವಜನಿಕ ಉದ್ದಿಮೆಗಳಲ್ಲಿ | 5953.09 | 0.00 | 0.00 | 0.00 | 5953.09 |
| 2 | ಹಣಕಾಸು ಸಂಸ್ಥೆಗಳಲ್ಲಿ | 2833.86 | 0.00 | 0.00 | 0.00 | 2833.86 |
| 3 | ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ | 0.00 | 0.00 | 0.00 | 0.00 | 0.00 |
| 4 | ಮ್ಯುಚುಯಲ್ ಫಂಡ್ | 470.00 | 0.00 | 0.00 | 470.00 | 0.00 |
| 5 | ಇತರೆ | 1490.07 | 0.00 | 0.00 | 0.00 | 1490.07 |
| 6 | ಸವಕಳಿಗೆ ಅವಕಾಶ ಕಲ್ಪಿಸಿರುವುದು | 0.00 | 0.00 | 0.00 | 0.00 | 0.00 |
| | **ಒಟ್ಟು** | **10747.02** | **0.00** | **0.00** | **470.00** | **10277.02** |

ii) ಅನುತ್ಪಾದಕ ಶಾಸನಬದ್ಧವಲ್ಲದ ದ್ರವ್ಯಾಸ್ತಿ

| ವಿವರಗಳು | ಮೊತ್ತ |
|---|---|
| ಪ್ರಾರಂಭ ಬಾಕಿ | ರೂ. 2200.00 ಲಕ್ಷ |
| ವರ್ಷದಲ್ಲಿ ಸೇರ್ಪಡೆಯಾದುದು | ಯಾವುದೂ ಇಲ್ಲ |
| ವರ್ಷದಲ್ಲಿ ಕಡಿಮೆಯಾದುದು | ರೂ. 595.00 ಲಕ್ಷ |
| ಅಂತ್ಯದ ಬಾಕಿ | ರೂ. 1605.00 ಲಕ್ಷ |
| ಒಟ್ಟು ಅವಕಾಶಗಳು ಇರುವುದು | ರೂ. 1605.00 ಲಕ್ಷ |

ಮೆ॥ ದೀವಾನ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್, Non-SLR ಬಾಂಡಿನಲ್ಲಿ ರೂ. 600.00 ಲಕ್ಷ ಮತ್ತು ಮೆ॥ ಫಸ್ಟ್ ಲೀಸಿಂಗ್ ಕಂಪನಿಯ Non-SLR ಬಾಂಡಿನಲ್ಲಿ ರೂ. 200.00 ಲಕ್ಷ ಹೂಡಿಕೆಯ ಮೊತ್ತದಲ್ಲಿ ಶೇ.85ರಷ್ಟನ್ನು (ರೂ. 595.00 ಲಕ್ಷಗಳನ್ನು) ನಷ್ಟವಾಗಿ ತೊಡೆದು ಹಾಕಲಾಗಿದೆ.

**17. ಪುನರ್–ರಚನೆ ಗೊಂಡ ಸಾಲಗಳ ವಿವರ:**

ಕೋವಿಡ್–19 ಸಾಂಕ್ರಾಮಿಕ ಕಾಯಿಲೆ ಸಂಬಂಧ ಆರ್.ಬಿ.ಐ ಸುತ್ತೋಲೆ ಸಂ. RBI/2020–21/16 DOR.No.BP.BC/3/21.04.048/2020-21 August 6, 2020 ರಂತೆ ಪುನರ್–ರಚನೆಗೊಂಡ

ಸಾಲಗಳ ವಿವರ/ Details of Restructured Loans and Advance due to Covid-19 Pandemic.

| ಸಾಲಗಾರರ ವಿಧ/ **Type of Borrowers** | ಸಾಲಗಾರರ ಸಂಖ್ಯೆ/ **No. of Accounts** | ಬಾಕಿ ಉಳಿದ ಸಾಲದ ಮೊಬಲಗು/ **Balance O/s** | ಹೆಚ್ಚುವರಿ ಸಾಲ ಮಂಜೂರು, ಯಾವುದಾದರೂ ಇದ್ದರೆ/ **Additional funding sanctioned, if any** |
|---|---|---|---|
| ಎಂ.ಎಸ್.ಎಂ.ಇ/ MSME Loans | 2 | 5,88,56,811.00 | ಇಲ್ಲ |
| ಗೃಹ ಸಾಲ/ Housing Loans | 49 | 32,58,95,831.00 | ಇಲ್ಲ |
| ಇತರೆ/ Others | 147 | 177,49,82,015.00 | ಇಲ್ಲ |
| **ಒಟ್ಟು/ Total** | **198** | **215,97,34,656.00** | ಇಲ್ಲ |

ಕೋವಿಡ್–19 ಸಾಂಕ್ರಾಮಿಕ ಕಾಯಿಲೆ ಸಂಬಂಧ ಆರ್.ಬಿ.ಐ ಸುತ್ತೋಲೆ ಸಂ. RBI/2020–21/16 DOR.No.BP.BC/3/21.04.048/2020–21 August 6, 2020 ರ ಅನ್ವಯ ಯಾವ ಸಾಲ ಖಾತೆಗಳು ದಿ.29.02.2020ರಲ್ಲಿ ಶಿಷ್ಟ ಸಾಲಗಳಾಗಿವೆಯೋ, ಅಂತಹ ಸಾಲ ಖಾತೆಗಳು ಪುರ್ನರಚನೆಗೆ ಅರ್ಹವಾಗಿದ್ದು ಬ್ಯಾಂಕ್ 198 ಸಾಲಖಾತೆಗಳಿಂದ ರೂ.215,97,34,656/–ಗಳನ್ನು ಪುರ್ನರಚನೆಗೆ ಪರಿಗಣಿಸಿದೆ. 198 ಸಾಲ ಖಾತೆಗಳಲ್ಲಿ 25 ಸಾಲ ಖಾತೆಗಳು ರೂ.37,61,30,111/–ದಿ.31.03.2020ರಲ್ಲಿದ್ದಂತೆ ಶಿಷ್ಟಸಾಲಗಳಾಗಿರುವುದನ್ನು ಪರಿಗಣಿಸಿ, ಒಟ್ಟು 198 ಸಾಲಖಾತೆಗಳಿಂದ ರೂ.215,97,34,656/–ಗಳನ್ನು ಪುರ್ನರಚನೆಗೆ ಪರಿಗಣಿಸಿದೆ.

ಕೋವಿಡ್–19 ಸಾಂಕ್ರಾಮಿಕ ಕಾಯಿಲೆ ಸಂಬಂಧ ಆರ್.ಬಿ.ಐ ಸುತ್ತೋಲೆ ಸಂ. RBI/2019–20/244 DOR.No.BP.BC.71/21.04.048 /2019–20 May 23, 2020 ರ ಅನ್ವಯ 6 ಓವರ್‌ಡ್ರಾಫ್ಟ್ ಖಾತೆಗಳಗೆ FITL ಸೌಲಭ್ಯ ನೀಡಲಾಗಿದ್ದು, ಈ ಪೈಕಿ 2 ಓವರ್‌ಡ್ರಾಫ್ಟ್ ಖಾತೆಗಳ FITL ರೂ.86.40 ಲಕ್ಷ ದಿ.31.03.2021ಕ್ಕೆ ಚುಕ್ತಗೊಳಿಸಿರುವುದಿಲ್ಲ. ಸದರಿ ರೂ. 86.40 ಲಕ್ಷಗಳನ್ನು ಆದಾಯ ಎಂದು ಪರಿಗಣಿಸಲಾಗಿದೆ.

ಸಹಿ/–

**(ಮಾಲತಿ ಎಂ)**
ಉಪ ಪ್ರಧಾನ ವ್ಯವಸ್ಥಾಪಕರು(ಪ್ರ)

ಸಹಿ/–

**(ರೂಪ ವಿ ಎಸ್)**
ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಸಹಿ/–

**(ವೈ.ವಿ ನರಸಿಂಹ ಮೂರ್ತಿ)**
ನಿರ್ದೇಶಕರು

ಸಹಿ/–

**(ಬಿ.ಎಸ್.ಸತ್ಯನಾರಾಯಣ)**
ಉಪಾಧ್ಯಕ್ಷರು

ಸಹಿ/–

**(ಹೆಚ್.ಸಿ.ಕೃಷ್ಣ)**
ಅಧ್ಯಕ್ಷರು

ಮೆ॥ ಎಸ್ ಎಲ್ ಪಾಟೀಲ್ ಅಂಡ್ ಕೋ
ಸಂಸ್ಥೆಯ ನೋಂದಣಿ ಸಂಖ್ಯೆ: 002606S
ಸನ್ನದು ಲೆಕ್ಕಪರಿಶೋಧಕರು
ಸಹಿ/–
ಎಸ್ ಎಲ್ ಪಾಟೀಲ್
ಪಾಲುದಾರರು
ಸದಸ್ಯತ್ವ ಸಂಖ್ಯೆ: 032810
UDIN: 21032810AAAACL8964

ಸ್ಥಳ : ಬೆಂಗಳೂರು
ದಿನಾಂಕ: 24.09.2021

# 2020–21ನೇ ಸಾಲಿನ ಆಯವ್ಯಯ ಪಟ್ಟಿ ಮತ್ತು
# 2021–22ನೇ ಸಾಲಿನ ಪ್ರಸ್ತಾವಿತ (ಅಂದಾಜು) ಆಯವ್ಯಯ ಪಟ್ಟಿ

(ರೂ.ಗಳಲ್ಲಿ)

| ಸಂ. | ವಿವರ | 2020–21 ನೇ ಸಾಲಿನ ಅಂದಾಜು ಆಯವ್ಯಯ | 2020–21 ನೇ ಸಾಲಿನ ನಿಖರ ಖರ್ಚು | ಅಂದಾಜು ವ್ಯಯಕ್ಕಿಂತ ಹೆಚ್ಚಾದ ಖರ್ಚು | 2021–22 ನೇ ಸಾಲಿನ ಅಂದಾಜು ಆಯವ್ಯಯ |
|---|---|---|---|---|---|
| 1 | ಠೇವಣಿಗಳ ಮೇಲಿನ ಬಡ್ಡಿ | 1300000000.00 | 1238529453.58 | | 1100000000.00 |
| 2 | ಸಿಬ್ಬಂದಿ ವೇತನ, ಭವಿಷ್ಯ ನಿಧಿ | 120000000.00 | 98367339.00 | | 120000000.00 |
| 3 | ನಿರ್ದೇಶಕರ ಸಭೆ ಸಂಭಾವನೆ | 1000000.00 | 792000.00 | | 1000000.00 |
| 4 | ಬಾಡಿಗೆ | 18000000.00 | 17451080.50 | | 18000000.00 |
| 5 | ವಿಮೆ, ತೆರಿಗೆ ಮತ್ತು ಪರವಾನಿಗೆ | 27000000.00 | 25204533.85 | | 30000000.00 |
| 6 | ವಿದ್ಯುಚ್ಛಕ್ತಿ ಮತ್ತು ನೀರಿನ ಖರ್ಚು | 2800000.00 | 2251608.13 | | 2500000.00 |
| 7 | ದೂರವಾಣಿ ಖರ್ಚು | 1500000.00 | 1033587.39 | | 1200000.00 |
| 8 | ಟಪಾಲು | 1300000.00 | 235443.06 | | 400000.00 |
| 9 | ಜಾಹೀರಾತು | 500000.00 | 220606.96 | | 300000.00 |
| 10 | ಕಾಯಿದೆ ಮತ್ತು ಮೌಲ್ಯಮಾಪನ ಖರ್ಚು | 1500000.00 | 2348552.00 | 848552.00 | 2000000.00 |
| 11 | ಸಿಬ್ಬಂದಿ ವೈದ್ಯಕೀಯ ಭತ್ಯೆ | 1000000.00 | 900000.00 | | 1000000.00 |
| 12 | ನಿತ್ಯನಿಧಿ ಸಂಗ್ರಹಕಾರರಿಗೆ ಕಮಿಷನ್ | 1500000.00 | 969327.00 | | 1500000.00 |
| 13 | ಪ್ರತಿನಿಧಿ ಶುಲ್ಕ | 100000.00 | 0.00 | | 100000.00 |
| 14 | ಚಂದಾ ಮತ್ತು ವೃತ್ತ ಪತ್ರಿಕೆ | 700000.00 | 568746.00 | | 700000.00 |
| 15 | ಕೂಲಿ ಮತ್ತು ರಿಪೇರಿ | 1000000.00 | 479831.50 | | 500000.00 |
| 16 | ಪ್ರಯಾಣ ಖರ್ಚು | 500000.00 | 165054.00 | | 300000.00 |
| 17 | ಸಾದಿಲ್ವಾರು | 2000000.00 | 1974430.58 | | 3300000.00 |
| 18 | ಟಿಎ ಮತ್ತು ಡಿಎ ಖರ್ಚು | 200000.00 | 0.00 | | 200000.00 |
| 19 | ಲೇಖನ ಮತ್ತು ಮುದ್ರಣ | 1000000.00 | 762193.00 | | 1000000.00 |
| 20 | ಗಣಕಯಂತ್ರ ಲೇಖನ ಸಾಮಗ್ರಿ | 500000.00 | 194551.18 | | 300000.00 |
| 21 | ನಿರ್ವಹಣೆ ಮತ್ತು ಪರಿಪಾಲನೆ | 7000000.00 | 6297511.44 | | 6000000.00 |
| 22 | ಸಿಬ್ಬಂದಿ ತರಬೇತಿ ಖರ್ಚು | 300000.00 | 155900.00 | | 1000000.00 |
| 23 | ವಾಹನ ಪರಿಪಾಲನೆ ಖರ್ಚು | 500000.00 | 466486.50 | | 500000.00 |
| 24 | ಕ್ಲಿಯರಿಂಗ್ ಕೊರಿಯರ್ ಖರ್ಚು | 400000.00 | 309419.00 | | 400000.00 |
| 25 | ಸಲಹೆಗಾರರ ಶುಲ್ಕ | 600000.00 | 540000.00 | | 600000.00 |
| 26 | ಕ್ಲಿಯರಿಂಗ್ ಹೌಸ್ ಖರ್ಚು | 500000.00 | 224546.07 | | 300000.00 |
| 27 | ತಜ್ಞರ ಖರ್ಚು | 600000.00 | 196444.50 | | 300000.00 |
| 28 | ಇತರೇ ಖರ್ಚು | 1000000.00 | 1049250.32 | 49250.32 | 1000000.00 |

| | | | | | |
|---|---|---|---|---|---|
| 29 | ಎನ್.ಡಿ.ಎಸ್. ಮತ್ತು ಸಿ.ಸಿ.ಐ.ಎಲ್ ಖರ್ಚು | 3000000.00 | 1147389.89 | | 3000000.00 |
| 30 | ಸೆಕ್ಯೂರಿಟಿ ಸರ್ವಿಸಸ್ | 4000000.00 | 3551772.00 | | 4000000.00 |
| 31 | ವಾರ್ಷಿಕ ಸಾಮಾನ್ಯ ಸಭೆಯ ಖರ್ಚು | 2000000.00 | 1368399.00 | | 3000000.00 |
| 32 | ಗ್ರೂಪ್ ಗ್ರಾಚ್ಯುಯಿಟಿ, ಗ್ರೂಪ್ ಇನ್ಸುರೆನ್ಸ್ | 36000000.00 | 36956611.00 | 956611.00 | 20000000.00 |
| 33 | ಎಲ್.ಐ.ಸಿ. ಮತ್ತು ಇ.ಡಿ.ಎಲ್.ಐ. ಯೋಜನೆ | 700000.00 | 612614.70 | | 700000.00 |
| 34 | ದಿನಗೂಲಿ/ ಡಾಟಾ ಎಂಟ್ರಿ ಖರ್ಚು | 3000000.00 | 2714444.00 | | 3000000.00 |
| 35 | ಸವಕಳಿ | 5000000.00 | 4504280.82 | | 5000000.00 |
| 36 | ಲೆಕ್ಕ ತಪಾಸಣಾ ಶುಲ್ಕ | 2000000.00 | 1445500.00 | | 2000000.00 |
| 37 | ಕಮಿಷನ್ ಬ್ರೋಕರೇಜ್ ಬ್ಯಾಂಕ್ ಚಾರ್ಜ್ | 400000.00 | 245697.51 | | 300000.00 |
| 38 | ಪ್ರೀಮಿಯಂ ವಿಮೋಚನೆ | 10000000.00 | 260707.00 | | 10000000.00 |
| 39 | ದಾವಾ ಹೂಡಿರುವ ಕಾನೂನು ಖರ್ಚು | 5000000.00 | 2347207.30 | | 2700000.00 |
| 40 | ಶಾಖಾ ಉದ್ಘಾಟನಾ ಖರ್ಚು | 3000000.00 | 276751.44 | | 1000000.00 |
| 41 | ಸಿಬ್ಬಂದಿ ಕ್ಷೇಮಾಭಿವೃದ್ಧಿ ವೆಚ್ಚ | 300000.00 | 0.00 | | 300000.00 |
| 42 | ಎಟಿಎಂ ವ್ಯವಹಾರದ ಕಮಿಷನ್ | 600000.00 | 485917.31 | | 600000.00 |
| 43 | ವಿವಿಧ ಮೀಸಲುಗಳು ತೆಗೆದಿರಿಸಬೇಕಾಗಿದ್ದು | 100000000.00 | 221200000.00 | 121200000.00 | 150000000.00 |
| 44 | ಚುನಾವಣಾ ವೆಚ್ಚ | 1500000.00 | 0.00 | | 0.00 |
| 45 | ಬಳಕೆಯಾದ ಲೇಖನ ಸಾಮಗ್ರಿ | | 128384.90 | | |
| 46 | ತೊಡೆದುಹಾಕಿದ ಇತರೆ ಸ್ತಿರಾಸ್ತಿ | | 133437.60 | | |
| 47 | NSCCL ಶುಲ್ಕ | | 3871.00 | | |
| | **ಒಟ್ಟು** | **1669500000.00** | **1679070881.03** | **123054413.32** | **1500000000.00** |
| 48 | ಆದಾಯ ತೆರಿಗೆ ಪಾವತಿಗೆ ಅವಕಾಶ | 50000000.00 | 51000000.00 | | 30000000.00 |
| 49 | ನಿವ್ವಳ ಲಾಭ ತೆರಿಗೆ ನಂತರ | 60000000.00 | 10997770.53 | | 110000000.00 |
| | **ಒಟ್ಟು ಖರ್ಚು** | **1780000000.00** | **1741068651.56** | | **1640000000.00** |

| ಸಂ | ಆದಾಯ | **2020-21 ನೇ ಸಾಲಿನ ಅಂದಾಜು ಆಯ** | **2020-21ನೇ ಸಾಲಿನ ನಿಖರ ಗಳಿಕೆ** | **2021-22 ನೇ ಸಾಲಿನ ಅಂದಾಜು ಆಯ** |
|---|---|---|---|---|
| 1 | ಸಾಲಗಳ ಮೇಲೆ ಬಡ್ಡಿ | 1200000000.00 | 1171391855.21 | 1100000000.00 |
| 2 | ಸಂಚಯದ ಮೇಲೆ ಬಡ್ಡಿ | 550000000.00 | 359511097.96 | 520000000.00 |
| 3 | ಇತರೆ ಆದಾಯ | 30000000.00 | 210165698.39 | 20000000.00 |
| | **ಒಟ್ಟು ಆದಾಯ** | **1780000000.00** | **1741068651.56** | **1640000000.00** |
| | **ಟಿಪ್ಪಣಿ** | | | |
| | 1) ಸಿಬ್ಬಂದಿ ಸಾಲ ಸೌಲಭ್ಯಗಳು | | 200 ಲಕ್ಷಗಳು | |

## ಹೆಚ್ಚುವರಿ ಖರ್ಚುಗಳಿಗೆ ಟಿಪ್ಪಣಿ:

1. (ಕ್ರ.ಸಂ.10) **ಕಾಯಿದೆ ಮತ್ತು ಮೌಲ್ಯಮಾಪನ ಖರ್ಚು ರೂ. 8,48,552/–** ಆಡಳಿತ ಮಂಡಲಿಯ ಚುನಾವಣೆಯಲ್ಲಿ ಮತ ಚಲಾಯಿಸಲು ಅವಕಾಶವಿಲ್ಲದ ಸದಸ್ಯರ ಪರವಾಗಿ ನ್ಯಾಯಾಲಯಕ್ಕೆ ಪಾವತಿಸಿದ ಹೆಚ್ಚುವರಿ ಶುಲ್ಕ.
2. (ಕ್ರ.ಸಂ.28) **ಇತರೇ ಖರ್ಚು ರೂ.49,250.32** ಸದರಿ ಸಾಲಿನಲ್ಲಿ ಕೋವಿಡ್–19 ರನ್ವಯ ಮುಂಜಾಗ್ರತಾ ಕ್ರಮವಾಗಿ ಖರೀದಿಸಿದ ಉಪಕರಣಗಳು, ಶಾಖೆಗಳ ಸ್ಯಾನಿಟೈಸಿಂಗ್ ಇತ್ಯಾದಿ ಅನಿ–ರೀಕ್ಷಿತ ಖರ್ಚು ಸಾಮಾನ್ಯ ಖರ್ಚಿಗಿಂತ ಹೆಚ್ಚಾಗಿದ್ದರಿಂದ ಆದ ಖರ್ಚುಗಳು,
3. (ಕ್ರ.ಸಂ.32) **ಗ್ರೂಪ್ ಗ್ರಾಚ್ಯುಯಿಟಿ, ಗ್ರೂಪ್ ಇನ್ಸುರೆನ್ಸ್ ರೂ. 9,56,611.00** – ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನದಂತೆ ಪಾವತಿ ಮಾಡಬೇಕಾಗಿರುವುದರಿಂದ, ತೆಗೆದಿರಿಸಿದ ಮೊತ್ತಕ್ಕಿಂತ ಜಾಸ್ತಿಯಾಗಿರುತ್ತದೆ.
4. (ಕ್ರ.ಸಂ.43) **ವಿವಿಧ ಮೀಸಲುಗಳು ತೆಗೆದಿರಿಸಬೇಕಾಗಿದ್ದು –ರೂ.12,12,00,000/–** ನಿಷ್ಕ್ರಿಯ ಆಸ್ತಿಯ ಮೊತ್ತ ಹೆಚ್ಚಾಗಿರುವುದರಿಂದ, ಮೀಸಲು ಹೆಚ್ಚಾಗಿ ಕಲ್ಪಿಸಲಾಗಿದೆ.

## ದಿ ನ್ಯಾಷನಲ್ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್

**ಆಡಳಿತ ಕಛೇರಿ**

**2020–21ನೇ ಸಾಲಿನ ಪ್ರಸ್ತಾವಿತ ನಿವ್ವಳ ಲಾಭದ ಹಂಚಿಕೆ**

(ರೂ.ಗಳಲ್ಲಿ)

| | | | |
|---|---|---|---|
| **1** | ಆಪದ್ಧನ | Reserve Fund | 2750000.00 |
| **2** | ಸಹಕಾರ ವಿದ್ಯಾನಿಧಿ | Co-operative Education Fund | 165000.00 |
| **3** | ಧರ್ಮಾರ್ಥ ನಿಧಿ | Charity Fund | 100000.00 |
| **4** | ಕಟ್ಟಡ ನಿಧಿ | Building Fund | 1000000.00 |
| **5** | ಸದಸ್ಯರ ಕ್ಷೇಮಾಭಿವೃದ್ಧಿ ನಿಧಿ | Members Welfare Fund | 1500000.00 |
| **6** | ಸಿಬ್ಬಂದಿ ಕ್ಷೇಮಾಭಿವೃದ್ಧಿ ನಿಧಿ | Employees Benevolent Fund | 1000000.00 |
| **7** | ಮಹೋತ್ಸವ ನಿಧಿ | Jubilee Fund | 1000000.00 |
| **8** | ಮಹಾಮಂಡಳಕ್ಕೆ ವಂತಿಗೆ | Contribution to K.S.U.C.B.Federation | 50000.00 |
| **9** | ಸಾಮಾಜಿಕ ಕಲ್ಯಾಣ ನಿಧಿ | Social Welfare Fund | 100000.00 |
| **10** | ಲಾಭಾಂಶ ಸಮತೋಲನ ನಿಧಿ | Dividend Equalisation Fund | 3332770.53 |
| | **ಒಟ್ಟು** | | **10997770.53** |

# ವಿಶೇಷ ಸೂಚನೆ:

1. ಪ್ರತಿ ಸದಸ್ಯರು 2015–16ನೇ ಸಾಲಿನಿಂದ ಪ್ರಾರಂಭಗೊಂಡು ಬ್ಯಾಂಕಿನ ಐದು ವಾರ್ಷಿಕ ಸಾಮಾನ್ಯ ಸಭೆಗಳಲ್ಲಿ ಕನಿಷ್ಟ ಮೂರು ಸಭೆಗಳಲ್ಲಿ ಭಾಗವಹಿಸಬೇಕಾಗಿರುವುದರಿಂದ ಮಾನ್ಯ ಸದಸ್ಯರು ಸಭೆಗೆ ಆಗಮಿಸಿ ಕಡ್ಡಾಯವಾಗಿ ಹಾಜರಿ ಪುಸ್ತಕದಲ್ಲಿ ಸಹಿ ಮಾಡಬೇಕಾಗಿ ಕೋರಲಾಗಿದೆ. ಇಲ್ಲದಿದ್ದ ಪಕ್ಷದಲ್ಲಿ ಮುಂದೆ ನಡೆಯಲಿರುವ ಬ್ಯಾಂಕಿನ ಆಡಳಿತ ಮಂಡಲಿಯ ಚುನಾವಣೆಯಲ್ಲಿ ಮತ ಚಲಾಯಿಸುವ ಅವಕಾಶವಿರುವುದಿಲ್ಲ.
2. ಪ್ರತಿ ಸದಸ್ಯರು ಕನಿಷ್ಠ ರೂ. 1000/– ಗಳ ಷೇರು ಮೊತ್ತವನ್ನು ಹೊಂದಿರಬೇಕು.
3. ಪ್ರತಿ ಸದಸ್ಯರು ಕನಿಷ್ಠ ರೂ. 1000/– ಗಳ ಠೇವಣಿ ಹೊಂದಿರಬೇಕು.
4. ಪ್ರತಿ ಸದಸ್ಯರು ತಮ್ಮ ಖಾತೆಗಳಲ್ಲಿ ಒಂದು ವರ್ಷದಲ್ಲಿ ಕನಿಷ್ಠ 6 ಬಾರಿ ವ್ಯವಹರಿಸಬೇಕು (ಜಮಾವಣೆ+ಹಿಂಪಡೆಯುವಿಕೆ ಸೇರಿ)

## ಠೇವಣಿಗಳ ಮೇಲಿನ ಬಡ್ಡಿ ದರ

| ಠೇವಣಿಯ ಅವಧಿ | ವ್ಯಕ್ತಿಗಳಿಗೆ | ಹಿರಿಯ ನಾಗರೀಕರಿಗೆ |
|---|---|---|
| 30 ದಿನಗಳಿಂದ 90 ದಿನಗಳವರೆಗೆ | 4.50 | 4.75 |
| 91 ದಿನಗಳಿಂದ 364 ದಿನಗಳವರೆಗೆ | 5.50 | 6.00 |
| 12 ತಿಂಗಳು ಮೇಲ್ಪಟ್ಟು 24 ತಿಂಗಳವರೆಗೆ | 6.25 | 6.75 |
| 24 ತಿಂಗಳು ಮೇಲ್ಪಟ್ಟು 36 ತಿಂಗಳವರೆಗೆ | 6.50 | 7.00 |
| 36 ತಿಂಗಳ ಮೇಲ್ಪಟ್ಟು | 7.25 | 7.50 |

ರೂ.50 ಲಕ್ಷ ಮತ್ತು ರೂ.50 ಲಕ್ಷ ಕ್ಕಿಂತ ಹೆಚ್ಚಿನ ಠೇವಣಿಗಳಿಗೆ ವ್ಯಕ್ತಿಗಳಿಗೆ ನೀಡುವ ಬಡ್ಡಿಯ ಮೇಲೆ ಶೇ.0.50 ರಷ್ಟು ಅಧಿಕ ಬಡ್ಡಿಯನ್ನು ನೀಡಲಾಗುವುದು

ಅವಧಿಗೂ ಮುನ್ನ ಮುಕ್ತಾಯಗೊಳಿಸುವ ಠೇವಣಿಗಳಿಗೆ ಶುಲ್ಕ (Pre closure charges) ವಿಧಿಸುವುದಿಲ್ಲ.

# ಸಾಲ ಮತ್ತು ಮುಂಗಡಗಳ ಮೇಲಿನ ಬಡ್ಡಿದರ

| ಕ್ರ. ಸಂ. | ಸಾಲಗಳು | ವಿವರಗಳು | ಬಡ್ಡಿ ದರ |
|---|---|---|---|
| 1. | ಜಾಮೀನು ಸಾಲ | ರೂ. 3.00 ಲಕ್ಷಗಳ ವರಗೆ | **15.00** |
| 2. | ಆಭರಣಗಳಾಧಾರಿತ ಸಾಲ/ಸರ್ಕಾರಿ ಭದ್ರತಾ ಪತ್ರಗಳ ಮೇಲಿನ ಸಾಲ | ರೂ 2.00 ಲಕ್ಷಗಳ ವರಗೆ | **11.00** |
| 3. | ವಾಹನ ಸಾಲ | | **10.50** |
| 4. | ಯಂತ್ರೋಪಕರಣ ಸಾಲ | 1) ಸಣ್ಣ ಕೈಗಾರಿಕೆಗಳಿಗೆ<br>2) ಇತರೆ ವ್ಯವಹಾರಗಳಿಗೆ (ಸಣ್ಣ ಕೈಗಾರಿಕೆಗಳಲ್ಲದೇ ಉಳಿದ ವ್ಯವಹಾರಗಳಿಗೆ) | **11.50**<br>**13.00** |
| 5. | ನಗದು ಸಾಲ/ ಹೆಚ್ಚುವರಿ ಕೈಗಡ | 1) ಸಣ್ಣ ಕೈಗಾರಿಕಗಳಿಗೆ<br>2) ಇತರೆ ವ್ಯವಹಾರಗಳಿಗೆ (ಸಣ್ಣ ಕೈಗಾ-ರಿಕೆಗಳಲ್ಲದೇ ಉಳಿದ ವ್ಯವಹಾರಗಳಿಗೆ) | **11.50**<br>**13.00** |
| 6. | ಧರ್ಮಾರ್ಥ ಸಂಸ್ಥೆ, ಸೊಸೈಟಿ, ಹಾಗೂ ಶಿಕ್ಷಣ ಸಂಸ್ಥೆಗಳಿಗೆ | 1) ಹೆಚ್ಚುವರಿ ಕೈಗಡ<br>2) ಅವಧಿ ಸಾಲ | **12.25**<br>**13.00** |
| 7. | ವಾಣಿಜ್ಯ ಕಟ್ಟಡ ಖರೀದಿ ಹಾಗೂ ನಿರ್ಮಾಣ | | **13.00** |
| 8 | ಸ್ಥಿರಾಸ್ತಿ ಆಧಾರಿತ ಸಾಲ<br>ಅ) ಗೃಹ ನಿರ್ಮಾಣ/ ಗೃಹ ಖರೀದಿ | 1) ರೂ. 30.00 ಲಕ್ಷದವರೆಗೆ<br>2) ರೂ.30.00 ಲಕ್ಷ ಮೇಲ್ಪಟ್ಟು | **10.00**<br>**11.00** |
| | ಆ) ನಿವೇಶನ ಕೊಳ್ಳಲು ಮತ್ತು ಗೃಹ ನವೀಕರಣ | 1) ರೂ. 30.00 ಲಕ್ಷದವರೆಗೆ<br>2) ರೂ.30.00 ಲಕ್ಷ ಮೇಲ್ಪಟ್ಟು | **12.00**<br>**13.00** |
| | ಇ) ಉನ್ನತ ವಿದ್ಯಾಭ್ಯಾಸಕ್ಕಾಗಿ | 1) ರೂ.20.00 ಲಕ್ಷಗಳವರೆಗೆ<br>2) ರೂ.20.00 ಲಕ್ಷಗಳ ಮೇಲ್ಪಟ್ಟು | **11.00**<br>**12.00** |
| 9. | ಇತರೆ ಉದ್ದೇಶಗಳಿಗೆ | 1) ರೂ. 50.00 ಲಕ್ಷಗಳವರೆಗೆ<br>2) ರೂ.50.00 ಲಕ್ಷಗಳ ಮೇಲ್ಪಟ್ಟು | **13.50**<br>**14.00** |

## ಬ್ಯಾಂಕಿನ ಆರ್ಥಿಕ ಸ್ಥಿತಿ

(ರೂ. ಕೋಟಿಗಳಲ್ಲಿ)

| ಕ್ರ.ಸಂ. | ವಿವರ | **31.03.2020** | **31.03.2021** |
|---|---|---|---|
| 1. | ಸದಸ್ಯರು | 33287 | 32568 |
| 2. | ಪಾವತಿಯಾದ ಷೇರು ಬಂಡವಾಳ | 52.39 | 48.30 |
| 3. | ಆಪದ್ಧನ ಮತ್ತು ನಿಧಿಗಳು | 203.17 | 225.76 |
| 4. | ಠೇವಣಿಗಳು | 1776.50 | 1679.03 |
| 5. | ಹೂಡಿಕೆಗಳು | 692.91 | 705.80 |
| 6. | ಸಾಲ ಮತ್ತು ಮುಂಗಡಗಳು | 1231.19 | 1128.01 |
| 7. | ದುಡಿಯುವ ಬಂಡವಾಳ | 2052.29 | 1965.88 |
| 8. | ಸಿ.ಆರ್.ಎ.ಆರ್. | 10.54 | 11.38 |
| 9. | ಒಟ್ಟು ವಹಿವಾಟು | 3007.69 | 2807.04 |
| 10. | ಬ್ಯಾಂಕಿನ ವ್ಯವಹಾರ ಪ್ರತಿ ಸಿಬ್ಬಂದಿಗೆ | 18.34 | 18.71 |
| 11. | ನಿವ್ವಳ ನಿಷ್ಕ್ರಿಯ ಆಸ್ತಿಯ ಮಟ್ಟ | 31.41% | 35.76%<br>(28.72% as on 31/08/2021) |
| 12. | ಠೇವಣಿ ಸಾಲಗಳ ಅನುಪಾತ | 69.30 | 67.18 |
| 13. | ನಿವ್ವಳ ಲಾಭ | 2.16 | 1.09 |

## 2019–20ನೇ ಸಾಲಿನ ವಾರ್ಷಿಕ ವರ್ಚ್ಯುಯಲ್ ಸಾಮಾನ್ಯ ಸಭೆಯ ನಡವಳಿಗಳು

ದಿ ನ್ಯಾಷನಲ್ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಆಡಳಿತ ಕಛೇರಿ, 73/1, ಗಾಂಧಿ ಬಜಾರ್ ಮುಖ್ಯ ರಸ್ತೆ, ಬೆಂಗಳೂರು ಬ್ಯಾಂಕಿನ 46ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ವರ್ಚ್ಯುಯಲ್ ಆಗಿ ಅಧ್ಯಕ್ಷರಾದ ಶ್ರೀ.ಹೆಚ್.ಸಿ.ಕೃಷ್ಣರವರ ಅಧ್ಯಕ್ಷತೆಯಲ್ಲಿ ದಿನಾಂಕ 13ನೇ ಡಿಸಂಬರ್ 2020, ಭಾನುವಾರ ಬೆಳಗ್ಗೆ 10.00 ಘಂಟೆಗೆ, ದಿ ನ್ಯಾಷನಲ್ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ನಂ.73/1, ಗಾಂಧೀ ಬಜಾರ್ ಮುಖ್ಯ ರಸ್ತೆ, ಬೆಂಗಳೂರು – 560 004 ಈ ಸ್ಥಳದಲ್ಲಿ ನಡೆದ ದಿ ನ್ಯಾಷನಲ್ ಕೋ–ಆಪರೇಟಿವ್ ಬ್ಯಾಂಕಿನ 46ನೇ ವಾರ್ಷಿಕ ವರ್ಚ್ಯುಯಲ್ ಸಾಮಾನ್ಯ ಸಭೆಯ ನಡಾವಳಿಗಳು.

ಬ್ಯಾಂಕಿನ ಆಡಳಿತ ಮಂಡಲಿಯ ಎಲ್ಲಾ ಸದಸ್ಯರು ಹಾಜರಿದ್ದು ಅಧ್ಯಕ್ಷರಾದ ಶ್ರೀ. ಹೆಚ್.ಸಿ.ಕೃಷ್ಣರವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಆಡಳಿತ ಮಂಡಲಿಯ ಸದಸ್ಯರು, ಮುಖ್ಯ ಕಾರ್ಯನಿರ್ವಾಹಕರು, ಉಪ ಪ್ರಧಾನ ವ್ಯವಸ್ಥಾಪಕರು ಹಾಗೂ ಸಹಾಯಕ ಪ್ರಧಾನ ವ್ಯವಸ್ಥಾಪಕರುಗಳಿಂದ ದೀಪ ಬೆಳಗಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು. ಸಭೆಯಲ್ಲಿ 1458 (ಒಂದು ಸಾವಿರದ ನಾಲ್ಕು ನೂರ ಐವತ್ತೆಂಟು) ಸದಸ್ಯರು ವರ್ಚ್ಯುಯಲ್ ಆಗಿ ಭಾಗವಹಿಸಿದ್ದರು.

**ವಿಷಯ 1: ಪ್ರಾರ್ಥನೆ**

46ನೇ ವಾರ್ಷಿಕ ಸಾಮಾನ್ಯ ಸಭೆಯು ಬ್ಯಾಂಕಿನ ಸಿಬ್ಬಂದಿ ಶ್ರೀಮತಿ ಸಿಂಧುಜಾ ಪಂಡಿತ್‌ರವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು.

**ವಿಷಯ 2: ಸೂಚನಾ ಪ್ರಕಟಣೆಯನ್ನು ಓದಿ ದಾಖಲೆ ಮಾಡುವುದು**

ಮುಖ್ಯ ಕಾರ್ಯ ನಿರ್ವಾಹಕ ಶ್ರೀ.ಸುರೇಶ್ ಎಂ.ಜಿ.ರವರು ಬ್ಯಾಂಕಿನ 46ನೇ ವಾರ್ಷಿಕ ಮಹಾಸಭೆಯ ಸೂಚನಾ ಪ್ರಕಟಣೆಯನ್ನು ಓದಿದರು. ಸೂಚನಾ ಪ್ರಕಟಣೆಯನ್ನು ದಾಖಲಿಸಲಾಯಿತು.

ನಂತರ ಕಳೆದ ಸಾಲಿನಲ್ಲಿ ನಿಧನರಾದ ಎಲ್ಲಾ 198 ಸದಸ್ಯರ/ಸಹ ಸದಸ್ಯರ, ಬ್ಯಾಂಕಿನ ಸಿಬ್ಬಂದಿಗಳ ಹಾಗೂ ರಾಜ್ಯದಲ್ಲಿ ಕೋವಿಡ್ ಸಾಂಕ್ರಾಮಿಕ ರೋಗದಿಂದ ನಿಧನರಾದವರ ಆತ್ಮಕ್ಕೆ ಶಾಂತಿ ಕೋರಿ 2 ನಿಮಿಷ ಮೌನ ಆಚರಿಸಲಾಯಿತು.

ನಂತರ ಮುಖ್ಯಕಾರ್ಯನಿರ್ವಾಹಕರು ವರದಿಗಳಲ್ಲಿರುವ ಮುದ್ರಣ ದೋಷವನ್ನು ಸಭೆಗೆ ತಿಳಿಸಿದರು.

**ವಿಷಯ 3: ಸ್ವಾಗತ ಭಾಷಣ**

ಉಪಾಧ್ಯಕ್ಷರಾದ ಶ್ರೀ. ಬಿ.ಎಸ್.ಸತ್ಯನಾರಾಯಣರವರು ವರ್ಚ್ಯುಯಲ್ ಆಗಿ ಉಪಸ್ಥಿತರಿದ್ದ

ಸದಸ್ಯರನ್ನು ಆಡಳಿತ ಮಂಡಲಿಯ ಪರವಾಗಿ ಹಾಗೂ ಸಿಬ್ಬಂದಿ ಪರವಾಗಿ ಹೃದಯಪೂರ್ವಕವಾಗಿ ಸ್ವಾಗತಿಸುತ್ತಾ 46ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಸದಸ್ಯರು ಸಕ್ರಿಯವಾಗಿ ಲಾಗಿನ್ ಆಗುವ ಮೂಲಕ ಭಾಗವಹಿಸಿ, ಸಭೆಯನ್ನು ವಿಷಯಾಧಾರಿತ ಚರ್ಚೆಯೊಂದಿಗೆ, ಶಾಂತಿಯುತವಾಗಿ ನಡೆಸಿಕೊಡಬೇಕೆಂದು ಕೋರಿದರು.

ಕೊರೋನಾದಿಂದ ಉಂಟಾದ ಮಹಾನ್ ತೊಂದರೆಯ ಹೊರತಾಗಿಯೂ ನಮ್ಮ ಬ್ಯಾಂಕ್ ಉತ್ತಮ ಸಾಧನೆ ತೋರುವಲ್ಲಿ ಪ್ರಯತ್ನ ಮಾಡಿರುವುದು ಒಂದು ಸಾಧನೆ. ಕಳೆದ ಡಿಸೆಂಬರ್‌ನಿಂದ ಈ ಡಿಸೆಂಬರ್‌ವರೆಗೆ ರಾಷ್ಟ್ರದಾದ್ಯಂತ ಸಹಕಾರ ಕ್ಷೇತ್ರದಲ್ಲಿ ಆದ ಕೆಲ ವಿದ್ಯಮಾನಗಳಿಂದ ಉಂಟಾದ ಹಾನಿ, ನಿಷ್ಕ್ರಿಯ ಆಸ್ತಿಯ ಮಟ್ಟವನ್ನು ಕಡಿಮೆ ಮಾಡಲು ಪ್ರಾಮಾಣಿಕ ಪ್ರಯತ್ನದ ಹೊರತಾಗಿಯೂ ಕೊರೋನಾ, ಭಾರತೀಯ ರಿಸರ್ವ್ ಬ್ಯಾಂಕಿನ ಸುತ್ತೋಲೆಗಳು/ಆದೇಶಗಳು, ಸರ್ಕಾರದ ಆದೇಶದಿಂದ ಎನ್‌ಪಿಎ ಮಟ್ಟದಲ್ಲಿ ಏರಿಕೆಯಾಗಿರುವುದಕ್ಕೆ ಮುಖ್ಯ ಕಾರಣ ಎಂದು ತಿಳಿಸಿದರು. ಆದರೂ 8–10 ದೊಡ್ಡ ಸಾಲಗಾರರಿಂದ ಸಾಲ ವಸೂಲಾತಿ ಮಾಡಲು ಪ್ರಯತ್ನ ಮಾಡುತ್ತೇವೆ. ಇಂತಹ ಪ್ರಯತ್ನಗಳು ನಿರಂತರವಾಗಿ ನಡೆಯಲಿವೆ. ನಮ್ಮ ಬ್ಯಾಂಕ್‌ನ ದ್ರವ್ಯತೆ ಕಡಿಮೆಯಾದರೂ ಸಹ ಬ್ಯಾಂಕ್ ಸದೃಢವಾಗಿದೆ ಎಂಬುದನ್ನು ತಿಳಿಸಿದರು. ಬ್ಯಾಂಕ್‌ನ್ನು ನಂ.1 ಸ್ಥಾನಕ್ಕೆ ಕರೆದೊಯ್ಯಲು ಪ್ರಾಮಾಣಿಕ ಪ್ರಯತ್ನ ಮುಂದೆಯೂ ಸಹ ಮಾಡುತ್ತೇವೆ ಎಂದು ತಿಳಿಸಿದರು.

ಇನ್ನೂ ಅನೇಕ ಸದಸ್ಯರು ವಾರ್ಷಿಕ ವರದಿಯನ್ನು ಪಡೆಯದೇ ಇದ್ದ ಕಾರಣ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬ್ಯಾಂಕಿನ ಆರ್ಥಿಕ ಸ್ಥಿತಿಗತಿಯನ್ನು ಸೂಕ್ಷ್ಮವಾಗಿ ತಿಳಿಸಿದರು.

ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರದಲ್ಲಿ, ವಾರ್ಷಿಕ ವರದಿಯಲ್ಲಿ ಮತ್ತು ಆಡಿಟ್ ವರದಿಯಲ್ಲಿ ಮುದ್ರಣ ದೋಷದಿಂದುಂಟಾದ ತಪ್ಪು ಒಪ್ಪುಗಳನ್ನು ಮುಖ್ಯ ಕಾರ್ಯನಿರ್ವಾಹಕರು ಸಭೆಯಲ್ಲಿ ತಿಳಿಸಿ, ಕಣ್ತಪ್ಪಿನಿಂದಾದ ಮುದ್ರಣ ದೋಷಕ್ಕೆ ಸದಸ್ಯರ ಕ್ಷಮೆ ಕೋರಿದರು.

ಅಧ್ಯಕ್ಷರು ಈ ಕೆಳಕಂಡ ವಿಷಯಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಸಭೆಗೆ ಸೂಚಿಸಿದರು.

**ವಿಷಯ 4: 2019–20ನೇ ಸಾಲಿನ ಆಡಳಿತ ಮಂಡಲಿಯ ವಾರ್ಷಿಕ ವರದಿಯನ್ನು ಪರಿಶೀಲಿಸುವುದು ಮತ್ತು 2020–21ನೇ ವರ್ಷದ ಕಾರ್ಯಯೋಜನೆಗೆ ಅನುಮೋದನೆ.**

**ವಿಷಯ 5: 2019–20ನೇ ಸಾಲಿನ ಆಡಿಟ್ ಆದ ಲೆಕ್ಕ ಪತ್ರಗಳ ತಃಖ್ತೆ, ಲೆಕ್ಕ ಪರಿಶೋಧನಾ ವರದಿ ಮತ್ತು ಆಡಳಿತ ಮಂಡಲಿಯ ಅನುಪಾಲನಾ ವರದಿಯನ್ನು ಪರಿಶೀಲಿಸಿ ಅಂಗೀಕರಿಸುವುದು**

**ವಿಷಯ 6: 2019–20ನೇ ಸಾಲಿನಲ್ಲಿ ಅಂದಾಜು ಆಯವ್ಯಯಕ್ಕಿಂತ ಹೆಚ್ಚುವರಿ ಆಗಿರುವ ಖರ್ಚನ್ನು ಅನುಮೋದಿಸುವುದು ಮತ್ತು 2020–21ನೇ ಸಾಲಿನ ಅಂದಾಜು ಆಯವ್ಯಯವನ್ನು ಮಂಜೂರು**

ಮಾಡುವುದು

**ವಿಷಯ 7: 2019–20ನೇ ಸಾಲಿನ ನಿವ್ವಳ ಲಾಭದ ಹಂಚಿಕೆಯನ್ನು ಅನುಮೋದಿಸುವುದು**

**ವಿಷಯ 8: ಉಪವಿಧಿಗಳ ತಿದ್ದುಪಡಿ**

**ವಿಷಯ 9: 2020–21ನೇ ಸಾಲಿಗೆ ಲೆಕ್ಕಪರಿಶೋಧಕರನ್ನು ನೇಮಿಸುವುದು**

**ವಿಷಯ 10: ಬ್ಯಾಂಕಿನ ನಿರ್ದೇಶಕರು ಮತ್ತು ಅವರ ಸಂಬಂಧಿಕರು ಪಡೆದಿರುವ ಸಾಲಗಳ ಪರಿಶೀಲನೆ**
**ವಿಷಯ 11: ನಿಧಿಗಳ ವಾಸ್ತವಿಕ ಬಳಕೆ ಬಗ್ಗೆ ವಿಮರ್ಶೆ**

**ವಿಷಯ 12: ಬ್ಯಾಂಕಿನ ಸದಸ್ಯತ್ವಕ್ಕೆ ಸೇರ್ಪಡೆ ಮತ್ತು ತೆಗೆದು ಹಾಕಿದ ಸದಸ್ಯರ ಕುರಿತು ಟಿಪ್ಪಣಿ**

**ವಿಷಯ 13: ನಿರ್ಣಯಗಳನ್ನು ಅಂಗೀಕರಿಸುವುದು**

ಈ ಮೇಲ್ಕಂಡ ವಿಷಯಗಳ ಬಗ್ಗೆ ಚರ್ಚೆಯಲ್ಲಿ ಕೆಳಕಂಡ ಸದಸ್ಯರು ಭಾಗವಹಿಸಿದರು.

**1) ಶ್ರೀ.ಬಿ.ಎನ್.ಭಾಸ್ಕರ್ (ಸ.ಸಂ.4849)**

ಅಧ್ಯಕ್ಷರು, ಕಾರ್ಯಕಾರಿ ಮಂಡಳಿ ಸದಸ್ಯರಿಗೆ ಮತ್ತು ಸಿಬ್ಬಂದಿಗಳಿಗೆ ಧನ್ಯವಾದಗಳನ್ನು ಹೇಳುತ್ತಾ ಸಭೆಯಲ್ಲಿ ಚರ್ಚೆಗೆ ಮುಂದಾದರು.

ಬ್ಯಾಂಕಿನ ಆರ್ಥಿಕ ತಃಖ್ತೆಗಳ ಮೇಲೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ, ಕೋವಿಡ್‌ನಿಂದ ಮಾರ್ಚ್ 2020 ಒಂದು ತಿಂಗಳು ಬಿಟ್ಟು ಆರ್ಥಿಕ ವರ್ಷದಲ್ಲಿ ಕೇವಲ 11ತಿಂಗಳುಗಳು ಮಾತ್ರ ಇದ್ದುದಾಗಿ ತಿಳಿಸಿದರು.

ಸಾಲದಲ್ಲಿ ರೂ.41 ಕೋಟಿಯಷ್ಟು ಹೆಚ್ಚಾಗಿರುವುದು ಗಮನಕ್ಕೆ ಬಂದಿದೆ. ಸಾಲ ವಸೂಲಾತಿ ಕಡಿಮೆಯಾಗಿದೆ. ಹೂಡಿಕೆಗಳು ರೂ.358 ಕೋಟಿಯಷ್ಟು ಕಡಿಮೆಯಾಗಿದೆ, ಶ್ರೀ.ರಾಘವೇಂದ್ರ ಕೋ–ಆಪರೇಟಿವ್ ಬ್ಯಾಂಕ್‌ನಲ್ಲಾದ ಬೆಳವಣಿಗೆಯಿಂದ ನಮ್ಮ ಬ್ಯಾಂಕಿನ ಮೇಲೆ ಬೀರಿದ ವ್ಯತಿರಿಕ್ತ ಪರಿಣಾಮಗಳನ್ನು ತಿಳಿಸಿದರು. ಸಾಲ ನೀಡುವಿಕೆಯಲ್ಲಿ ಹೆಚ್ಚಿನ ಪ್ರಗತಿಯಿಲ್ಲದಿರುವುದರಿಂದ ಸಾಲಗಳ ಮೇಲಿನ ಬಡ್ಡಿ ಮತ್ತು ಹೂಡಿಕೆಗಳ ಮೇಲೆ ಬಡ್ಡಿ ಕಡಿಮೆಯಾಗಿರುವುದನ್ನು ಸಭೆಯಲ್ಲಿ ಚರ್ಚಿಸಿದರು. ಬ್ಯಾಂಕಿನ ಒಟ್ಟು ಆದಾಯ 21 ಕೋಟಿಯಷ್ಟು ಕಡಿಮೆಯಾಗಿದೆ. ಸಾಲ ವಿತರಣೆಯಲ್ಲಿ 96 ಕೋಟಿ ಕಡಿಮೆಯಾಗಿದೆ, ಸಾಲ ವಸೂಲಾತಿ 113 ಕೋಟಿ ಕಡಿಮೆಯಾಗಿದೆ, ಹಾಗೂ ಲಾಭದಲ್ಲಿ ರೂ.1.49 ಲಕ್ಷ ಕಡಿಮೆಯಾಗಿರುವುದಾಗಿ ತಿಳಿಸಿದರು.

ಕೋವಿಡ್ ಪೂರ್ವದಲ್ಲೇ ಇಷ್ಟು ನಷ್ಟವಿರುವಾಗ ಕೋವಿಡ್ ನಂತರದ ಪರಿಸ್ಥಿತಿಯ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದರು. ಕಳೆದ ವರ್ಷ ನಿಷ್ಕ್ರಿಯ ಆಸ್ತಿಯ ಪ್ರಮಾಣ ಶೇ.19 ರಷ್ಟಿದ್ದು, ಈ

ಬಾರಿ ಅದು ಶೇ.31.41 ರಷ್ಟಿದೆ. ನಿಷ್ಕ್ರಿಯ ಆಸ್ತಿಗಳಿಗೆ ಹೆಚ್ಚಿನ ಮೀಸಲಾತಿ ಕೂಡಾ ಮಾಡಲು ಅವಕಾಶವಿರುವುದಿಲ್ಲ.

ವಾರ್ಷಿಕ ವರದಿಯ ಪುಟ ಸಂಖ್ಯೆ.19ರಲ್ಲಿ ನಿಷ್ಕ್ರಿಯ ಆಸ್ತಿಯ ಪ್ರಮಾಣ ಶೇ.29 ಕ್ಕೆ ಬದಲಾಗಿ ಶೇ.31.41 ಎಂದು ತಪ್ಪಾಗಿ ನಮೂದಾಗಿರುವುದಾಗಿ ತಿಳಿಸಿದರು. ನಿಷ್ಕ್ರಿಯ ಆಸ್ತಿಗಳ ವಸೂಲಾತಿಯಲ್ಲಿ ಪ್ರಗತಿಯಾಗದೇ ಇದ್ದರೆ, ಭಾರತೀಯ ರಿಸರ್ವ್ ಬ್ಯಾಂಕ್ ನಮ್ಮ ಮೇಲೆ Prompt Corrective Action ವಿಧಿಸಬಹುದೆಂದು ಕಳವಳ ವ್ಯಕ್ತಪಡಿಸಿದರು. ಸುಸ್ತಿ ಸಾಲದಲ್ಲಿ ಏರಿಕೆಯಾಗಿರುವುದು ಕಳವಳಕಾರಿ ಸಂಗತಿಯೆಂದು ತಿಳಿಸಿದರು. ಶಾಖಾವಾರು ಸುಸ್ತಿ ಸಾಲದ ವಿವರ ಕೊಟ್ಟರೆ ಅನುಕೂಲವಾಗುತ್ತದೆ.

ಆಡಿಟ್ ವರದಿಯಲ್ಲಿ ಪುಟ 79ರಲ್ಲಿ ಶಾಖಾವಾರು ಸಾಲ ಮತ್ತು ಠೇವಣಿಗಳ ವಿವರ ಒಟ್ಟು ಲಾಭ ಅಥವಾ ನಿವ್ವಳ ಲಾಭಕ್ಕೆ ಹೊಂದಾಣಿಕೆಯಾಗುವುದಿಲ್ಲವೆಂದು ತಿಳಿಸಿದರು.

ಆಡಿಟ್ ವರದಿ ಪುಟ ಸಂಖ್ಯೆ. 17 – (ಎಫ್)(iv)ರಲ್ಲಿ ಅನುತ್ಪಾದಕ ಆಸ್ತಿಗಳ ಮೇಲೆ ರೂ.3925 ಲಕ್ಷಗಳ ನಿಧಿಗೆ ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಲಾಗಿದೆ ಆದರೆ ಆಡಿಟ್ ವರದಿ ಪುಟ ಸಂಖ್ಯೆ 61 ಇ 1 ಮತ್ತು 2ರಲ್ಲಿ ಈ ಮೊತ್ತವನ್ನು 900.00 ಲಕ್ಷಗಳೆಂದು ನಮೂದಿಸಲಾಗಿದೆ. ಈ ಎರಡರಲ್ಲಿ ಯಾವುದು ಸರಿಯೆಂದು ಸ್ಪಷ್ಟನೆ ಕೋರಿದರು.

ವಾರ್ಷಿಕ ವರದಿಯ ಪುಟ ಸಂಖ್ಯೆ 26ರಲ್ಲಿ ಭದ್ರತಾ ಪತ್ರಗಳ ವಹಿವಾಟಿನ ಲಾಭಕ್ಕೆ ಅನುಬಂಧ ನೀಡದಿರುವುದನ್ನು ಪ್ರಸ್ತಾಪಿಸಿದರು.

ವಾರ್ಷಿಕ ವರದಿಯ ಪುಟ ಸಂಖ್ಯೆ 42ರಲ್ಲಿ ನಮೂದಾಗಿರುವ ಅನುತ್ಪಾದಕ ಶಾಸನ ಬದ್ಧವಲ್ಲದ ದ್ರವ್ಯಾಸ್ತಿ ಬಗ್ಗೆ ವಿವರಣೆಯನ್ನು ಕೋರಿದರು

ಆಡಿಟ್ ವರದಿಯ ಪುಟ ಸಂಖ್ಯೆ 86ರಲ್ಲಿನ ಶೀರ್ಷಿಕೆಯನ್ನು ಲೆಕ್ಕಪರಿಶೋಧನಾ ವರದಿಯಲ್ಲಿರುವ ನ್ಯೂನತೆಗಳ ಬದಲಾಗಿ ಸಮಂಜಸವಾದ ಶೀರ್ಷಿಕೆ ನೀಡವಂತೆ ಸಲಹೆ ನೀಡಿದರು.

ವಾರ್ಷಿಕ ಸಭೆಯ ಸೂಚನಾ ಪತ್ರ, ವಾರ್ಷಿಕ ವರದಿ ಮತ್ತು ಆಡಿಟ್ ವರದಿಗಳನ್ನು ಪ್ರತ್ಯೇಕವಾಗಿ ಮುದ್ರಿಸುವ ಬದಲು, ಹಲವಾರು ವಿಷಯಗಳು ಎಲ್ಲದರಲ್ಲೂ ಪುನರಾವರ್ತಿತವಾಗುವುದರಿಂದ, ಮೂರೂ ವರದಿಗಳನ್ನು ಕ್ರೂಢೀಕರಿಸಿ ಒಂದು ಪುಸ್ತಕ ಮಾಡಿ ಪುಟ ಸಂಖ್ಯೆಯನ್ನು ಕಡಿಮೆಮಾಡಿ, ಮುದ್ರಣ ವೆಚ್ಚವನ್ನು ಕಡಿತಗೊಳಿಸಲು ಸಲಹೆ ನೀಡಿದರು.

ಮುಂದಿನ ದಿನಗಳಲ್ಲಿ ಕಡಿಮೆ ವೆಚ್ಚದ ಠೇವಣಿಗಳು ಹೆಚ್ಚಾಗಿ ಬ್ಯಾಂಕಿನ ಪರಿಸ್ಥಿತಿ ಮೊದಲಿನಂತಾಗಲಿ ಎಂದು ಶುಭ ಹಾರೈಸಿದರು.

**2) ಶ್ರೀ. ಟಿ.ಜಿ. ಸತೀಶ್ (ಸ.ಸಂ.11727)**

ಬ್ಯಾಂಕಿನ ಕಟ್ಟಡಗಳಿಗೆ ನೀಡುತ್ತಿರುವ ಬಾಡಿಗೆ ಮೊತ್ತವನ್ನು ಕಡಿಮೆಮಾಡಲು ಸಲಹೆ ನೀಡಿದರು. ಅನೇಕ ಶಾಖೆಗಳಲ್ಲಿ ಅಗತ್ಯಕ್ಕಿಂತ ಹೆಚ್ಚು ವಿಸ್ತೀರ್ಣದ ಕಟ್ಟಡಗಳನ್ನು ಬಾಡಿಗೆಗೆ ಪಡೆಯಲಾಗಿದೆ. ಅದರ ಬದಲು ಶಾಖೆಯ ವ್ಯವಹಾರಕ್ಕೆ ಅನುಗುಣವಾಗಿ ಬಾಡಿಗೆ ಕಟ್ಟಡಗಳ ವಿಸ್ತೀರ್ಣವನ್ನು ನಿಗದಿಪಡಿಸಬೇಕಾಗಿ ತಿಳಿಸಿದರು. ವಸೂಲಾಗದ ನಿಷ್ಕ್ರಿಯ ಆಸ್ತಿಗಳ ಪಟ್ಟಿಯನ್ನು ಬ್ಯಾಂಕಿನ ಸೂಚನಾ ಫಲಕಗಳಲ್ಲಿ ಪ್ರಕಟಿಸಬೇಕೆಂದು ತಿಳಿಸಿದರು. ಸಿಬ್ಬಂದಿಗಳ ವರ್ಗಾವಣೆಗೆ ಒಂದು ಕಾಲಮಿತಿಯನ್ನು ನಿಗದಿಪಡಿಸಿ, ಎಲ್ಲಾ ಸಿಬ್ಬಂದಿಗಳ ವರ್ಗಾವಣೆಯನ್ನು ಕಾಲಕಾಲಕ್ಕೆ ಮಾಡಬೇಕೆಂದು ತಿಳಿಸಿದರು.

**3) ಶ್ರೀ. ಟಿ.ಎಸ್. ಗಿರೀಶ್ (ಸ.ಸಂ.27936)**

ಈ ವರ್ಷವೂ ಸಹ ಡಿವಿಡೆಂಡ್ ನೀಡಲಾಗುವುದಿಲ್ಲವೇ ಎಂಬುದರ ಬಗ್ಗೆ ಸ್ಪಷ್ಟನೆಯನ್ನು ಕೋರಿದರು.

ಶಾಖೆಗಳಲ್ಲಿ ಪದೇಪದೇ ಸಿಬ್ಬಂದಿಗಳ ವರ್ಗಾವಣೆಯಿಂದ ಗ್ರಾಹಕರ ಸೇವೆಯಲ್ಲಿ ಮತ್ತು ಗ್ರಾಹಕರನ್ನು ಗುರುತಿಸುವುದರಲ್ಲಿ ಆಗುತ್ತಿರುವ ತೊಂದರೆಯನ್ನು ಸಭೆಯ ಗಮನಕ್ಕೆ ತಂದರು.

**4) ಶ್ರೀ. ಎನ್.ಸಿ. ಕೃಷ್ಣ (ಸ.ಸಂ.2634)**

ಅಧ್ಯಕ್ಷರು, ಕಾರ್ಯಕಾರಿ ಮಂಡಳಿ ಸದಸ್ಯರಿಗೆ ಮತ್ತು ಸಿಬ್ಬಂದಿಗಳಿಗೆ ಧನ್ಯವಾದಗಳನ್ನು ತಿಳಿಸಿದರು. ಕಳೆದ ಮೂರು ವರ್ಷಗಳಿಂದ ಡಿವಿಡೆಂಡ್ ನೀಡದಿರುವುದರ ಬಗ್ಗೆ ಸ್ಪಷ್ಟನೆಯನ್ನು ಕೋರಿದರು.

**5) ಮುರಳೀಧರ್ ಹೆಚ್.ಎನ್. (ಸ.ಸಂ.7761)**

ಬ್ಯಾಂಕಿನ ಸದಸ್ಯರಾಗಿರುವುದಕ್ಕೆ ಹರ್ಷ ವ್ಯಕ್ತಪಡಿಸಿದರು. ಬ್ಯಾಂಕಿಗೆ ಒಳ್ಳೆಯದಾಗಲೆಂದು ಹಾರೈಸಿದರು.

**6) ಸೋಮಶೇಖರ್ ಬಿ.ವಿ. (ಸ.ಸಂ.22005)**

Personalised cheque books ವಿತರಿಸಲು ಸಲಹೆ ನೀಡಿದರು

**7) ರಮೇಶ್ ಎಸ್. (ಸ.ಸಂ.26479)**

ನೂತನ ಠೇವಣಿ ಯೋಜನೆಗಳನ್ನು ಪರಿಚಯಿಸಲು ಸಲಹೆ ನೀಡಿದರು.

**8) ಅನನ್ಯ ಕಶ್ಯಪ್ ಕೆ (ಸ.ಸಂ.24969)**

ಡಿವಿಡೆಂಡ್‌ನ ಪೂರ್ಣ ಮೊತ್ತ ನೀಡಲು ಮನವಿ ಮಾಡಿದರು.

**9) ಮಂಜುನಾಥ್ ಹೆಚ್.ಎಸ್. (ಸ.ಸಂ.4899)**

ಬ್ಯಾಂಕಿನ ಆರ್ಥಿಕ ಸದೃಢತೆಯ ಬಗ್ಗೆ ಕೇಳಿದರು.

**10) ಮಂಜುನಾಥ್ ಕಾರಂತ್ ಆರ್. (ಸ.ಸಂ.7802)**

ನಿಷ್ಕ್ರಿಯ ಸಾಲಗಳಿಗೆ ಅಡಮಾನ ಮಾಡಿದ ಆಸ್ತಿಗಳನ್ನು ಬ್ಯಾಂಕಿನ ಸುಪರ್ದಿಗೆ ಪಡೆಯಲು ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ಸೂಚಿಸಿದರು.

**11) ಪ್ರಕಾಶ್ ಹೆಚ್.ಎಸ್. (ಸ.ಸಂ.4261)**

ಪ್ರಸ್ತುತ ಜಾರಿಯಲ್ಲಿರುವ DICGC ಮಿತಿಯನ್ನು ರೂ.15.00 ಲಕ್ಷಗಳಿಗೆ ಏರಿಸಿದರೆ ಠೇವಣಿ ಸಂಗ್ರಹದಲ್ಲಿ ಪ್ರಗತಿ ಸಾಧಿಸಬಹುದೆಂದು ತಿಳಿಸಿದರು.

**12) ನಾಗರಾಜ್ ಕೆ.ವಿ.(ಸ.ಸಂ.22247)**

ಈ ಸಾಲಿನ ಡಿವಿಡೆಂಡ್ ನೀಡುವಿಕೆಯ ಬಗ್ಗೆ ಸ್ಪಷ್ಟತೆಯನ್ನು ಕೋರಿದರು.

**13) ಕೇಶವ ಮೂರ್ತಿ ಎಂ.ಆರ್.(ಸ.ಸಂ.2302)**

ಶಾಖೆಗಳಲ್ಲಿ ಒಂದು ವಾರ ಸಿಹಿ ತಿಂಡಿ ವಿತರಿಸಲು ಮನವಿ ಮಾಡಿದರು.

**14) ಸೀತಾರಾಮ್ ಜಿ.ಎಸ್. (ಸ.ಸಂ.28885)**

ಬ್ಯಾಂಕಿನ ಆಡಳಿತ ಮಂಡಳಿಯ ಸದಸ್ಯರು ಪ್ರತಿ ವರ್ಷ ತಮ್ಮ ಆಸ್ತಿಯ ಘೋಷಣೆಯನ್ನು ಮಾಡಬೇಕೆಂದು ಕೇಳಿದರು.

ಕೋವಿಡ್ ಸಾಂಕ್ರಾಮಿಕ ಕಾರಣದಿಂದ ಈ ವರ್ಷ ವರ್ಚ್ಯುಯಲ್ ಸಭೆ ನಡೆಸುತ್ತಿರುವುದು ತುಂಬಾ ಬೇಸರದ ವಿಷಯವಾಗಿದೆ. ಯಾವಾಗಲೂ ಮುಖಾಮುಖಿಯಾಗಿ ಸಭೆ ನಡೆಸುವುದೇ ತುಂಬಾ ಸಮಂಜಸ ಮತ್ತು ಸೂಕ್ತ. ವಾದ ವಿವಾದಗಳ ಮಧ್ಯದಲ್ಲಿ ವಾರ್ಷಿಕ ಸಾಮಾನ್ಯ ಸಭೆಯನ್ನು ನಡೆಸುವುದೇ ತುಂಬಾ ಸಂತೋಷ ಮತ್ತು ವಾರ್ಷಿಕ ಸಾಮಾನ್ಯ ಸಭೆಗೆ ಶೋಭೆ ಎನ್ನುವುದೇ ನನ್ನ ಭಾವನೆ, ಈ ರೀತಿ ಖಾಲಿ ಕುರ್ಚಿ ಮೇಜುಗಳನ್ನು ನೋಡಿಕೊಂಡು ಸಭೆಯನ್ನು ನಡೆಸಬೇಕಾಗಿರುವುದು ತುಂಬಾ ನೋವಾಗಿದೆ ಎಂದು ಹೇಳುತ್ತಾ, ಅಧ್ಯಕ್ಷರು ಈ ಕೆಳಕಂಡಂತೆ ಉತ್ತರ ನೀಡಿದರು.

**ಸದಸ್ಯರ ಪ್ರಶ್ನೆಗಳಿಗೆ ಅಧ್ಯಕ್ಷರು ಈ ಕೆಳಕಂಡಂತೆ ಉತ್ತರ ನೀಡಿದರು.**

1) ಫೆಬ್ರವರಿ 2020ರಲ್ಲಿ ಆಡಳಿತ ಮಂಡಲಿ ಅಧಿಕಾರಕ್ಕೆ ಬಂದ ತಕ್ಷಣ ಕೊರೋನಾ ಸಾಂಕ್ರಾಮಿಕ

ಆರಂಭವಾಯಿತು. ಮುಂದಿನ ದಿನಗಳಲ್ಲಿ ಯಾವುದೇ ರಾಜಿ ಮಾಡಿಕೊಳ್ಳದೇ, ಬ್ಯಾಂಕ್‌ನ್ನು ಹಿಂದಿನ ಪರಿಸ್ಥಿತಿಗೆ ತರುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದು ತಿಳಿಸಿದರು. ಶಾಖಾವಾರು ನಿಷ್ಕ್ರಿಯ ಆಸ್ತಿಗಳ ವಸೂಲಾತಿ ಪ್ರಗತಿಯನ್ನು ಮುಂದಿನ ದಿನಗಳಲ್ಲಿ ತಪ್ಪದೇ ನೀಡುವುದಾಗಿ ತಿಳಿಸಿದರು.

2) ಬ್ಯಾಂಕಿನ ಎರಡು ಶಾಖೆಗಳ ಕಟ್ಟಡಗಳನ್ನು ಕಡಿಮೆ ವಿಸ್ತೀರ್ಣ ಮತ್ತು ಕಡಿಮೆ ಬಾಡಿಗೆಯಿರುವ ಕಟ್ಟಡಗಳಿಗೆ ಸ್ಥಳಾಂತರಿಸಲಾಗಿದೆ. ಅತೀ ಶೀಘ್ರದಲ್ಲಿ ಅಗ್ರಹಾರ ದಾಸರಹಳ್ಳಿ ಮತ್ತು ಕೋರಮಂಗಲ ಶಾಖೆಗಳನ್ನು ಬೇರೆ ಕಟ್ಟಡಗಳಿಗೆ ಸ್ಥಳಾಂತರಿಸಲಾಗುವುದು ಎಂದು ತಿಳಿಸಿದರು. ಏಕ ವ್ಯಕ್ತಿ ಸಾಲ ಮತ್ತು ದೊಡ್ಡ ಸಾಲಗಳನ್ನು ನೀಡದೆ, ಹೆಚ್ಚು ವ್ಯಕ್ತಿಗಳಿಗೆ ಕಡಿಮೆ ಮೊತ್ತದ ಸಾಲಗಳನ್ನು ನೀಡುವುದಕ್ಕೆ ಕ್ರಮವಹಿಸಲಾಗುವುದೆಂದು ತಿಳಿಸಿದರು. ಇನ್ನು ಸಿಬ್ಬಂದಿಗಳಿಗೆ ಕನಿಷ್ಟ 3 ವರ್ಷಗಳಿಗೊಮ್ಮೆ ವರ್ಗಾವಣೆ ಮಾಡಲು ಕ್ರಮವಿಡುವುದಾಗಿ ತಿಳಿಸಿದರು.

3) ನಿಷ್ಕ್ರಿಯ ಆಸ್ತಿಯ ಮಟ್ಟ ಅಧಿಕವಾಗಿರುವುದರಿಂದ ಭಾರತೀಯ ರಿಸರ್ವ್ ಬ್ಯಾಂಕು ಡಿವಿಡೆಂಡ್ ನೀಡುವುದಕ್ಕೆ ಅನುಮತಿಯನ್ನು ನೀಡಿರುವುದಿಲ್ಲ. ಸಾಲ ವಸೂಲಾತಿ ಪ್ರಕ್ರಿಯೆಯನ್ನು ತೀವ್ರಗೊಳಿಸಿ ಡಿವಿಡೆಂಡ್ ನೀಡಲು ಕ್ರಮವಿಡುವುದಾಗಿ ತಿಳಿಸಿದರು.

4) ಪ್ರಸಕ್ತ ಸಾಲಿನಲ್ಲಿ ಬಹಿರಂಗ ಹರಾಜಿನಲ್ಲಿ ರೂ.2.5ಕೋಟಿ ಗಳಿಸಿದ್ದೇವೆ, ರೂ.16.00 ಕೋಟಿ ನಿಷ್ಕ್ರಿಯ ಆಸ್ತಿಯನ್ನು ವಸೂಲು ಮಾಡಿದ್ದೇವೆ. ಮುಂದಿನ ಸಾಲಿನಲ್ಲಿ ರೂ.220.00 ಕೋಟಿಗಳಷ್ಟು ನಿಷ್ಕ್ರಿಯ ಸಾಲಗಳನ್ನು ವಸೂಲು ಮಾಡಲಾಗುವುದು. ಹರಾಜು ಪ್ರಕ್ರಿಯೆಗಳನ್ನು ತ್ವರಿತವಾಗಿ ನಡೆಸಲು ಕ್ರಮ ಕೈಗೊಳ್ಳಲಾಗುವುದು. ಸಾಲಗಾರರ ಮನೆಗಳಿಗೆ ಭೇಟಿ ನೀಡಿ ವಸೂಲಾತಿ ಕ್ರಮಗಳನ್ನು ಅತ್ಯಂತ ಶ್ರಮವಹಿಸಿ ಮಾಡಲಾಗುವುದು ಎಂದು ತಿಳಿಸಿದರು.

5) ಬ್ಯಾಂಕಿನ ಸದಸ್ಯರಾಗಿರುವುದಕ್ಕೆ ಸಂತೋಷ ವ್ಯಕ್ತಪಡಿಸಿದ್ದೀರಿ. ನಿಮ್ಮ ವಿಶ್ವಾಸಕ್ಕೆ ನಾವು ಚಿರ ಋಣಿಗಳು ಎಂದು ಧನ್ಯವಾದ ಅರ್ಪಿಸಿದರು.

6) ಬ್ಯಾಂಕಿನ ಠೇವಣಿದಾರರ ಹಿತಾಸಕ್ತಿಯನ್ನು ಕಾಪಾಡುವುದು ನಮ್ಮ ಆದ್ಯ ಕರ್ತವ್ಯ. ಠೇವಣಿದಾರರು ಯಾವುದೇ ರೀತಿಯ ಅನುಮಾನ ಅಥವಾ ಭಯವಿಲ್ಲದೆ ಎಂದಿನಂತೆ ನಮ್ಮ ಬ್ಯಾಂಕಿನಲ್ಲಿ ವ್ಯವಹಾರವನ್ನು ಮುಂದುವರೆಸುವಂತೆ ಮನವಿಯನ್ನು ಮಾಡಿದರು. ಆರ್ಥಿಕ ಪರಿಸ್ಥಿತಿಗನುಗುಣವಾಗಿ ಠೇವಣಿಗಳ ಮೇಲಿನ ಬಡ್ಡಿದರವನ್ನು ಹೆಚ್ಚಿಸಲು ಕ್ರಮವಹಿಸುವುದಾಗಿ ತಿಳಿಸಿದರು.

7) ಈಗಾಗಲೇ ಶಾಖೆಗಳಲ್ಲಿ ಮನವಿಯನ್ನು ಸಲ್ಲಿಸಿ personalized cheque books ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಮಾನ್ಯ ಗ್ರಾಹಕರು ಈ ಸೌಲಭ್ಯವನ್ನು ಪಡೆಯಬೇಕೆಂದು

ಮನವಿ ಮಾಡಿದರು.

8) ದಿನಾಂಕ 05.05.2020ರಿಂದ ಜಾರಿಗೆ ಬರುವಂತೆ ಈಗಾಗಲೇ ವಿಶೇಷ ಬಡ್ಡಿ ಯೋಜನೆಯಡಿಯಲ್ಲಿ ಠೇವಣಿಗಳನ್ನು ಮಾಡಲು ಅವಕಾಶ ಕಲ್ಪಿಸಲಾಗಿದೆ. ಶೇ.8.25 ಬಡ್ಡಿಯನ್ನು ಈಗಾಗಲೇ ನೀಡುತ್ತಿದ್ದು ಇದರ ಸದುಪಯೋಗ ಪಡೆಯುವಂತೆ ಸದಸ್ಯರನ್ನು ಕೋರಿದರು.

9) ನಿಷ್ಕ್ರಿಯ ಆಸ್ತಿಗಳ ಮಟ್ಟವನ್ನು ತಗ್ಗಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಿರುವುದಾಗಿ ತಿಳಿಸಿದರು. ಸಾಲಗಳ ಮೇಲೆ ಸರಳ ಬಡ್ಡಿ ವಿಧಿಸಿ, ರಾಜಿ ಸಂಧಾನದ ಮೂಲಕ ಸಾಲ ಖಾತೆಗಳನ್ನು ತ್ವರಿತವಾಗಿ ಚುಕ್ತಗೊಳಿಸಲು ಕ್ರಮ ಕೈಗೊಳ್ಳುತ್ತಿರುವುದಾಗಿ ತಿಳಿಸಿದರು.

10) ಹಿಂದಿನ ಡಿವಿಡೆಂಡ್ ಕೂಡ ಸೇರಿಸಿಕೊಂಡು ನೀಡುವುದರ ಕುರಿತು ಕೋರಿದ್ದೀರಿ. ಒಟ್ಟಿಗೆ ಸೇರಿಸಿ ಕೊಡಲು ಕಾನೂನಿನಲ್ಲಿ ಅವಕಾಶ ಇರುವುದಿಲ್ಲ. ಆದಾಗ್ಯೂ ಒಟ್ಟಿಗೇ ಶೇ.25 ರಷ್ಟು ಡಿವಿಡೆಂಡ್ ನೀಡಲು ಅವಕಾಶ ಇದೆ. ಹಾಗಾಗಿ ಈ ನಿಟ್ಟಿನಲ್ಲಿ ಸರ್ವ ಪ್ರಯತ್ನ ಮಾಡಲಾಗುವುದು.

11) ಇದೇ 2019–20ನೇ ಸಾಲಿನಲ್ಲಿ ಸಹಕಾರ ರಂಗಕ್ಕೆ ಬಂದಂತಹಾ ಸುನಾಮಿ ಅಂದರೆ ಅದು ಪಕ್ಕದ ಬ್ಯಾಂಕಿನ ವಿಫಲತೆಯಿಂದಾಗಿ, ಜನವರಿ 2020ರಲ್ಲಿ ಸುಮಾರು 400 ಕೋಟಿಗಳಷ್ಟು ಠೇವಣಿ ಹೊರಹರಿವು ಆಗಿದ್ದು, ಈ ಬಿರುಗಾಳಿಯನ್ನು ತಡೆದುಕೊಂಡು ಮತ್ತೆ ನಮ್ಮೆಲ್ಲ ಪ್ರೀತಿಯ ಸದಸ್ಯರು ಹಾಗೂ ಗ್ರಾಹಕರ ವಿಶ್ವಾಸ ಗಳಿಸಿ ಠೇವಣಿ ಸಂಗ್ರಹಣೆ ಮುಂದುವರೆದು ಪ್ರಸ್ತುತ 1700 ಕೋಟಿ ಠೇವಣಿಯನ್ನು ಹೊಂದಿದ್ದೇವೆ. ಗ್ರಾಹಕರ ವಿಶ್ವಾಸಕ್ಕೆ ಪಾತ್ರರಾಗಿ ಮತ್ತೆ ನಂ.1 ಬ್ಯಾಂಕ್ ಆಗಿ ಕೊಂಡೊಯ್ಯುತ್ತೇವೆ ಎಂದು ತಿಳಿಸಿದರು.

12) ನಿಷ್ಕ್ರಿಯ ಸಾಲಗಳಿಗೆ ಅಡಮಾನ ಮಾಡಿದ ಆಸ್ತಿಗಳನ್ನು ಬ್ಯಾಂಕಿನ ಸುಪರ್ದಿಗೆ ಪಡೆಯಲು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಿಂದ 07.01.2021ರ ತನಕ ತಡೆಯಾಜ್ಞೆ ಇರುವುದರಿಂದ ಸ್ಥಿರಾಸ್ತಿ ಹರಾಜು ಪ್ರಕ್ರಿಯೆಗೆ ಹಿನ್ನಡೆಯಾಗಿದೆ. ಸುಮಾರು 23 ಆಸ್ತಿಗಳ ಹರಾಜಿಗೆ ಸಿದ್ಧತೆ ನಡೆಯುತ್ತಿದೆ ಎಂದು ತಿಳಿಸಿದರು.

13) DICGC ಮಿತಿಯನ್ನು ಐದು ಲಕ್ಷಗಳಿಗೆ ಏರಿಸಿದ್ದು ಕೇಂದ್ರ ಸರ್ಕಾರ. ಈ ಅಧಿಕಾರವು ಅವರ ಬಳಿಯಲ್ಲಿ ಇರುವುದರಿಂದ, ಇದರ ಮಿತಿಯನ್ನು ನಾವು ಹೆಚ್ಚಿಸಲು ಸಾಧ್ಯವಿಲ್ಲವೆಂದು ತಿಳಿಸಿದರು.

14) ನಿಷ್ಕ್ರಿಯ ಆಸ್ತಿಗಳ ಮಟ್ಟ ಹೆಚ್ಚಿರುವುದರಿಂದ ಡಿವಿಡೆಂಡ್ ನೀಡಲು ಭಾರತೀಯ ರಿಸರ್ವ್ ಬ್ಯಾಂಕಿನವರು ಅನುಮತಿ ನೀಡಿಲ್ಲ. ಲಾಭ ಗಳಿಸಿದ್ದರೂ ಸಹ ಈ ಮೊತ್ತವನ್ನು ರಿಸರ್ವ್ ಫಂಡ್ಗೆ ಹಾಕಬೇಕೆಂದು ಆದೇಶ ನೀಡಿರುವ ಕಾರಣದಿಂದ ಈ ಸಾಲಿನಲ್ಲಿಯೂ ಸಹ

ಡಿವಿಡೆಂಡ್ ನೀಡಲು ಸಾದ್ಯವಾಗುವುದಿಲ್ಲವೆಂದು ತಿಳಿಸಿದರು.

15) ಈ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯನ್ನು ವರ್ಚ್ಯುಯಲ್ ಆಗಿ ನಡೆಸುತ್ತಿರುವುದಕ್ಕೆ ಬೇಸರ ವ್ಯಕ್ತಪಡಿಸಿದರು. ವರ್ಷಕ್ಕೆ ಒಮ್ಮೆ ಮಾನ್ಯ ಸದಸ್ಯರಿಗೆ ಊಟದ ವ್ಯವಸ್ಥೆ ಮಾಡುವ ಪದ್ಧತಿ ಕೊರೋನಾ ಕಾರಣದಿಂದ ಈ ಬಾರಿ ತಪ್ಪಿದೆ. ಆದ ಕಾರಣಕ್ಕೆ ಹತ್ತು ದಿನಗಳ ಕಾಲ ಸದಸ್ಯರಿಗೆ ಆಡಳಿತ ಕಛೇರಿಯಲ್ಲಿ ಸಿಹಿ ವಿತರಿಸಲು ನಿರ್ಧರಿಸಲಾಗಿದೆ ಎಂದು ತಿಳಿಸಿದರು.

16) ನಿರ್ದೇಶಕರ ಆಸ್ತಿ ಘೋಷಣೆಯ ವಿಚಾರದಲ್ಲಿ ಜನ ಪ್ರತಿನಿಧಿಗಳ ಕಾಯ್ದೆ ಸಹಕಾರ ಸಂಘ ಸಂಸ್ಥೆಗಳಿಗೆ ಅನ್ವಯಿಸುವುದಿಲ್ಲ. ಆದಾಗ್ಯೂ ಈ ಬಗ್ಗೆ ಪರಿಶೀಲಿಸಿ ನಿರ್ಧಾರ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

**ಕೆಳಕಂಡ ನಿರ್ಣಯಗಳನ್ನು ಅಧ್ಯಕ್ಷರು ಸಭೆಯ ಮುಂದೆ ಮಂಡಿಸಿದರು**

ಆಡಳಿತ ಮಂಡಲಿ ಸೂಚಿಸಿದ ಈ ಕೆಳಕಂಡ ನಿರ್ಣಯಗಳಿಗೆ ಸರ್ವಾನುಮತದಿಂದ ಅನುಮೋದನೆ ನೀಡಿತು.

1) ಸಾಮಾನ್ಯ ಸಭೆಯ ವಿಷಯ ಸೂಚಿ 4 ರಲ್ಲಿ ನಮೂದಿಸಿದಂತೆ ಮುಂದಿನ ವರ್ಷದ ಕಾರ್ಯಯೋಜನೆಯನ್ನು ಸರ್ವಾನುಮತದಿಂದ ಅನುಮೋದಿಸಲಾಯಿತು. ಈ ನಿರ್ಣಯವನ್ನು ಮಂಜುನಾಥ್ ಕಾರಂತ್‌ರವರು ಸೂಚಿಸಿದರು, ಪ್ರಕಾಶ್ ಹೆಚ್.ಎಸ್.ರವರು ಅನುಮೋದಿಸಿದರು.

2) 2019–20ನೇ ಸಾಲಿನ ಆಡಿಟ್ ಆದ ಲೆಕ್ಕ ಪತ್ರಗಳ ತಃಖ್ತೆ, ಲೆಕ್ಕ ಪರಿಶೋಧನಾ ವರದಿ ಮತ್ತು ಮಂಡಲಿಯ ಅನುಪಾಲನಾ ವರದಿಯನ್ನು ಪರಿಶೀಲಿಸಿ ಅಂಗೀಕರಿಸಲು ತೀರ್ಮಾನಿಸಲಾಯಿತ. ಈ ನಿರ್ಣಯವನ್ನು ಬಿ.ಎನ್.ಭಾಸ್ಕರ್‌ರವರು ಸೂಚಿಸಿದರು, ಟಿ.ಜಿ.ಸತೀಶ್‌ರವರು ಅನುಮೋದಿಸಿದರು.

3) 2019–20ನೇ ಸಾಲಿನಲ್ಲಿ ಆಯವ್ಯಯಕ್ಕಿಂತ ಹೆಚ್ಚುವರಿ ಆಗಿರುವ ಖರ್ಚನ್ನು ಅನುಮೋದಿಸಿ, 2020–21ನೇ ಸಾಲಿನ ಅಂದಾಜು ಆಯವ್ಯಯವನ್ನು ಮಂಜೂರು ಮಾಡಲಾಯಿತು. ಈ ನಿರ್ಣಯವನ್ನು ಸೋಮಶೇಖರ್ ಬಿ.ವಿ.ರವರು ಸೂಚಿಸಿದರು, ಬಿ.ಎನ್.ಭಾಸ್ಕರ್‌ರವರು ಅನುಮೋದಿಸಿದರು.

4) ವಿಷಯ ಸೂಚಿ 7ರಲ್ಲಿ ವಿವರಿಸಿದಂತೆ ನಿವ್ವಳ ಲಾಭದ ಹಂಚಿಕೆಯನ್ನು ಅನುಮೋದಿಸಲಾಯಿತು. ಈ ನಿರ್ಣಯವನ್ನು ಪ್ರಕಾಶ್ ಹೆಚ್.ಎಸ್.ರವರು ಸೂಚಿಸಿದರು, ಕೇಶವ ಮೂರ್ತಿ ಎಂ.ಆರ್.ರವರು ಅನುಮೋದಿಸಿದರು.

5) ಬ್ಯಾಂಕಿನ ಉಪವಿಧಿಗಳ ತಿದ್ದುಪಡಿಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಈ ನಿರ್ಣಯವನ್ನು ಶ್ರೀ.ಬಿ.ಹೆಚ್.ಲೋಕೇಶ್‌ರವರು ರವರು ಸೂಚಿಸಿದರು, ಶ್ರೀ. ಗೌರೀಶಂಕರ್‌ರವರು ಅನುಮೋದಿಸಿದರು.

6) 2020-21ನೇ ಸಾಲಿನ ಶಾಸನಬದ್ಧ ಲೆಕ್ಕಪರಿಶೋಧನೆಯನ್ನು ಮೆ॥ಎಸ್.ಎಲ್. ಪಾಟೀಲ್ ಅಂಡ್ ಕಂಪನಿ ಯವರಿಗೆ ವಹಿಸಲು ತೀರ್ಮಾನಿಸಲಾಯಿತು. ಈ ನಿರ್ಣಯವನ್ನು ಶ್ರೀ.ಬಿ.ಹೆಚ್.ಲೋಕೇಶ್‌ರವರು ರವರು ಸೂಚಿಸಿದರು, ಶ್ರೀ.ಗೌರೀಶಂಕರ್‌ರವರು ಅನುಮೋದಿಸಿದರು.

7) 2020-21ನೇ ಸಾಲಿನಲ್ಲಿಯೂ ರಾಜ್ಯ ಸಹಕಾರ ಸಂಘಗಳ ಕಾನೂನು, 1959 ಕಲಂ 58ರಲ್ಲಿ ನಮೂದಿಸಿದಂತೆ, ಬ್ಯಾಂಕಿನ ದುಡಿಯುವ ಬಂಡವಾಳದಲ್ಲಿ ಲಭ್ಯವಿರುವ ಹೆಚ್ಚುವರಿ ಮೊತ್ತ, ನಿಧಿಗಳನ್ನು ಭಾರತೀಯ ರಿಸರ್ವ್ ಬ್ಯಾಂಕಿನ ನಿಯಮಗಳಿಗೊಳಪಟ್ಟು, ವಾಣಿಜ್ಯ ಬ್ಯಾಂಕುಗಳಲ್ಲಿ ಸಾಲ ಪತ್ರಗಳಲ್ಲಿ, ಡೆಟ್‌ಫಂಡ್‌ಗಳಲ್ಲಿ, ನಾನ್ ಎಸ್‌ಎಲ್‌ಆರ್ ಪತ್ರಗಳಲ್ಲಿ ವಿನಿಯೋಜಿಸಲು ಆಡಳಿತ ಮಂಡಲಿಗೆ ಅಧಿಕಾರ ನೀಡಲಾಯಿತು. ಈ ನಿರ್ಣಯವನ್ನು ಮಂಜುನಾಥ್ ಕಾರಂತ್‌ರವರು ಸೂಚಿಸಿದರು, ರಮೇಶ್ ಎಸ್.ರವರು ಅನುಮೋದಿಸಿದರು.

8) ಬ್ಯಾಂಕಿನ ಸದಸ್ಯತ್ವಕ್ಕೆ ಸೇರ್ಪಡೆ ಮತ್ತು ತೆಗೆದು ಹಾಕಿರುವುದನ್ನು ಅನುಮೋದಿಸಲಾಯಿತು. ಈ ನಿರ್ಣಯವನ್ನು ಪ್ರಕಾಶ್ ಹೆಚ್.ಎಸ್.ರವರು ಸೂಚಿಸಿದರು, ಸೋಮಶೇಖರ್ ಬಿ.ವಿ.ರವರು ಅನುಮೋದಿಸಿದರು.

ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ.ಸುರೇಶ್ ಎಂ.ಜಿ.ರವರು ಆನ್‌ಲೈನ್ ಮೂಲಕ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿದ ಸದಸ್ಯರಿಗೆ, ಆಡಳಿತ ವರ್ಗದವರಿಗೆ, ಸಿಬ್ಬಂದಿ ವರ್ಗಕ್ಕೆ ಹಾಗು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಬ್ಯಾಂಕಿನ ಯಶಸ್ಸಿಗೆ ಕಾರಣರಾದ ಎಲ್ಲರಿಗೂ ಬ್ಯಾಂಕಿನ ಪರವಾಗಿ ವಂದನೆಗಳನ್ನು ಅರ್ಪಿಸಿದರು. ವರ್ಚ್ಯುಯಲ್ ಸಭೆಯ ಸಂಪೂರ್ಣ ಜವಾಬ್ದಾರಿ ಹೊತ್ತು ಯಾವುದೇ ಚ್ಯುತಿಬರದಂತೆ ಅಚ್ಚುಕಟ್ಟಾಗಿ ವರ್ಚ್ಯುಯಲ್ ಸಭೆಯನ್ನು ಯಶಸ್ವಿಯಾಗಲು ಸಹಕರಿಸಿದ ಮೆ॥ಸ್ಕೈ ಲೈನ್ ಕಂಪನಿಯವರಿಗೆ ಧನ್ಯವಾದಗಳನ್ನು ತಿಳಿಸಿದರು.

46ನೇ ವಾರ್ಷಿಕ ಸಾಮಾನ್ಯ ಸಭೆಯು ಮಧ್ಯಾಹ್ನ 2.00 ಘಂಟೆಗೆ ಅಧ್ಯಕ್ಷರು ಪಠಿಸಿದ ಶಾಂತಿ ಮಂತ್ರದೊಂದಿಗೆ ಮುಕ್ತಾಯವಾಯಿತು.

| | |
|---|---|
| ಸಹಿ/- | ಸಹಿ/- |
| ಮುಖ್ಯ ಕಾರ್ಯನಿರ್ವಹಣಾಧಿಕಾರಿ | ಅಧ್ಯಕ್ಷರು |

# ದಿ ನ್ಯಾಷನಲ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

**ಆಡಳಿತ ಕಛೇರಿ**: 73/1, ಗಾಂಧಿ ಬಜಾರ್ ಮುಖ್ಯ ರಸ್ತೆ, ಬೆಂಗಳೂರು – 560 004
ದೂರವಾಣಿ ಸಂಖ್ಯೆ. 22421999, 22420819, 26618092, 26618093
ಫ್ಯಾಕ್ಸ್: 26619950 ಇಮೇಲ್: admin.ao@ncbl.org.in

ಶ್ರೀಮತಿ.ರೂಪ ವಿ.ಎಸ್ : ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಶ್ರೀಮತಿ.ಮಾಲತಿ ಎಂ : ಉಪ ಪ್ರಧಾನ ವ್ಯವಸ್ಥಾಪಕರು

ಶ್ರೀ.ರಮೇಶ್.ಎಂ.ವಿ. : ಉಪ ಪ್ರಧಾನ ವ್ಯವಸ್ಥಾಪಕರು

ಶ್ರೀಮತಿ.ಸುಮಾ ಪಿ.ವಿ : ಸಹಾಯಕ ಪ್ರಧಾನ ವ್ಯವಸ್ಥಾಪಕರು

| ಕಛೇರಿ/ಶಾಖಾ ಮುಖ್ಯಸ್ಥರು | ಶಾಖೆ | ವಿಳಾಸ | ದೂರವಾಣಿ ಸಂಖ್ಯೆ |
|---|---|---|---|
| ಶ್ರೀಮತಿ.ರಮಾ.ಎಸ್.<br>ಮೊ: 7349784526 | ಗಾಂಧಿ ಬಜಾರ್ | ನಂ.73/1, ಗಾಂಧಿ ಬಜಾರ್<br>ಮುಖ್ಯ ರಸ್ತೆ,<br>ಬೆಂಗಳೂರು – 560 004 | 22421998<br>ಫ್ಯಾಕ್ಸ್: 26607778<br>gbz.br@ncbl.org.in |
| ಶ್ರೀ.ಕಿಶೋರ್ ನರಸಿಂಹ.ಎಸ್<br>ಮೊ: 8861004572 | ಜಯನಗರ | ನಂ.309/1, 9ನೇ ಮುಖ್ಯರಸ್ತೆ,<br>39ನೇ ಅಡ್ಡರಸ್ತೆ<br>ಜಯನಗರ 5ನೇ ಬಡಾವಣೆ,<br>ಬೆಂಗಳೂರು – 560 041 | 26650030/26650040<br>ಫ್ಯಾಕ್ಸ್:26650050<br>jnr.br@ncbl.org.in |
| ಶ್ರೀ.ಕಿರಣ್ ಕುಮಾರ್ ಎಮ್.ಎನ್<br>ಮೊ: 7349784527 | ಬನಶಂಕರಿ 2ನೇ ಹಂತ | ನಂ.1998, 9ನೇ ಮುಖ್ಯರಸ್ತೆ,<br>ಬನಶಂಕರಿ 2ನೇ ಹಂತ,<br>ಬೆಂಗಳೂರು – 560 070 | 26716612/26713062<br>ಫ್ಯಾಕ್ಸ್: 26713058<br>bsk2.br@ncbl.org.in |
| ಶ್ರೀಮತಿ.ವಾಣಿ ಎ.<br>ಮೊ: 9739789911 | ಕೋರಮಂಗಲ | ನಂ.6, ರಾಯಲ್ ಆರ್ಕೇಡ್ ಕಟ್ಟಡ<br>100 ಅಡಿ ರಸ್ತೆ,<br>ಕೋರಮಂಗಲ ಕೈಗಾರಿಕ ವಲಯ,<br>ಬೆಂಗಳೂರು – 560 095 | 25525279<br>ಫ್ಯಾಕ್ಸ್ ಸಹಿತ<br>kml.br@ncbl.org.in |
| ಶ್ರೀ.ಸುರೇಶ್ ಎಸ್.ಎನ್<br>ಮೊ:9901913718 | ಸದಾಶಿವನಗರ | ನಂ.5, 9ನೇ ಮುಖ್ಯರಸ್ತೆ,<br>ರಾಜಮಹಲ್ ವಿಲಾಸ್ ಬಡಾವಣೆ<br>(ಬಿ.ಡಿ.ಎ. ಮಾರುಕಟ್ಟೆ ಹತ್ತಿರ)<br>ಬೆಂಗಳೂರು – 560 080 | 23611508<br>ಫ್ಯಾಕ್ಸ್: 23611808<br>snr.br@ncbl.org.in |
| ಶ್ರೀ.ಪ್ರಶಾಂತ ಎನ್ ಹೆಗಡೆ<br>ಮೊ: 9901985936 | ಅಗ್ರಹಾರ ದಾಸರಹಳ್ಳಿ | ನಂ. 29, ಮಾಗಡಿ ಮುಖ್ಯ ರಸ್ತೆ,<br>ಎಂ.ಸಿ.ಲೇಔಟ್, ವಿಜಯನಗರ<br>ಬೆಂಗಳೂರು – 560 040 | 23307594<br>ಫ್ಯಾಕ್ಸ್: 23357594<br>adh.br@ncbl.org.in |
| ಶ್ರೀಮತಿ.ಮಂಜುಳ ಎಂ.<br>ಮೊ: 9739745533 | ಬನಶಂಕರಿ 3ನೇ ಹಂತ | ನಂ.649, 2ನೇ ಮುಖ್ಯರಸ್ತೆ<br>7ನೇ ಬ್ಲಾಕ್, ಶ್ರೀ ವಿದ್ಯಾನಗರ<br>ಬನಶಂಕರಿ 3ನೇ ಹಂತ<br>ಆಡೆನ್ ಶಾಲೆ ಹತ್ತಿರ<br>ಬೆಂಗಳೂರು – 560 085 | 26727196<br>ಫ್ಯಾಕ್ಸ್ 26729485<br>bsk3.br@ncbl.org.in |
| ಶ್ರೀ.ಶ್ರೀಧರ್ ಕೆ.ಎಸ್.<br>ಮೊ:9901985934 | ಎಲೆಕ್ಟ್ರಾನಿಕ್ ಸಿಟಿ | ನಂ.2 ಮತ್ತು 52, 1ನೇ ಮಹಡಿ<br>ಮುನಿರೆಡ್ಡಿ ಲೇಔಟ್, ಕೂಡ್ಲು ಗೇಟ್<br>ಹೊಸೂರು ಮುಖ್ಯರಸ್ತೆ<br>ಬೆಂಗಳೂರು – 560 068 | 25734477<br>ಫ್ಯಾಕ್ಸ್ ಸಹಿತ<br>ecity.br@ncbl.org.in |
| ಶ್ರೀ. ರವೀಂದ್ರ ಎ. ವಿ<br>ಮೊ:8861004569 | ಇಂದಿರಾನಗರ | ನಂ.449 ಮತ್ತು 450, 1ನೇ ಕ್ರಾಸ್<br>ಶ್ರೀ ಕೃಷ್ಣ ದೇವಸ್ಥಾನದ ರಸ್ತೆ<br>ಇಂದಿರಾನಗರ, ಬೆಂಗಳೂರು–560038 | 25214434<br>ಫ್ಯಾಕ್ಸ್ ಸಹಿತ<br>ind.br@ncbl.org.in |

| ಕಛೇರಿ/ಶಾಖಾ ಮುಖ್ಯಸ್ಥರು | ಶಾಖೆ | ವಿಳಾಸ | ದೂರವಾಣಿ ಸಂಖ್ಯೆ |
|---|---|---|---|
| ಶ್ರೀಮತಿ.ಕಾವೇರಿ ಬಿ.ಆರ್<br>ಮೊ:8861004570 | ಯಶವಂತಪುರ | ನಂ.14, 60 ಅಡಿ ರಸ್ತೆ<br>ಶಂಕರನಗರ, ಬೆಂಗಳೂರು– 560096 | 23470429<br>ಫ್ಯಾಕ್ಸ್ ಸಹಿತ<br>ypr.br@ncbl.org.in |
| ಶ್ರೀಮತಿ.ಹೇಮಮಾಲಿನಿ ಎಸ್.ಕೆ<br>ಮೊ:8861399722 | ರಾಜರಾಜೇಶ್ವರಿನಗರ | ನಂ.134, 4ನೇ ಫೇಸ್ ಬಿಇಎಂಎಲ್<br>4 ಮತ್ತು 5ನೇ ಹಂತ<br>ಕನಕದಾಸ ವೃತ್ತದ ಹತ್ತಿರ<br>ರಾಜರಾಜೇಶ್ವರಿನಗರ<br>ಬೆಂಗಳೂರು – 560098 | 28604311<br>ಫ್ಯಾಕ್ಸ್ ಸಹಿತ<br>rrn.br@ncbl.org.in |
| ಶ್ರೀ.ಪ್ರಸಾದ್ ಜಿ.<br>ಮೊ:8861711522 | ಬಾಣಸವಾಡಿ | 45/81, ಬಿ ಚೆನ್ನಸಂದ್ರ ಮುಖ್ಯರಸ್ತೆ<br>(ಎಸ್.ಆರ್.ಆರ್.ಕಲ್ಯಾಣ ಮಂಟಪದ ಪಕ್ಕ)<br>ಕಸ್ತೂರಿ ನಗರ<br>ಬೆಂಗಳೂರು – 560 043 | 25452772<br>ಫ್ಯಾಕ್ಸ್ ಸಹಿತ<br>bwd.br@ncbl.org.in |
| ಶ್ರೀ.ನಾರಾಯಣಸ್ವಾಮಿ.ಕೆ.ಎಸ್.<br>ಮೊ:8861668555 | ಮೈಸೂರು | ನಂ.1335, ಸಿ ಮತ್ತು ಡಿ ಬ್ಲಾಕ್<br>ಕುವೆಂಪು ನಗರ<br>ಮೈಸೂರು – 570 023 | 0821–2565666<br>ಫ್ಯಾಕ್ಸ್ ಸಹಿತ<br>kuv.br@ncbl.org.in |

## ADOPTION OF KNOW YOUR CUSTOMER(KYC) POLICY

As per the instruction of Reserve Bank of India Know Your Customer Policy and Anti Money Laundering, measures have been adopted by the Management. Compliance to instructions of Reserve Bank of India by the banks have become mandatory. Non-compliance with these guidelines / violation of KYC Norms attract penalties under the relevant provisions of the B.R.Act, 1949(AACS). Guidelines have been issued to branches for implementation of KYC norms. You are required to furnish relevant information/ documents like your Identity photograph, latest address, PAN No., Adhaar No. or other information called by the branch etc. The Banks are required to update these information **once in every two years.** You are therefore, required to furnish your latest photograph and address proof.

## SUBMISSION OF ADHAAR NUMBER

Members are requested to submit Adhaar Number and get it seeded to their respective operative Accounts.



ದಿನಾಂಕ 01–11–2020ರಂದು ನಡೆದ ಸಂಸ್ಥಾಪಕರಾದ
ದಿ॥ ವೈ.ವಿ. ಕೇಶವಮೂರ್ತಿರವರ ಕಂಚಿನ ಪುತ್ಥಳಿ
ಅನಾವರಣ



ದಿನಾಂಕ 11–12–2020ರಂದು ನಡೆದ ಸಿಬ್ಬಂದಿ ಮಕ್ಕಳ
ಪ್ರತಿಭಾ ಪುರಸ್ಕಾರ ಸಮಾರಂಭ



ದಿನಾಂಕ 12–12–2020ರಂದು ನಡೆದ
ಪ್ರತಿಭಾ ಪುರಸ್ಕಾರ ಸಮಾರಂಭ



ದಿನಾಂಕ 13–12–2020ರಂದು ನಡೆದ 46ನೇ ವರ್ಚ್ಯುಯಲ್
ಸಾಮಾನ್ಯ ಸಭೆಯ ಉದ್ಘಾಟನೆ



ದಿನಾಂಕ 13–12–2020ರಂದು ನಡೆದ
ಸರ್ವ ಸದಸ್ಯರ ಸಭೆ (ವರ್ಚ್ಯುಯಲ್ ಮೀಟಿಂಗ್)
ಸಂದರ್ಭ



ದಿನಾಂಕ 28–12–2020ರಂದು ನಡೆದ ಸ್ಥಳಾಂತರಿಸಿದ
ಅಗ್ರಹಾರ ದಾಸರಹಳ್ಳಿ ಶಾಖೆ ಪ್ರಾರಂಭೋತ್ಸವ



ದಿನಾಂಕ 25–02–2021ರಂದು ನಡೆದ ಸದಾಶಿವನಗರ
ಶಾಖೆಯ ನೂತನ ಕಟ್ಟಡದ ಶಂಕುಸ್ಥಾಪನೆ



ದಿನಾಂಕ 01–03–2021ರಂದು ನಡೆದ ಬ್ಯಾಂಕಿನ
45ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ಸಿಬ್ಬಂದಿಗಳಿಂದ
ನಗೆ–ನಾಟಕ



ದಿನಾಂಕ 5–03–2021ರಂದು ನಡೆದ ಜೆ.ಪಿ. ನಗರದ
ನೂತನ ಕಟ್ಟಡದ ಭೂಮಿ ಪೂಜಾ ಸಮಾರಂಭ




ದಿನಾಂಕ 11–06–2021ರಂದು ಬನಶಂಕರಿ 2ನೇ ಹಂತ ಶಾಖೆಯ
ನಗದು ಮರುಬಳಕೆ ಯಂತ್ರದ (Cash Recycler)
ಉದ್ಘಾಟನಾ ಸಮಾರಂಭ



ದಿನಾಂಕ 30–04–2021ರಂದು ಬ್ಯಾಂಕಿನ ಅಧ್ಯಕ್ಷರಿಂದ ನೂತನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾದ
ಶ್ರೀಮತಿ ವಿ. ಎಸ್. ರೂಪರವರು ಪ್ರಮಾಣ ವಚನ ಸ್ವೀಕರಿಸುತ್ತಿರುವುದು

# ಪ್ರಸಕ್ತ ಸಾಲಿನಲ್ಲಿ ವಯೋ ನಿವೃತ್ತಿ ಹೊಂದಿದ ಸಿಬ್ಬಂದಿಗಳು



**ಸುರೇಶ್ ಎಂ.ಜಿ**
ಮುಖ್ಯ ಕಾರ್ಯ ನಿರ್ವಾಹಕರು
30.04.2021



**ಶ್ರೀನಿವಾಸ ಕೆ.ಎಸ್**
ಉಪ ಪ್ರಧಾನ ವ್ಯವಸ್ಥಾಪಕರು
31.03.2021



**ಪಾರ್ಥಸಾರಥಿ ಎಸ್**
ಸಹಾಯಕ ವ್ಯವಸ್ಥಾಪಕರು
31.05.2021

## ಪ್ರಸಕ್ತ ಸಾಲಿನಲ್ಲಿ ನಿವೃತ್ತಿ ಹೊಂದಿದ ಸಿಬ್ಬಂದಿ



**ರಾಮರಾವ್ ಕೆ.ಜಿ**
ಹಿರಿಯ ಸಹಾಯಕರು
31.12.2020



**ಲಲಿತ ಎಂ.ಎಸ್**
ಕಿರಿಯ ಸಹಾಯಕರು
30.04.2021



**ವೆಂಕಟೇಶ್ ಎ.ಎಲ್**
ಅಟೆಂಡರ್

## ಭಾವಪೂರ್ಣ ಶ್ರದ್ಧಾಂಜಲಿ



**ಗಣೇಶ್ ಕೆ.ಎಸ್**
ಹಿರಿಯ ಸಹಾಯಕರು
ನಿಧನ : 29.05.2021



ದಿನಾಂಕ 11–06–2021ರಂದು ಬನಶಂಕರಿ 2ನೇ ಹಂತ ಶಾಖೆಯ
ನಗದು ಮರುಬಳಕೆ ಯಂತ್ರವನ್ನು (Cash Recycler)
ಮಾನ್ಯ ಕಂದಾಯ ಸಚಿವ ಶ್ರೀ ಆರ್. ಅಶೋಕ್ ಅವರು ಉದ್ಘಾಟಿಸುತ್ತಿರುವುದು.

To


**The National Co-operative Bank Limited**
# 73/1, Gandhibazar Main Road, Bengaluru -560 004
Phone : 26607778, 26619951, 26618093